UNIVERSAL LIBRARY
OU_198152
UNIVERSAL LIBRARY

# ವಿಮರ್ಶೆ

೧

ನಾಲ್ಕು ಲೇಖನಗಳು

ಮಾಸ್ತಿ ವೆಂಕಟೇಶ ಐಯಂಗಾರ್

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರೂ ಪುಸ್ತಕ ವ್ಯಾಪಾರಿಗಳು.
[illegible]
ಪುಸ್ತಕವ್ಯಾಪಾರಿಗಳು,
[illegible], ಬೆಂಗಳೂರು ಸಿಟಿ.

ಬೆಂಗಳೂರು ಸಿಟಿ:

ಬೆಂಗಳೂರು ಪ್ರೆಸ್, ಮೈಸೂರು ರೋಡ್

೧೯೩೫

*All rights reserved*] [ಬೆಲೆ ೧[illegible] ಆಣೆ

# ವಿಮರ್ಶೆ

# ವಿಷಯಸೂಚಿಕೆ

---


೧. ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ
೨. ವೈಷ್ಣವದಾಸರ ಕೀರ್ತನೆಗಳು
೩. ಸತೀಹಿತೈಷಿಣೀ ಗ್ರಂಥಮಾಲೆ
೪. ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು


---

# ಮುನ್ನುಡಿ.

ಈ ಪುಸ್ತಕದಲ್ಲಿರುವ ನಾಲ್ಕು ಲೇಖನಗಳು ಈ ಮೊದಲೇ ಆಗಾಗ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದವು. ಮೊದಲಲ್ಲಿರುವ ಕೃತಿವಿಮರ್ಶೆಯ ವಿಚಾರದ ಲೇಖನವನ್ನು ಈಗ ಒಂದೂವರೆ ವರ್ಷದ ಹಿಂದೆ ಕೆಲವರು ಪ್ರಬುದ್ಧ ಕರ್ಣಾಟಕದಲ್ಲಿ ನೋಡಿರಬಹುದು. ವೈಷ್ಣವದಾಸರನ್ನು ಕುರಿತ ಲೇಖನವು ಜಯಕರ್ನಾಟಕದಲ್ಲಿಯೂ ಲಾವಣಿಗಳನ್ನು ಕುರಿತ ಲೇಖನವು ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿಯೂ ಸುಮಾರು ಅದೇ ಕಾಲದಲ್ಲಿ ಪ್ರಕಟವಾದುವು. ಸತೀಹಿತೈಷಿಣೀ ಗ್ರಂಥಮಾಲೆಯನ್ನು ಕುರಿತ ವಿಮರ್ಶೆಯು ಇವೆಲ್ಲಕ್ಕಿಂತ ಹಳೆಯದು. ಅದನ್ನು ನಾನು ಬರೆದದ್ದು ಸುಮಾರು ಒಂಭತ್ತು ವರ್ಷದ ಹಿಂದೆ ; ಬರೆದ ಕೊಂಚ ದಿನದಲ್ಲೇ ಅದನ್ನು ಕನ್ನಡ ನಾಡಿನ ಅತ್ಯುತ್ತಮ ಪತ್ರಿಕೆಗಳಲ್ಲಿ ಒಂದಾಗಿದ್ದು ಈಗ ಕೆಲವು ವರ್ಷಗಳ ಹಿಂದೆ ನಿಂತುಹೋದ ಮಂಗಳೂರಿನ ಕೃಷ್ಣಸೂಕ್ತಿ ಪತ್ರಿಕೆಯು ಪ್ರಕಟಿಸಿತು. ಈ ಲೇಖನವನ್ನು ಕುರಿತು ಇಲ್ಲಿ ಇನ್ನೆರಡು ಮಾತನ್ನು ಹೇಳುವುದು ಯುಕ್ತವಾಗಿದೆ. ಸತೀಹಿತೈಷಿಣೀ ಮತ್ತು ಇನ್ನೂ ಇತರ ಗ್ರಂಥಮಾಲೆಗಳ ಕರ್ತ್ರಿಯವರಾದ ಶ್ರೀಮತಿ ತಿರುಮಲಾಂಬಾ ಅವರು ಅಸಾಧಾರಣವಾದ ದೇಶಸೇವೆಯನ್ನೂ ಭಾಷಾಸೇವೆಯನ್ನೂ ಮಾಡಿಯೂ ಮಾಡುತ್ತಲೂ ಇದಾರೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಗ್ರಂಥಕರ್ತ್ರಿಯವರ ವಿಷಯದಲ್ಲಿ ಆ ಗೌರವ ಇಲ್ಲದಿದ್ದರೆ ನಾನು ಆ ವಿಮರ್ಶೆಯನ್ನು ಬರೆಯುತ್ತಿರಲಿಲ್ಲ. ಆದರೆ ವಿಮರ್ಶೆಯಲ್ಲಿ ಒಂದೆರಡು ಕಡೆ ಮಾತುಗಳು ಸ್ವಲ್ಪ ಕಠಿನವಾದುವೆಂದು ಈಚೆಗೆ ನನಗೆ ತೋರಿದೆ. ನಮ್ಮಲ್ಲಿ ಇಂಗ್ಲೀಷನ್ನು ಕಲಿತು ಕನ್ನಡವನ್ನು ನೋಡುವವರು ಹೊಸದರಲ್ಲಿ ಇಂಗ್ಲೀಷಿನ ಉತ್ತಮ ಕೃತಿಗಳಿಗೆ ಸಮಾನವಾದ ಕೃತಿಗಳು ಕನ್ನಡದಲ್ಲಿ ಬರದೇ ಇದ್ದರೆ

ಬಹಳ ಅಸಮಾಧಾನಪಡುವೆವು. ಈ ರೀತಿಯ ಗುಣಮಾಪನದ ಆಶಯ ವೇನೋ ಉಚ್ಚವಾದದ್ದು. ಆದರೆ ಹೀಗೆ ಮಾಪನ ಮಾಡುವಲ್ಲಿ ಯಾವ ಭಾಷೆಯಲ್ಲಾಗಲಿ ಬಹು ಜನರು ಬರೆದು ಒರಹದ ಸಂಪ್ರದಾಯಗಳು ಏರ್ಪಟ್ಟಮೇಲೆ ಉತ್ತಮ ಕಾವ್ಯವು ಬಂದೀತಲ್ಲದೆ ಒಮ್ಮೆಗೆ ಬರಲಾರದು ಎಂಬುದನ್ನು ನಾವು ಮರೆತಂತಾಗುತ್ತದೆ. ಒಂಬತ್ತು ವರ್ಷದ ಹಿಂದೆ ಸತೀಹಿತೈಷಿಣೀ ಗ್ರಂಥಮಾಲೆಯನ್ನು ಕುರಿತು ವಿಮರ್ಶಿಸುವಲ್ಲಿ ಈ ಭಾವಕ್ಕೆ ನಾನು ಸಾಕಾದಷ್ಟು ಗಮನಕೊಡಲಿಲ್ಲ. ಅಲ್ಲದೆ ಆಗ್ಯೆ ನಾನು ಕನ್ನಡದಲ್ಲಿ ಒಂದೆರಡು ಪುಸ್ತಕಗಳನ್ನೂ ಬರೆದಿರಲಿಲ್ಲ. ಹೀಗೆಂದು ಮನಸ್ಸಿಗೆ ತೋರಿ ಈಗ ನಾನು ಆ ಉಪನ್ಯಾಸವನ್ನು ಈ ಪುಸ್ತಕದಲ್ಲಿ ಸೇರಿಸುವುದೇ ಬಿಡುವುದೇ ಎಂದು ಸ್ವಲ್ಪ ಯೋಚಿಸಿದೆನು. ಆದರೆ ಕೆಲವು ಕಡೆ ಮಾತು ಸ್ವಲ್ಪ ಕಠಿನವಾಗಿರುವುದಾದರೂ ನಾನು ನಮ್ಮ ಜನಕ್ಕೆ ಹೇಳಬೇಕಾದ ಒಂದೆರಡು ಮಾತನ್ನು ಆ ಲೇಖನದಲ್ಲಿ ಹೇಳಿದ್ದು ಅದರಲ್ಲಿಯ ಮುಖ್ಯ ಭಾವ ಯಾವುದನ್ನೂ ಈಗ ಬದಲಾಯಿಸುವ ಆವಶ್ಯಕತೆ ಇಲ್ಲದಿರುವುದರಿಂದಲೂ, ಈ ರೀತಿಯ ಉಪನ್ಯಾಸಗಳಲ್ಲಿ ಮೊದಮೊದಲಲ್ಲಿ ಬರೆದದ್ದಾದ್ದರಿಂದ ಅದನ್ನು ಓದುವುದರಲ್ಲಿ ಕೆಲವ ರಿಗೆ ಒಂದು ವಿಧವಾದ ಕುತೂಹಲ ಇರಬಹುದಾದದ್ದರಿಂದಲೂ, ಅದರ ರೀತಿಯಲ್ಲಿ ಏನಾದರೂ ದೋಷವಿರುವುದಾದರೆ ವಿಮರ್ಶೆಯ ವಿಷಯ ದಲ್ಲಿ ಈಚೆಗೆ ನಾನೇ ಹೇಳಿರುವ ಮಾತುಗಳಿಗೆ ಅದರಲ್ಲಿ ನಿದರ್ಶನ ಸಿಕ್ಕ ಬಹುದೆನ್ನುವ ಕಾರಣದಿಂದಲೂ, ಇಷ್ಟಲ್ಲದೆ ಆ ಲೇಖನವನ್ನು ಪ್ರಕಟಿ ಸಿದ್ದರಿಂದ ನನ್ನ ಅಭಿಪ್ರಾಯ ಹೀಗೆಂದು ಜನರಿಗೆ ಸೂಚಿಸುವುದಕ್ಕೆ ನಾನು ಒಂದು ಅವಕಾಶವನ್ನು ಏರ್ಪಡಿಸಿಕೊಂಡಹಾಗಾಯಿತಲ್ಲದೆ ಅದ ರಿಂದ ಗ್ರಂಥಕರ್ತ್ರಿಯವರಿಗೆ ಏನೂ ತೊಂದರೆಯಾಗದೆಂದು ಧೈರ್ಯ ವಿರುವುದರಿಂದಲೂ, ಆ ವಿಮರ್ಶೆಯಿಂದ ಗ್ರಂಥಕರ್ತ್ರಿಯವರಿಗೂ ಇತರ ಗ್ರಂಥಕರ್ತರಿಗೂ ಓದುವವರ ಪಕ್ಷಕ್ಕೆ ಸೇರಿದ ಕೆಲವು ಯೋಚ ನಾಂಶಗಳು ಸಿಕ್ಕತಕ್ಕ ಸಂಭವ ಇರುವುದರಿಂದಲೂ ಅದನ್ನು ಇಲ್ಲಿ ಸೇರಿಸಿದೇನೆ. ಕಠಿನವೆಂದು ತೋರಿದ ಒಂದು ಅರ್ಧ ಮಾತನ್ನು ಮಾರ್ಪಡಿ ಸಿದ್ದೇನೆ. ಮುಖ್ಯ ವಿಮರ್ಶಕನಿಗೆ ಗ್ರಂಥಕರ್ತರ ವಿಷಯದಲ್ಲಿ ಸೌಹಾರ್ದ

ಇದ್ದರೆ ಸರಿ. ಕನ್ನಡಕ್ಕಾಗಿ ಕೆಲಸಮಾಡುತ್ತಿರುವ ಯಾರ ವಿಷಯು ದಲ್ಲೂ ಸೌಹಾರ್ದ ಹೊರತು ಬೇರೆಯು ಭಾವಕ್ಕೆ ನನ್ನ ಮನಸ್ಸಿನಲ್ಲಿ ಸ್ಥಳವಿಲ್ಲ. ನಮ್ಮ ಸೀಮೆಯು ಇತರ ವಿದ್ಯಾವಂತರೂ ಶ್ರೀಮತಿ ತಿರುಮಲಾಂಬಾ ಅವರಂತೆ ತಾವು ಗ್ರಂಥಗಳನ್ನು ಬರೆಯುವ ಮೂಲ ಕವೂ ಇತರರಿಂದ ಅವುಗಳನ್ನು ಬರೆಯಿಸುವ ಮೂಲಕವೂ ತಮ್ಮ ಕೈಯುಲ್ಲಾದಷ್ಟು ಕೆಲಸವನ್ನು ಮಾಡಿ ದೇಶಸೇವೆ ಭಾಷಾಸೇವೆಗಳಲ್ಲಿ ಕೃತಕೃತ್ಯರಾಗಲೆಂಬುದು ನನ್ನ ಹಾರಯಿಕೆ. ಈ ಪುಸ್ತಕದಲ್ಲಿಯು ನಾಲ್ಕು ಲೇಖನಗಳಿಗೆ ತಮ್ಮ ಪತ್ರಿಕೆಗಳಲ್ಲಿ ಆದರದಿಂದ ಸ್ಥಾನವನ್ನು ಕೊಟ್ಟ ಆ ಎಲ್ಲ ಪತ್ರಿಕೆಗಳ ಕರ್ತರಿಗೆ ನಾನು ಇಲ್ಲಿ ವಂದನೆಯನ್ನು ಸೂಚಿಸಲಪೇಕ್ಷಿಸುತ್ತೇನೆ. ಲೇಖನಗಳನ್ನು ಇಲ್ಲಿ ಶೇಖರಿಸುವುದರಲ್ಲಿ ಭಾವವನ್ನು ವಿಶದಪಡಿಸುವುದಕ್ಕಾಗಿ ಅವುಗಳಲ್ಲಿ ಒಂದೆರಡುಕಡೆ ವಾಕ್ಯ ವೃಂದಗಳ ಕುಂದಣವನ್ನು ಸರಿಪಡಿಸಿದೆ.

ಬೆಂಗಳೂರು ಕ್ರೋಧನ ಸಂ॥
ಮಾರ್ಗಶಿರ ಬಹುಳ ಪಂಚಮಿ.

**ಮಾಸ್ತಿ ವೆಂಕಟೇಶ ಐಯಂಗಾರ್.**

# ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ.

ಈಗ ನಾವು ವಿಮರ್ಶೆಯೆಂದು ಕರೆಯುವ ರೀತಿಯ ಬರವಣಿಗೆ ನಮ್ಮಲ್ಲಿ ಇನ್ನೂ ಹೊಸದು; ಅದರ ಹೆಸರೂ ಹೊಸದು. ಎಂದರೆ ಹಿಂದೆ ನಮ್ಮಲ್ಲಿ ವಿಮರ್ಶೆ ಇರಲಿಲ್ಲವೆಂದಲ್ಲ. ವಿಮರ್ಶೆಯಿಲ್ಲದೆ ಸಾಹಿತ್ಯವು ಆಗುವುದೂ ಇಲ್ಲ; ಬೆಳೆಯುವುದೂ ಇಲ್ಲ; ಈ ವಿಚಾರವನ್ನು ಮುಂದೆ ಸ್ವಲ್ಪ ವಿವರವಾಗಿ ಚರ್ಚಿಸಿ ಇದೆ. ಆದರೆ ಸಾಹಿತ್ಯದ ರಚನೆಯಲ್ಲೂ ಅದಕ್ಕೆ ಕೇವಲ ಸಂಬಂಧವುಳ್ಳ ಲಕ್ಷಣದ ವಿಚಾರದಲ್ಲೂ ಎಷ್ಟೋ ಅಷ್ಟು ಹೊರತು ವಿಮರ್ಶೆಯನ್ನೇ ಬೇರೇ ಗ್ರಂಥವಾಗಿ ಬರೆಯುವ ವಾಡಿಕೆ ಪೂರ್ವದಲ್ಲಿ ನಮ್ಮಲ್ಲಿ ಇರಲಿಲ್ಲ. ಇದಕ್ಕೆ ಅನೇಕ ಕಾರಣಗಳಿದ್ದುವು. ಈ ರೀತಿಯ ವಿಮರ್ಶೆಯ ಲೇಖನವು ಕಾವ್ಯದ ರೂಪ ಲಕ್ಷಣಗಳನ್ನಲ್ಲದೆ ಕಾವ್ಯಗಳ ವಿಷಯಗಳನ್ನೂ ಚರ್ಚಿಸಬೇಕಾದ ಸಂದರ್ಭಗಳಿಂದ ಉಂಟಾಗತಕ್ಕದ್ದು. ಇಂಥ ಸಂದರ್ಭಗಳು ಹಿಂದೆ ನಮ್ಮ ದೇಶದ ಸಾಹಿತ್ಯದಲ್ಲಿ ಬಂದಂತೆ ತೋರುವುದಿಲ್ಲ. ಸಾಹಿತ್ಯವು ಉದ್ದೇಶ ಆಶಯಗಳಲ್ಲಿ ಬಹುಮುಖವಾದರೆ ಇಂಥ ವಿಮರ್ಶೆಯು ಆವಶ್ಯಕವಾಗುವುದು. ಎರಡು ಗುಂಪುಗಳಿದ್ದರೆ ಒಂದು ಗುಂಪಿನವರು ಇನ್ನೊಂದು ಗುಂಪಿನವರ ಸರಿ ತಪ್ಪನ್ನು ಹುಡುಕಬಹುದು; ಒಬ್ಬೊಬ್ಬರೂ ತಮ್ಮ ದಾರಿ ಸರಿ ಎಂದು ಹೇಳುವುದಕ್ಕೆ ಪ್ರಯತ್ನ ಪಡಬಹುದು. ಈ ರೀತಿಯ ಗುಂಪು ನಮ್ಮಲ್ಲಿ ವ್ಯವಹಾರದ ಜೀವನದ ವಿಷಯದಲ್ಲಾಗಲಿ ಸಾಹಿತ್ಯದ ವಿಷಯದಲ್ಲಾಗಲಿ ಆಗಲಿಲ್ಲ. ನಮ್ಮ ಜೀವನವನ್ನು ಅನುಸರಿಸಿ ನಮ್ಮ ಸಾಹಿತ್ಯವೂ ಹಿಂದೆ ಒಂದು ಧರ್ಮ ಒಂದು ನೀತಿ ಒಂದೇ ಉದ್ದೇಶವನ್ನು ಇರಿಸಿಕೊಂಡು ಮುಂದಕ್ಕೆ ನಡೆಯಿತು. ಹೀಗೆ ಎಲ್ಲರೂ ಒಪ್ಪಿದ್ದ ವಿಷಯಗಳನ್ನು ಚರ್ಚಿಸಬೇಕಾದದ್ದಿರಲಿಲ್ಲ. ಈ ಕಾರಣದಿಂದ ಮಾತ್ರವಲ್ಲದೆ ಸಾಹಿತ್ಯವು ಎಲ್ಲ

ರಿಗೂ ಒಂದೇ ರೀತಿಯಾಗಿ ತಿಳಿಯಬೇಕೆಂದು ಪ್ರಯತ್ನಪಟ್ಟರೂ ವಿಮರ್ಶೆಯು ಬೇಕಾಗುವುದು. ನಮ್ಮಲ್ಲಿ ಸಾಹಿತ್ಯದ ತಿರುಳೆಲ್ಲ ಪಂಡಿತರಿಗೆ ತಕ್ಕದ್ದೆಂದೂ ಪಾಮರರಿಗೆ ಅದರ ಮೇಲ್ಭಾಗವೂ ಅದರಿಂದ ಬರಬಹುದಾದ ನೀತಿಯೂ ತಿಳಿದರೆ ಸಾಕೆಂದೂ ಅಭಿಪ್ರಾಯವಿತ್ತು. ಇದು ಸರಿಯೆ ಎಂದು ನಾವು ಇಲ್ಲಿ ವಿಚಾರಮಾಡುವುದು ಪ್ರಕೃತವಲ್ಲ. ಮುಖ್ಯವಾಗಿ ಹೀಗೆ ಅಭಿಪ್ರಾಯವಿದ್ದದ್ದರಿಂದ ಸಾಹಿತ್ಯದ ವಿಚಾರವನ್ನು ಚೆನ್ನಾಗಿ ತಿಳಿಯಬೇಕೆಂದವರು ಗುರು ಸಾನ್ನಿಧ್ಯದಲ್ಲಿ ಸಾವಧಾನವಾಗಿ ಕಲಿತುಕೊಳ್ಳುತ್ತಿದ್ದರು; ಉಳಿದವರಿಗೆ ಆ ವಿಷಯಗಳನ್ನು ಅಷ್ಟು ವಿವರವಾಗಿ ತಿಳಿಸಬೇಕಾಗಿ ಇರಲಿಲ್ಲ. ಈ ಎರಡು ಕಾರಣಗಳಿಂದ ಅಲ್ಲದಿದ್ದರೂ ದುಷ್ಟ ಗ್ರಂಥಗಳನ್ನು ದಮನಮಾಡುವುದಕ್ಕೆ ವಿಮರ್ಶೆಯು ಬೇಕಾಗುವುದು. ನಮ್ಮಲ್ಲಿ ಹಿಂದೆ ದುಷ್ಟ ಗ್ರಂಥಗಳು ಪ್ರಚುರವಾಗುವುದಕ್ಕೆ ಅವಕಾಶವಿರಲಿಲ್ಲ. ಕವಿಯಾಗಬೇಕೆಂದವನು ತನ್ನ ಶಕ್ತಿಯನ್ನು ಸಭೆಗಳ ಮುಂದೆ ಸ್ಥಾಪಿಸಬೇಕಾಗಿತ್ತು. ತಿಳಿದವರ ಸಭೆಗಳು, ಅದರಲ್ಲೂ ಇತರ ಕವಿಗಳು ಇರುತ್ತಿದ್ದಂಥವು; ಇಂಥ ಸಭೆಗಳ ಮುಂದೆ ಬಹಳ ಒಳ್ಳೆಯ ಕಾವ್ಯವಲ್ಲದೆ ಯಾವುದೂ ಉಳಿಯುವ ಸಂಭವವಿರಲಿಲ್ಲ. ಇದಾದಮೇಲೆ ಇದು ಒಳ್ಳೆಯ ಗ್ರಂಥ, ಇದು ಅಲ್ಲ ಎಂದು ಹೇಳಬೇಕಾಗಿರಲಿಲ್ಲ. ಸ್ಪಾರ್ಟಾದೇಶದ ಜನರು ಅವರ ಪ್ರಸಿದ್ಧ ನಾಯಕನಾದ ಲಿಕರ್ಗಸನ ನಿಬಂಧಗಳನ್ನನುಸರಿಸಿ ದೇಶದಲ್ಲಿ ಹುಟ್ಟಿದ ದುರ್ಬಲ ಶಿಶುಗಳನ್ನೆಲ್ಲ ಹುಟ್ಟಿದ ಒಡನೆ ನಿರ್ಜನವಾದ ಗುಡ್ಡಗಳ ಮೇಲೆ ಬಿಟ್ಟು ಬರುತ್ತಿದ್ದರಂತೆ. ಇದರಿಂದ ಸ್ಪಾರ್ಟಾದೇಶದಲ್ಲಿ ಬಲಿಷ್ಠರಲ್ಲದ ಜನರೇ ಇರಲಿಲ್ಲ. ಇದರಂತೆ ಸಭೆಗಳ ವಿಚಕ್ಷಣತೆಯಿಂದ ನಮ್ಮ ಹಿಂದಣ ಸಾಹಿತ್ಯವೆಲ್ಲ ಪುಷ್ಟವಾದ ಗ್ರಂಥಗಳನ್ನು ಮಾತ್ರ ಒಳಕೊಳ್ಳಬಹುದಾಯಿತು. ಇದೇ ಕಾರಣದಿಂದ ವಿಮರ್ಶೆಯ ಮತ್ತೊಂದು ಕಾರ್ಯವೂ ಅನಾವಶ್ಯಕವಾಯಿತು. ಜನರಿಗೆ ಒಳ್ಳೆಯ ಗ್ರಂಥವನ್ನು ಪುರಸ್ಕರಿಸಬೇಕೆಂದೂ ಒಳ್ಳೆಯದಲ್ಲದ್ದನ್ನು ತಿರಸ್ಕರಿಸಬೇಕೆಂದೂ ರುಚಿಶುದ್ಧಿಯನ್ನು ಹೇಳಿಕೊಡಬೇಕಾಗಲಿಲ್ಲ. ಒಳ್ಳೆಯದಲ್ಲದ ಗ್ರಂಥಕ್ಕೆ ಉಳಿವೇ ಇಲ್ಲ; ಅಥವಾ ಉಳಿದ ಒಂದೆರಡು ಗ್ರಂಥಗಳು ಎಲ್ಲಿಯಾದರೂ ಮೂಲೆ

ಯಲ್ಲಿರುವುವು. ಓದುವವರು ಒಳ್ಳೆಯ ಪುಸ್ತಕವನ್ನು ಓದುವ ಸಂಭವವೇ ಹೆಚ್ಚು. ಉತ್ತಮ ಸಾಹಿತ್ಯದ ಅನವರತ ಪಠನದಿಂದ ಇನ್ನು ಯಾವ ಶಿಕ್ಷೆಯಿಂದಲೂ ಬಾರದ ರುಚಿಶುದ್ಧಿಯು ಬರುತ್ತದೆ. ಇದರ ಮೇಲೆ ರುಚಿಶುದ್ಧಿ ಇಲ್ಲದವರು ಕೆಲವರು ಒಳ್ಳೆಯದಲ್ಲದ ಗ್ರಂಥಗಳನ್ನು ಓದಬೇಕೆಂದರೂ ಮುದ್ರಾಶಾಲೆಯಿಲ್ಲದ್ದರಿಂದ ಪುಸ್ತಕಗಳು ಸಿಕ್ಕುವುದೇ ದುಸ್ತರ. ಗಂಟಿಯನ್ನು ಹಿಡಿದು ಓಲೆಯಲ್ಲಿ ಒಂದೊಂದು ಅಕ್ಷರವನ್ನೂ ತಿದ್ದಬೇಕಾದ ಕಾಲದಲ್ಲಿ ಬಹಳ ಒಳ್ಳೆಯ ಪುಸ್ತಕ ಮೂರು ನಾಲ್ಕನ್ನು ಪ್ರತಿಮಾಡಿಸಿಕೊಂಡವರೇ ಪುಣ್ಯವಂತರು. ಸಿಕ್ಕಿದ ಪುಸ್ತಕವನ್ನೆಲ್ಲಾ ಪ್ರತಿಮಾಡಿಕೊಡುವವರಾರು, ಮಾಡಿಸಿಕೊಳ್ಳುವವರು ಯಾರು? ಹೀಗೆ ಸಭೆಗಳ ನಿರ್ದಾಕ್ಷಿಣ್ಯವಾದ ತಿರಸ್ಕಾರದಿಂದಲೂ ಪ್ರತಿಗಳನ್ನು ಮಾಡುವುದರಲ್ಲಿ ಇದ್ದ ಕಷ್ಟಗಳಿಂದಲೂ ಒಳ್ಳೆಯ ಗ್ರಂಥಗಳು ಮಾತ್ರ ಪ್ರಾಚುರ್ಯಕ್ಕೆ ಬಂದು, ಜನರಲ್ಲಿ ಒಳ್ಳೆಯ ಗ್ರಂಥಗಳ ಸ್ವಾರಸ್ಯವನ್ನು ತಿಳಿಯುವ ಶಕ್ತಿಯು ಹಬ್ಬಿದ್ದದ್ದರಿಂದ ಅಸಾಧು ಪ್ರವೃತ್ತಿಗಳನ್ನು ತಿದ್ದುವುದಕ್ಕಾಗಿ ವಿಮರ್ಶೆಯು ಬೇಕಾಗಿರಲಿಲ್ಲ. ಈ ಕಾರಣಗಳಿಂದೆಲ್ಲ ಹಿಂದೆ ನಮ್ಮ ಸಾಹಿತ್ಯದಲ್ಲಿ ಕವಿಗೂ ಬೇಕಾದ ಲಕ್ಷಣ ಗ್ರಂಥಗಳ ವಿನಾ ಇತರ ರೀತಿಯ ಸಾಹಿತ್ಯ ವಿಮರ್ಶೆಯ ಗ್ರಂಥಗಳು ನಿರ್ಮಾಣವಾಗಲಿಲ್ಲ.

ಈಗ ಈ ಸ್ಥಿತಿಯೆಲ್ಲ ವ್ಯತ್ಯಾಸವಾಗಿದೆ. ಕ್ಷುದ್ರ ಕವಿಯು ಹಿಂದೆ ಸಭೆಗಳ ಎದುರಿಗೆ ನಿಲ್ಲಲಾರದೆ ಓಡುತ್ತಿದ್ದಂತೆ ಈಗ ಓಡಬೇಕಾದದ್ದಿಲ್ಲ. ಈಗ ಅಂಥ ಸಭೆಗಳೇ ಇಲ್ಲ. ಒಳ್ಳೆಯ ಕವಿಯಂತೆಯೇ ಅವನೂ ತನ್ನ ಗ್ರಂಥವನ್ನು ಮರೆಯಿಂದ ಜನರ ಮಧ್ಯಕ್ಕೆ ಎಸೆಯಬಹುದು, ಬೇಕಾದ ಹಾಗೆ ಅಚ್ಚುಹಾಕಿಸಿ ಹರಡಬಹುದು. ಹಿಂದೆ ಬರೆಯುತ್ತಿದ್ದಂಥ ಕ್ಷುದ್ರ ಕವಿ ಹಾಗಿರಲಿ. ಓಲೆಯುಗರಿಯಲ್ಲಿ ಬರೆಯುವುದಕ್ಕೆ ಸೋಮಾರಿತನದಿಂದ ಹಿಂದೆಗೆಯಬಹುದಾಗಿದ್ದಂಥವರೂ ಕೂಡ ಅನೇಕರು ಈಗ ಬರೆಯಬಹುದು. ಹಿಂದೆ ಒಬ್ಬನು ಕಲಿಯುತ್ತಿದ್ದ ಕಡೆ ಈಗ ನಲವತ್ತು ಜನ ಅಕ್ಷರವನ್ನು ಕಲಿಯುತ್ತಿದ್ದಾರೆ. ಇದರಿಂದ ಬರೆಯುವ ಜನರ ಸಂಖ್ಯೆಯೂ ಹೆಚ್ಚಿದೆ; ಬರೆಯುವ ಪುಸ್ತಕಗಳ ಸಂಖ್ಯೆಯೂ

ಹೆಚ್ಚಿದೆ; ಈ ಕಾರಣಗಳಿಂದ ಒಳ್ಳೆಯ ಪುಸ್ತಕ ಇದು, ಇದು ಒಳ್ಳೆಯ ದಲ್ಲ ಎಂದು ನಿರ್ಧರಿಸುವುದೇ ಪ್ರಯಾಸವಾಗಿದೆ. ಅಲ್ಲದೆ ನಮ್ಮ ಜೀವನವು ಬಹುಮುಖವಾದಂತೆ ನಮ್ಮ ಸಾಹಿತ್ಯದ ಭಾಗಗಳೂ ಬಹು ಮುಖವಾಗುತ್ತ ಬಂದಿವೆ. ಇವುಗಳನ್ನೆಲ್ಲ ಚರ್ಚೆಮಾಡಿ ಅವುಗಳ ಸಾಧುತ್ವವನ್ನು ನಿರ್ಧರಿಸುವುದು ಆವಶ್ಯಕವಾಗಿದೆ. ಅಲ್ಲದೆ ಒಳ್ಳೆಯ ಕಾವ್ಯದ ಅಭಿರುಚಿಯನ್ನು ಪೋಷಿಸುತ್ತಿದ್ದ ಸಂದರ್ಭಗಳು ಕಡಿಮೆ ಯಾದ ಹಾಗೆ ಜನರಲ್ಲಿ ರಸಾನುಭವದ ಶಕ್ತಿಯೇ ಕಡಿಮೆಯಾಗುತ್ತಿದೆ. ಒಳ್ಳೆಯ ಸಂಗೀತವನ್ನು ಮತ್ತೆ ಮತ್ತೆ ಕೇಳದೆ ಸಂಗೀತದ ರುಚಿಯು ನೇರವಾಗಿರುವುದಿಲ್ಲ; ಚಿತ್ರ ಸಾಹಿತ್ಯಗಳಲ್ಲಿಯೂ ಹೀಗೆಯೇ. ಆದರೆ ಈಗ ಸಾಮಾನ್ಯವಾಗಿ ಜನರು ಕೊಳ್ಳಬಹುದಾದ ಪುಸ್ತಕಗಳಲ್ಲಿ ಹತ್ತರಲ್ಲಿ ಒಂದು ಒಳ್ಳೆಯದಿರಬಹುದೋ ಇಲ್ಲವೋ ಸಂದೇಹಪಡ ಬಹುದಾಗಿದೆ. ಇದರಿಂದ ಜನರ ಅಭಿರುಚಿಯನ್ನು ಶುದ್ಧವಾಗಿರಿಸಲು ಪ್ರಬಲವಾದ ಪ್ರಯತ್ನವನ್ನು ಮಾಡುವುದು ಆವಶ್ಯಕವಾಗಿದೆ. ಇವೆಲ್ಲ ಕಾರಣಗಳಿಂದ ನಮ್ಮ ಸಾಹಿತ್ಯದಲ್ಲಿ ವಿಮರ್ಶೆಯು ಈಗ ವ್ಯಕ್ತಸ್ವರೂಪ ವನ್ನು ಹೊಂದಬೇಕಾಗಿದೆ. ವಿಮರ್ಶೆಯನ್ನೂ ಸಾಹಿತ್ಯದ ಇತರ ಕಾವ್ಯರೂಪಗಳಂತೆ ಯತ್ನಪೂರ್ವಕವಾಗಿ ಪ್ರಚುರಗೊಳಿಸಬೇಕಾಗಿದೆ.

ಎಂದರೆ, ಹಿಂದೆ ಇದ್ದದ್ದು ಒಳ್ಳೆಯದೆಂದೂ ಈಗ ಇರುವ ಸ್ಥಿತಿ ಕೆಟ್ಟದ್ದೆಂದೂ ನನ್ನ ಅಭಿಪ್ರಾಯವಲ್ಲ. ಗ್ರಂಥ ರಚನೆಯ ಮೊದಲನೆಯ ಪಾಠವನ್ನೇ ಅರಿಯದ ಗ್ರಂಥಕಾರರು ನಿರ್ಮಿಸಿರುವ ಕೇವಲ ಶುಷ್ಕ ವಾದ ಪುಸ್ತಕಗಳನ್ನು ನೋಡಿದ ಕ್ಷಣದಲ್ಲಿ ಪ್ರಾಜ್ಞರಾದ ಯಾರಾದರೂ ಕಾಲ ಹೀಗಾಯಿತಲ್ಲ ಎಂದುಕೊಳ್ಳಬಹುದು. ಆದರೆ ಇಂತಹ ಬೇಸ ರವು ಅನಾವಶ್ಯಕ. ತಿಳಿವು ಪ್ರಪಂಚಕ್ಕೆಲ್ಲಾ ಹರಡಲೆಂಬುದೇ ನಮ್ಮೆ ಲ್ಲರ ಆಸೆ. ತಿಳಿವು ಪ್ರಪಂಚಕ್ಕೆಲ್ಲಾ ಹರಡಬೇಕಾದರೆ ಎಷ್ಟು ಜನ ಕೆಲಸಮಾಡಿದರೆ ಸಾಕಾಗಬಹುದು? ಈಗ ಪುಸ್ತಕಗಳನ್ನು ಬರೆಯುವ ವರೆಲ್ಲಾ ಒಂದೇ ರೀತಿಯಾಗಿ ಒಳ್ಳೆಯ ಗ್ರಂಥಗಳನ್ನು ಬರೆದರೂ ಮನುಷ್ಯವರ್ಗಕ್ಕೆಲ್ಲ ತಿಳಿವನ್ನು ಹರಡಲಾರರು. ಮುಂದೆ ಸಾಕಾದಷ್ಟು ಜನರೆಲ್ಲರೂ ಒಳ್ಳೆಯ ಪುಸ್ತಕವನ್ನೇ ಬರೆಯುವಂತೆ ಆಗಬೇಕು;

ಹಾಗೆ ಬರೆಯುವುದು ಈಗಳಿಂದ ಜನರಲ್ಲಿ ಅಭ್ಯಾಸವಾಗಬೇಕು. ನಮ್ಮ ಸದ್ಯದ ಅವಸ್ಥೆಯು ಈ ಅಭ್ಯಾಸದ ಅವಸ್ಥೆ. ಮುಂದಣ ಸಾಹಿತ್ಯ ರಾಜ್ಯದ ವ್ಯವಸ್ಥೆಗೆ ಈಗಣ ಅನಾಯಕತ್ವವು ಒಂದು ಮಜಲು. ಆದ್ದರಿಂದ ಈಗಣ ಅವಸ್ಥೆಯ ವಿಷಯದಲ್ಲಿ ನಾವು ಬಹಳ ಬೇಸರಪಡಬಾರದು; ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಸಾಹಿತ್ಯದ ಸ್ವರೂಪವನ್ನೂ ಲಕ್ಷಣವನ್ನೂ ಜನರಿಗೆ ತಿಳಿಯುವಂತೆ ಮಾಡಿ ಒಳ್ಳೆಯ ಗ್ರಂಥಗಳ ರಚನೆಯು ಕವಿಗೂ ಅವುಗಳ ಪಠನವು ಜನರಿಗೂ ಸುಲಭವಾಗುವಂತೆ ಮಾಡಬೇಕು. ಇದಕ್ಕೆ ವಿಮರ್ಶೆಯನ್ನು ಅಭಿವೃದ್ಧಿಗೆ ತರಬೇಕು. ಆದ್ದರಿಂದ ಈ ಉಪನ್ಯಾಸದಲ್ಲಿ ವಿಮರ್ಶೆಯ ಸ್ವರೂಪವನ್ನು ಸ್ವಲ್ಪಮಟ್ಟಿಗೆ ವಿಚಾರಮಾಡಿ ಅದು ಈಗ ಕೈಗೊಳ್ಳಬೇಕಾಗಿರುವ ಕಾರ್ಯಯಾವುದೆಂಬುದನ್ನು ಸಂಕ್ಷೇಪವಾಗಿ ಸೂಚಿಸಿದೆ.

೨

ವಿಮರ್ಶೆಯ ಕಾರ್ಯ ಯಾವುದು ಎಂಬುದನ್ನು ಸ್ವಲ್ಪಮಟ್ಟಿಗೆ ಮೇಲೆ ಸೂಚಿಸಿ ಇದೆ. ಒಂದು ಕಾವ್ಯವನ್ನು ಸ್ವೀಕರಿಸುವುದೇ ತ್ಯಜಿಸುವುದೇ ಎಂದು ನಿರ್ಧರಿಸುವುದು ಅದರ ಕಾರ್ಯದಲ್ಲಿ ಸೇರಿದ್ದು; ಸರಿಯಾದ ಕಾವ್ಯದಲ್ಲಿ ರುಚಿಯನ್ನು ಉಂಟುಮಾಡುವುದೂ ಹೀಗೆಯೇ; ಕಾವ್ಯ ಹೀಗಿರಬೇಕು ಹಾಗಿರಬೇಕು ಎನ್ನುವುದೂ ಆ ಕಾರ್ಯದಲ್ಲಿ ಸೇರಿದ್ದೇ. ಆದರೆ ಇದೆಲ್ಲ ವಿಮರ್ಶೆಯು ಧರಿಸುವ ಆಕಾರಗಳೇ ಹೊರತು ಕೇವಲ ವಿಮರ್ಶೆಯ ಸಮಸ್ತವಲ್ಲ. ಹಾಗಾದರೆ ವಿಮರ್ಶೆಯ ಸಮಸ್ತವು ಯಾವುದೆನ್ನಬಹುದು. ಇದನ್ನು ತಿಳಿಯಬೇಕಾದರೆ ವಿಮರ್ಶೆಯ ಮೂಲ ಯಾವುದೆಂದು ವಿಚಾರಮಾಡಬೇಕು. ಅದನ್ನು ಕುರಿತು ಇಲ್ಲಿ ಸ್ವಲ್ಪ ವಿಚಾರ ಮಾಡೋಣ.

ವಿಮರ್ಶೆಯ ಮೂಲ ಯಾವುದು? ಕಾವ್ಯದ ಮೂಲವೇ ವಿಮರ್ಶೆಯ ಮೂಲ. ಸಹಜವಾದ ಭಾವವ್ಯಂಜನವೆಲ್ಲ ಸಹಜವಾದ ಒಂದು ನಿಯಮವನ್ನು ಅನುಸರಿಸಿ ನಡೆಯುತ್ತದೆ. ಭಾವವ್ಯಂಜನವೇ ಕಾವ್ಯದ ಹೃದಯ; ಅದು ಸ್ವಭಾವವಾಗಿ ಅನುಸರಿಸುವ ನಿಯಮವೇ ವಿಮರ್ಶೆಯ ಹೃದಯ. ಆದ್ದರಿಂದ ಕಾವ್ಯಕ್ಕೂ ವಿಮರ್ಶೆಗೂ ಕವಿಯ

ಆವೇಶವೇ ಮೂಲ. ಆವೇಶದ ಅಧೀನದಲ್ಲಿರುವ ಮನುಷ್ಯನಿಗೆ ಹೇಳುವ ವಿಷಯ ಬರುವಂತೆ ಹೇಳುವ ರೀತಿಯೂ ಬರುವುದು. ಉತ್ತಮವಾದ ಸಂಸ್ಕಾರದಿಂದ ಬರುವ ಉತ್ತಮ ಕಾವ್ಯದಲ್ಲಿ ಹೇಳುವ ರೀತಿಯನ್ನು ಕುರಿತು ಕವಿಯು ಯೋಚಿಸಬೇಕಾದದ್ದಿಲ್ಲ. ನೋವಾದಾಗ ಕ್ಲೋರೋಫಾರಮ್ಮಿನಲ್ಲಿರುವ ಜೀವಿಯೂ ಅಯ್ಯೋ ಎನ್ನುವುದು. ಸಾಮಾನ್ಯ ಜೀವಿಗೆ ಈ ಸರಳಭಾವವು ಹೇಗೋ ಹಾಗೆ ಉನ್ನತ ಜೀವಿಗಳಿಗೆ ಆವೇಶದಲ್ಲಿ ಎಂತೆಂಥ ಗಹನಭಾವಗಳೂ ಸ್ವಚ್ಛವಾಗುವುವು, ಸುಲಭವಾಗಿ ಹೇಳಲು ಬಾಯಿಗೆ ಬರುವುವು. ಹೇಳುವ ರೀತಿಯನ್ನು ಕುರಿತು ಯೋಚನೆಯೇ ಇಲ್ಲವಾದ್ದರಿಂದ ಇಲ್ಲಿ ವಿಮರ್ಶೆಯು ಬೇರೆಯಾಗಿ ಇಲ್ಲ. ವೈಣಿಕ ಶಿಖಾಮಣಿಗಳು ವೀಣೆಯನ್ನು ನುಡಿಸುವಾಗ ಕುಳಿತು ಕೇಳಿದವರು ಒಂದು ವಿಷಯವನ್ನು ಯಾವಾಗಲಾದರೂ ನೋಡಿರಬಹುದು. ರಾಗದ ಕೇಂದ್ರದಲ್ಲಿ ನಾವು ಅತ್ಯಾಶ್ಚರ್ಯ ಆತ್ಯಾನಂದದಲ್ಲಿರುವಾಗ ಯಾವುದೋ ಒಂದು ಸ್ವರರೇಣು ಸ್ವರ್ಗವನ್ನು ಮುಟ್ಟಲು ನಾವು ಭೇಷ್ ಎನ್ನುವ ಮೊದಲು ವೈಣಿಕರೇ ಭೇಷ್ ಎನ್ನುವರು. ತಿಳಿವಿಲ್ಲದ ಜನರು ಇದನ್ನು ನೋಡಿ ಇದೇನು ತಮ್ಮ ಬುದ್ಧಿಯನ್ನು ತಾವೇ ಹೊಗಳಿಕೊಳ್ಳುತ್ತಾರೆ ಎಂದುಕೊಳ್ಳಬಹುದು; ಕಲೆಯ ವಿಷಯವನ್ನು ತಿಳಿದವರು ಹೀಗೆಂದುಕೊಳ್ಳುವುದಿಲ್ಲ. ಆ ಸಮಯದಲ್ಲಿ ವೀಣೆಯನ್ನು ನುಡಿಸುವ ವೈಣಿಕನು ಬೇರೆ, ಶ್ಲಾಘಿಸುವ ವೈಣಿಕನು ಬೇರೆ; ಈ ವೈಣಿಕಾಂಶಗಳು ಎರಡೂ ವೈಣಿಕ ಶಿಖಾಮಣಿಯಲ್ಲಿ ಸೇರಿವೆ. ಶ್ಲಾಘನೆ ಮಾಡುವ ವೈಣಿಕಾಂಶವು ಆವೇಶದ ವಿಷಯವನ್ನು ಅಲ್ಲಿಯ ಎಲ್ಲರಿಗಿಂತ ಚೆನ್ನಾಗಿ ತಿಳಿದ ಸಭಿಕನಂತೆ ಮಾತ್ರ. ಆ ವೀಣೆ ಬಾರಿಸುವುದರಲ್ಲಿರುವ ಸುಖವನ್ನು ಇತರ ಎಲ್ಲರಿಗಿಂತ ಚೆನ್ನಾಗಿ ಅನುಭವಿಸಿ ಈ ಸಭಿಕನು ಇನ್ನು ಯಾರಾದರೂ ಹೇಳಬಹುದಾಗಿದ್ದಂತೆ ಉತ್ಸಾಹದಿಂದ ಭೇಷ್ ಎಂದು ಹೇಳುತ್ತಾನೆ. ನುಡಿಸುವ ಶಕ್ತಿ ಕಲಾ ಅಂಶ, ಈ ಶ್ಲಾಘನ ಶಕ್ತಿ ವಿಮರ್ಶೆಯದು. ಹೀಗೆ ಉನ್ನತಾವೇಶದಲ್ಲೆಲ್ಲ ನಿರ್ಮಾಣ ಶಕ್ತಿಯೊಡನೆ ವಿಮರ್ಶನಶಕ್ತಿಯೂ ಲೀನವಾಗಿರುತ್ತದೆ. ಆವೇಶದ ಔನ್ನತ್ಯದಲ್ಲಿಯೂ ವಿಮರ್ಶೆಯು ಸೇರಿಯೇ ಇದೆ

ಎಂದಮೇಲೆ ಆವೇಶದ ಇತರ ಮಟ್ಟಗಳಲ್ಲಿ ಅದು ಸೇರಿದೆ ಎಂಬು ದನ್ನು ಹೇಳಬೇಕಾದದ್ದಿಲ್ಲ. ವಿಮರ್ಶೆ ಇರಲೇ ಆರದೋ ಏನೋ ಎಂದು ಸಂದೇಹವನ್ನು ಉಂಟುಮಾಡಬಹುದಾದ ಔನ್ನತ್ಯದಲ್ಲಿಯೂ ಇರುವ ಈ ಶಕ್ತಿಯು ಆವೇಶದ ತಗ್ಗಿನ ಸ್ಥಳಗಳಲ್ಲಿ ಹೆಚ್ಚುಹೆಚ್ಚು ಪ್ರಾಬಲ್ಯವನ್ನು ಹೊಂದುತ್ತದೆ; ಇಲ್ಲಿ ಭಾವವನ್ನು ಹೊರಪಡಿಸುವುದರಲ್ಲಿ ಕವಿಯು ಭಾವವನ್ನು ಮಾತ್ರ ಅಲ್ಲದೆ ಅದು ವ್ಯಕ್ತವಾಗುವ ರೀತಿ ಯನ್ನು ಕುರಿತು ಹೆಚ್ಚಾಗಿ ಯೋಚಿಸುತ್ತಾನೆ. ಕಾವ್ಯವು ಒಳ್ಳೆಯು ದಾಗಬೇಕೆಂದು ಅವನಿಗೆ ಆಸೆ ಇರುತ್ತದೆ; ಭಾವವು ಸರಿಯಾದುದಾಗಿರ ಬೇಕು, ಅದು ಸರಿಯಾದ ರೀತಿಯಲ್ಲಿ ವ್ಯಕ್ತವಾಗಬೇಕು ಎಂದು ಅವನು ಅಪೇಕ್ಷಿಸುತ್ತಾನೆ. ಅದು ಹಾಗಾಗಲೆಂದು ಅವನು ತನ್ನ ಕೈಯಲ್ಲಾ ದುದನ್ನು ಮಾಡುತ್ತಾನೆ. ಇದಕ್ಕೆಲ್ಲ ಅವನು ಮಾಡುವ ಯೋಚನೆಯು ವಿಮರ್ಶೆಗೆ ಸೇರಿದ್ದು. ಬರೆಯುವುದರಲ್ಲಿ ಅವನು ಕವಿ ಹೇಗೆಯೋ ಹಾಗೆ ಬರೆಯುವ ರೀತಿ ಪದ್ಧತಿ ಮೊದಲಾದವನ್ನು ಕುರಿತ ಯೋಚನೆ ಯಲ್ಲಿ ವಿಮರ್ಶಕನು. ಅವನು ಕಾವ್ಯವನ್ನು ಬರೆದಮೇಲೆ ಅದನ್ನು ಓದಿ ಅನುಭವಿಸುತ್ತಾನೆ; ತನ್ನ ಉದ್ದೇಶವು ನೆರವೇರಿತೇ ಎಂದು ನೋಡುತ್ತಾನೆ; ಇದರಲ್ಲಿ ಅವನು ವಿಮರ್ಶಕನು. ನೋಡಿದಮೇಲೆ ಇದು ಚೆನ್ನಾಯಿತು, ಇಲ್ಲಿ ಚೆನ್ನಾಗಿ ಬರಲಿಲ್ಲ ಎಂದು ತೃಪ್ತನೋ ಅತೃಪ್ತನೋ ಆಗಬಹುದು; ಇದರಲ್ಲಿಯೂ ಅವನು ವಿಮರ್ಶಕನೇ. ಎಂದರೆ ವಿಮರ್ಶೆ ಎಂಬುದು ಕವಿಯಲ್ಲಿಯೇ ಇರತಕ್ಕ ಒಂದು ಲಕ್ಷಣ. ಉನ್ನತಾವೇಶದಲ್ಲಿ ಅದು ಲೀನವಾಗಿ ಹೋಗಿರುತ್ತದೆ; ಆವೇಶದ ತಗ್ಗುಗಳಲ್ಲಿ ಪ್ರತ್ಯೇಕವಾಗಿ ಕಾಣುತ್ತದೆ. ಅಂತೂ ಎತ್ತರದಲ್ಲಾದರೂ ತಗ್ಗಿನಲ್ಲಾದರೂ ಆವೇಶದೊಂದಿಗೆ ತಪ್ಪದೆ ಇರುತ್ತದೆ. ವಿಮರ್ಶೆ ಇಲ್ಲದೆ ಕಾವ್ಯ ರಚನೆ ಆಗುವುದಿಲ್ಲ.

ಕವಿಯಲ್ಲಿರುವ ಈ ವಿಮರ್ಶನಶಕ್ತಿಯು ಯಾವ ಯಾವ ಕೆಲಸ ವನ್ನು ಮಾಡಬೇಕಾಗುತ್ತದೆ? ಅದರ ಮೊದಲ ಕಾರ್ಯವು ಭಾವದ ವ್ಯಂಜನವನ್ನು ಕುರಿತದ್ದಲ್ಲ; ಭಾವವನ್ನೇ ಕುರಿತದ್ದು. ಅದು ಭಾವ ವನ್ನು ಗ್ರಹಿಸಿ ಅದು ವ್ಯಕ್ತವಾಗುವ ದಾರಿಯನ್ನು ಹುಡುಕುವುದು.

ಎಂದರೆ ಅದು ಮೊದಲು ಭಾವವನ್ನು ಗ್ರಹಿಸುವುದು ; ಗ್ರಹಿಸಿದ ಮೇಲೆ ಭಾವವನ್ನು ಪರೀಕ್ಷಿಸುವುದು. ಆಮೇಲೆ ಅದರಲ್ಲಿ ಎಷ್ಟನ್ನು ಇರಿಸಿಕೊಳ್ಳುವುದು ಎಂದು ನೋಡುವುದು ; ಅದನ್ನು ಹೇಗೆ ಹೇಳುವುದು ಎಂದು ನೋಡುವುದು. ಹೀಗೆ ಮೊದಲು ಭಾವವನ್ನೂ ಆಮೇಲೆ ಅದನ್ನು ವ್ಯಕ್ತಗೊಳಿಸುವ ದಾರಿಯನ್ನೂ ನೋಡುವುದೇ ಈ ವಿಮರ್ಶೆಯು ಮಾಡಬೇಕಾಗಿರುವ ಕೆಲಸ. ಉನ್ನತಾವೇಶದಲ್ಲಿ ಪರೋಕ್ಷವಾಗಿ ವರ್ತಿಸುವಾಗಲೂ, ಅದು ಮಾಡುವ ಕೆಲಸ ಇದು. ಅದು ಈ ಕೆಲಸವನ್ನು ಎಷ್ಟು ಚೆನ್ನಾಗಿ ಮಾಡಿದರೆ ಕಾವ್ಯವು ಅಷ್ಟು ಚೆನ್ನವಾಗುವುದು. ಆವೇಶಸಾಮಗ್ರಿ ಒಂದೇ ಆಗಿದ್ದು ವಿಮರ್ಶನ ಶಕ್ತಿಯಲ್ಲಿ ವ್ಯತ್ಯಾಸವಿರುವ ಇಬ್ಬರು ಕವಿಗಳು ಒಂದೇ ವಿಷಯವನ್ನು ಕುರಿತು ಬರೆದರೆ ಗ್ರಂಥವು ಎರಡು ವಿಧವಾಗುವುದು. ವಿಮರ್ಶೆಯು ಹೆಚ್ಚಾಗಿದ್ದವನ ಗ್ರಂಥವು ಇತರನ ಗ್ರಂಥಕ್ಕಿಂತ ಉತ್ತಮವಾಗಿ ಓದುವವರಲ್ಲಿ ಹೆಚ್ಚಿನ ಸಂಸ್ಕಾರವನ್ನು ಉಂಟುಮಾಡುವುದು.

೩

ಕಾವ್ಯವನ್ನು ಓದುವವನಲ್ಲಿಯೂ ವಿಮರ್ಶೆಯಿಂದ ಆಗಬೇಕಾದ ಕಾರ್ಯ ಇದೇ. ಕಾವ್ಯದಿಂದ ಬರಬೇಕಾದ ಸಂಪೂರ್ಣ ಸಂಸ್ಕಾರವು ಓದುವವನಿಗೆ ಬರುವಂತೆ ಮಾಡತಕ್ಕದ್ದು ವಿಮರ್ಶಕನ ಕಾರ್ಯದ ಮುಖ್ಯಾಂಶ. ಹೀಗೆ ಮಾಡುವುದಕ್ಕೆ ಉತ್ತಮವರ್ಗದ ಕಾವ್ಯವನ್ನು ವಿಮರ್ಶಿಸುವ ವಿಮರ್ಶಕನು ಮೊದಲು ಒಂದು ಪ್ರಯತ್ನದಲ್ಲಿ ತೊಡಗಬೇಕು ; ಎಷ್ಟು ಸಾಧ್ಯವಾದರೆ ಅಷ್ಟು ಊಹೆಯನ್ನೂ ವೆಚ್ಚಮಾಡಿ ಅವನು ಕವಿಯ ಅವಸ್ಥೆಯನ್ನು ತನ್ನ ಅಂತರ್ಯದಲ್ಲಿ ಅನುಭವಿಸುವುದಕ್ಕೆ ಯತ್ನಮಾಡಬೇಕು. ಇದರಿಂದ ಅವನಿಗೆ ಕಾವ್ಯದ ಆಶಯವು ತಿಳಿಯುವುದು ; ಇದು ಅವನು ಏರಬೇಕಾದ ಮೊದಲ ಸೋಪಾನ. ಆಮೇಲೆ ಇಷ್ಟವಿದ್ದರೆ ಅವನು ಕವಿಯ ಭಾವವನ್ನು ವಿವರಿಸುವುದಕ್ಕೆ ಯತ್ನಮಾಡಬಹುದು. ಇದು ಅವನು ಏರಬೇಕಾದ ಎರಡನೆಯ ಸೋಪಾನ. ಕಾವ್ಯವು ಇಷ್ಟು ಉತ್ತಮವಾದುದಲ್ಲವಾದರೂ ವಿಮರ್ಶೆಯ ಮೊದಲ ಕಾರ್ಯವು ಅದರ ಆಶಯವನ್ನು ಊಹೆಯಿಂದ ಗ್ರಹಿಸತಕ್ಕದ್ದೇ.

ಇದಾದಮೇಲೆ ಅದರಲ್ಲಿ ತಪ್ಪುಸೆಪ್ಪು ಕಾಣಬಹುದು. ಹೀಗಿದ್ದರೆ ಕಾವ್ಯದ ಆಶಯವನ್ನು ತಿಳಿಸುವುದರಲ್ಲಿ ಇಂತಹ ಸಂದರ್ಭದಲ್ಲಿ ವಿಮರ್ಶಕನು ಆ ತಪ್ಪುಸೆಪ್ಪನ್ನೂ ಹೇಳಬಹುದು; ಅನೇಕ ವೇಳೆ ಅವನು ಅದನ್ನೂ ಹೇಳಬೇಕಾಗುವುದು. ಹೀಗೆ ಮಾಡುವುದರಲ್ಲೂ ಮುಖ್ಯವಾಗಿ ಗ್ರಂಥವನ್ನು ಚೆನ್ನಾಗಿ ತಿಳಿದು ಇತರರಿಗೆ ಅದರ ಆಶಯ ತಿಳಿಯುವಂತೆ ಮಾಡುವುದೇ ವಿಮರ್ಶಕನ ಕಾರ್ಯವು.

ಪ್ರಯತ್ನದ ನೆಲೆ ಒಂದು ಎಂದ ಮಾತ್ರಕ್ಕೆ ಅದರ ಮುಖವೂ ಒಂದೇ ಎಂದು ತಿಳಿಯಬಾರದು. ಗ್ರಂಥದಲ್ಲಿರುವ ರೀತಿ ವಿಭೇದಗಳಿಗೆ ತಕ್ಕಂತೆ ವಿಮರ್ಶೆಯಲ್ಲಿಯೂ ಉದ್ದೇಶವು ಬೇರೆ ಬೇರೆ ಇರುವುದು. ಕಾವ್ಯವು ವ್ಯಂಜಕ ಕಾವ್ಯವಾಗಿದ್ದರೆ ಒಂದು ರೀತಿಯಿಂದಲೂ ವರ್ಣನಾ ಕಾವ್ಯವಾಗಿದ್ದರೆ ಒಂದು ರೀತಿಯಿಂದಲೂ ವಿಮರ್ಶಕನು ಅದರ ವಸ್ತುವನ್ನು ಗ್ರಹಿಸಬೇಕಾಗುವುದು. ಕವಿಯು ತನ್ನ ದುಃಖದಲ್ಲಿ ಪ್ರಪಂಚವೇ ಮುಳುಗಿದಂತೆ ಮಾತನಾಡಬಹುದು. ಅದು ಪ್ರಪಂಚದ ಅವಸ್ಥೆಯನ್ನು ವರ್ಣಿಸುವುದಿಲ್ಲ; ಅವನ ಅವಸ್ಥೆಯನ್ನು ಸೂಚಿಸುವುದು. ಕಾವ್ಯದಲ್ಲಿಯ ಆ ವರ್ಣನೆಯನ್ನು ಅವನ ದುಃಖದ ಅಳವು ಎಂದು ತೆಗೆದುಕೊಳ್ಳದೆ ಪ್ರಪಂಚದ ವರ್ಣನೆಯೆಂದು ಎಣಿಸಿದರೆ ಕಾವ್ಯವು ಅಸಂಬದ್ಧ ಪ್ರಲಾಪವಾಗಿ ಕಾಣುವುದು; ವಿಮರ್ಶೆಯು ಪರಾಮರ್ಶವಿಹೀನವೆನಿಸಿ ವ್ಯರ್ಥವಾಗುವುದು. ಇದರಂತೆ ಒಳ್ಳೆಯ ಕಾವ್ಯಗಳಲ್ಲಿ ನೂರು ಭಾವಗಳಿರುತ್ತವೆ; ವಿಮರ್ಶೆಯು ಎಲ್ಲವನ್ನೂ ಕವಿಯ ಕಡೆಯಿಂದ ಊಹಿಸಿ ತಿಳಿಯಬೇಕು. ಎಂದರೆ ವಿಮರ್ಶೆಯ ಮುಖ್ಯ ಲಕ್ಷಣ ಸಹಾನುಭೂತಿ. ಹೀಗೆ ಸಹಾನುಭೂತಿಯಿಂದ ಕಾವ್ಯದ ವಸ್ತುವನ್ನು ಗ್ರಹಿಸುವುದರಲ್ಲಿ ವಿಮರ್ಶೆಯ ಪ್ರಯತ್ನವು ಬಹುಮುಖವಾಗುವುದು. ಕವಿಯ ಆವೇಶವನ್ನು ತಿಳಿದು ಅದರ ಲಕ್ಷ್ಯವನ್ನು ಊಹೆಯಿಂದ ಗ್ರಹಿಸುವುದರ ಜತೆಗೆ ವಿಮರ್ಶೆಗೆ ಕಾಲದ ಅರಿವೂ ಬೇಕಾಗುವುದು. ಸಾವಿರ ವರುಷದ ಹಿಂದಣ ಗ್ರಂಥಕ್ಕೂ ಈಗಣ ಗ್ರಂಥಕ್ಕೂ ಒಂದೇ ಅಳತೆಯನ್ನು ತರಬಾರದು. ಒಂದು ಕಾಲದ ಜನರ ಅವಸ್ಥೆಗಾಗಿ ಬರೆದಿರುವ ಗ್ರಂಥವನ್ನು ಇನ್ನೊಂದು

ಕಾಲದಲ್ಲಿ ತಿಳಿಯಬೇಕಾದರೆ ಆ ಕಾಲದ ಜನರ ವಿಷಯವನ್ನು ಇವರು ಸರಿಯಾಗಿ ಅರಿಯಬೇಕು. ಪಿಶಾಚಗಳುಂಟೇ ಇಲ್ಲವೇ ಎಂಬ ವಿಷಯದಲ್ಲಿ ಇಲ್ಲವೆಂಬುದೇ ನಮ್ಮ ಅಭಿಪ್ರಾಯವಾದರೂ ಹ್ಯಾಮ್‌ಲೆಟ್ ನಾಟಕದಲ್ಲಿ ಬರುವ ಪ್ರೇತವು ಯಥಾರ್ಥವಲ್ಲ, ಆದದ್ದರಿಂದ ಹ್ಯಾಮ್‌ಲೆಟ್ ನಾಟಕವು ಒಳ್ಳೆಯದಲ್ಲ ಎಂದು ಅದನ್ನು ನಿರಾಕರಿಸಲಾಗುವುದಿಲ್ಲ. ಹ್ಯಾಮ್‌ಲೆಟ್‌ನಲ್ಲಿ ಪ್ರೇತ, ಶಾಕುಂತಲದಲ್ಲಿ ಹೆಂಗಸು ಮಾಯವಾಗುವುದು, ಹೀಗೆ ಬೇರೆ ಬೇರೆ ಕಾವ್ಯದಲ್ಲಿ ಬರುವ ಬೇರೆ ಬೇರೆ ಅಸಂಭವವೆನ್ನಬಹುದಾದ ಸಂಗತಿಗೂ ನಾವು ಇದೇ ರಸಜ್ಞತೆಯನ್ನು ತರಬೇಕು. ಹೀಗೆ ಆವೇಶದ ಮೂಲವನ್ನು ಗ್ರಹಿಸುವುದರಿಂದಲೂ ಕಾವ್ಯದ ಲಕ್ಷ್ಯವನ್ನು ತಿಳಿದುಕೊಳ್ಳುವುದರಿಂದಲೂ ಕಾಲಪರಿಜ್ಞಾನದ ದೆಸೆಯಿಂದಲೂ ವಿಮರ್ಶಕನಿಗೆ ಕಾವ್ಯದ ಭಾವವು ಮನಸ್ಸಿಗೆ ಬಂದು ಕವಿಯ ವಿಷಯದಲ್ಲಿ ಸಹಾನುಭೂತಿ ಸಾಧ್ಯವಾದಷ್ಟೂ ಸಂಪೂರ್ಣವಾಗುವುದು.

ಇದು ವಿಮರ್ಶೆಯ ಕಾರ್ಯದ ಮೊದಲ ಭಾಗ, ಮುಖ್ಯ ಭಾಗ. ವಿಮರ್ಶಕನು ಸರಿಯಾಗಿ ಸಾಧಿಸಿದಲ್ಲಿ ಉನ್ನತಾವೇಶದಲ್ಲಿ ಗಾಯಕನು ತನ್ನ ಗಾನವನ್ನು ತಾನೇ ಶ್ಲಾಘಿಸುವ ಅವಸ್ಥೆಯಲ್ಲಿ ಅವನ ವಿಮರ್ಶಾಂಶಕ್ಕೆ ಯಾವ ರಸಾನುಭವ ಉಂಟಾಗಿರಬೇಕೋ ಅಂಥ ರಸಾನುಭವವು ಕಾವ್ಯದ ವಿಷಯದಲ್ಲ ವಿಮರ್ಶಕನಿಗೆ ಆಗಬೇಕು; ಎಂದರೆ ಕವಿಯ ವಿಮರ್ಶಕಾಂಶವೇ ಬೇರೊಬ್ಬನಲ್ಲಿ ವ್ಯೈವೇತ್ತಂತೆ ಇರಬೇಕು. ಆಗ್ಯೆ ಕವಿಗೂ ವಿಮರ್ಶಕನಿಗೂ ಭಾವದಲ್ಲಿ ಸಂಪೂರ್ಣವಾದ ಸಂಬಂಧ ಉಂಟಾದಂತಾಯಿತು. ಎಂದರೆ ಕವಿಯು ಒಬ್ಬ ವಿಮರ್ಶಕನ ಹೃದಯದಲ್ಲಿ ಇಂಥ ರಸಾವಿರ್ಭಾವವನ್ನುಂಟುಮಾಡಿ ವಿಮರ್ಶಕನು ಈ ರಸವನ್ನು ಅನುಭವಿಸಿದಾಗ್ಯೆ ಒಂದು ಕಾವ್ಯವು ನಿಜವಾಗಿಯೂ ಸಂಪೂರ್ಣವಾದ ಹಾಗಾಯಿತು. ಕಾವ್ಯವೆನ್ನುವುದು ಯಾವ ಒಂದು ಪುಸ್ತಕವೂ ಅಲ್ಲ, ಅದರಲ್ಲಿಯ ಮಾತುಗಳ ಸಮುದಾಯವೂ ಅಲ್ಲ; ಕವಿಯ ಹೃದಯದಲ್ಲಿ ಮೊದಲನ್ನುಳ್ಳ ಪಾಠಕನ ಹೃದಯದಲ್ಲಿ ಕೊನೆಯನ್ನುಳ್ಳ ಭಾವ ಸಮುದಾಯವು. ವಿಮರ್ಶಕನು ಪಾಠಕರ ಸಮುದಾಯದಲ್ಲಿ

ತಿಳಿವನ್ನುಳ್ಳ ಒಬ್ಬ ಪಾಠಕನು; ಕವಿಯಾದರೋ ತನ್ನ ಆವೇಶದ ವಿಷಯದಲ್ಲಿ ಎಲ್ಲರಿಗಿಂತ ಹೆಚ್ಚಾದ ತಿಳಿವನ್ನುಳ್ಳ ಪಾಠಕನು. ವಿಮರ್ಶಕನ ತಿಳಿವು ಇವನ ತಿಳಿವಿನ ಅಂತಸ್ತಿಗೆ ಸಮೀಪಿಸಿದಷ್ಟೂ ವಿಮರ್ಶಕನು ವಿಮರ್ಶೆಯ ಮೊದಲ ಸೋಪಾನವನ್ನೇರಿ ಕಾರ್ಯಸಿದ್ಧಿಯನ್ನು ಪಡೆಯುವನು. ಕಾವ್ಯದ ಕಾರ್ಯವು ವಿಮರ್ಶಕನ ವಿಷಯದಲ್ಲಿ ಸಂಪೂರ್ಣವಾಗುವುದು.

ವಿಮರ್ಶೆಯ ಕೆಲಸದಲ್ಲಿ ಇದು ಮೊದಲ ಭಾಗವೂ ಮುಖ್ಯಭಾಗವೂ ಎಂದು ಹೇಳಿದೆ. ಆದರೂ ಕೆಲವು ವೇಳೆ ವಿಮರ್ಶೆಯು ಇದಿಷ್ಟನ್ನೂ ಮಾಡಲಾಗುವುದಿಲ್ಲ. ಕೆಲವು ವೇಳೆ ಇಷ್ಟಕ್ಕೇ ನಿಲ್ಲಲಾಗುವುದಿಲ್ಲ. ಕವಿಯ ಭಾವವು ಗಹನವಾದುದಾದರೆ ವಿಮರ್ಶಕನು ಇದಿಷ್ಟನ್ನಾದರೂ ತಿಳಿದನೋ ಇಲ್ಲವೋ ಎಂಬ ಸಂದೇಹವಿರಲೇ ಬೇಕು. ಇದಾದಮೇಲೆ ವಿಮರ್ಶಕನು ಕವಿಯ ಭಾವವು ಕಾವ್ಯದಲ್ಲಿ ಎಷ್ಟರಮಟ್ಟಿಗೆ ಆಕಾರವನ್ನು ಪಡೆದಿದೆ ಎಂಬುದನ್ನು ಕುರಿತು ಯೋಚಿಸಬೇಕು. ಇದೇ ವಿಮರ್ಶೆಯ ಎರಡನೆಯ ಸೋಪಾನ. ಹೀಗೆ ವಿವರಿಸುವಾಗ್ಗೆ ಕಾವ್ಯದಲ್ಲಿ ರಾಗಸ್ಪೃಹವಾಗಿ ರೂಪವನ್ನು ಪಡೆದಿರುವ ಭಾವಗಳು ಒಂದು ರೂಪಪರಿವರ್ತನವನ್ನು ಹೊಂದುತ್ತವೆ. ರಸಗಳನ್ನು ಅನುಭವಿಸುವುದು ರಾಗಗಳ ಸ್ವಭಾವ; ಅವುಗಳನ್ನು ವಿವರಿಸುವುದು ಬುದ್ಧಿಯ ಕೆಲಸ. ಕವಿಯ ಭಾವ ಇಂತಹದು ಎಂದು ಅದನ್ನು ಸಾಧ್ಯವಾದಷ್ಟುಮಟ್ಟಿಗೆ ವರ್ಣಿಸುವುದಕ್ಕೆ ಪ್ರಯತ್ನಪಡುವಾಗಲೂ ಕವಿಯ ಈ ಭಾವ ಸರಿಯಲ್ಲ ಎಂದು ಅದರ ಗುಣದೋಷಗಳನ್ನು ಚರ್ಚಿಸುವುದಕ್ಕೆ ಪ್ರಯತ್ನಪಡುವಾಗಲೂ ವಿಮರ್ಶಕನು ತನ್ನ ರಾಗಕ್ಕೆ ಉಂಟಾದ ಅನುಭವವನ್ನು ಬುದ್ಧಿಯ ಮೂಲಕ ವಿಚಾರಮಾಡುತ್ತಾನೆ. ವಿಮರ್ಶೆಯ ಈ ಎರಡನೆಯ ಭಾಗವು ಅದರ ಮೊದಲನೆಯ ಭಾಗವಾದ ಭಾವಗ್ರಹಣಕ್ಕೆ ಪ್ರಾಮುಖ್ಯತೆಯಲ್ಲಿ ಸಮವಾದುದು. ಭಾವಗ್ರಹಣವಿಲ್ಲದೆ ಬುದ್ಧಿಯಿಂದ ಮಾಡುವ ವಿಚಾರವು ಶುಷ್ಕವಾಗುವುದು ನಿಜ; ಆದರೆ ಬುದ್ಧಿಮೂಲಕವಾದ ವಿಚಾರವಿಲ್ಲದ ರಸಾನುಭವವು ವಿವೇಚನೆ ಇಲ್ಲದ ಉತ್ಸಾಹದಲ್ಲಿ ಪರಿಣಾಮವಾಗುವುದು. ಎರಡೂ ಸೇರಿದರೆ ಮಾತ್ರ ವಿಮರ್ಶೆಯು ಸಫಲವಾಗುವುದು.

ರಸಾನುಭವವನ್ನು ಈ ರೀತಿಯಲ್ಲಿ ಬುದ್ಧಿಯ ಮೂಲಕ ವಿಚಾರ ಮಾಡುವುದರಲ್ಲಿ ವಿಮರ್ಶೆಯು ಈ ಮೊದಲು ಹೇಳಿರುವ ಅನೇಕ ರೂಪಗಳನ್ನು ಪಡೆಯುತ್ತದೆ. ವಿಮರ್ಶೆಯ ಹೊರವಳಯದಲ್ಲಿ ಸೇರಿರುವ ಲಕ್ಷಣಗ್ರಂಥಗಳೂ ಕೂಡ ಈ ರೂಪಗಳಲ್ಲಿ ಒಂದಕ್ಕೆ ಸೇರಿದವು. ಕವಿಗೆ ಸ್ವಭಾವವಾಗಿ ಬರುವ ರೀತಿ ಪದ್ಧತಿಗಳ ವಿಚಾರವನ್ನು ಇವು ಬುದ್ಧಿಯ ಮೂಲಕ ಪರೀಕ್ಷಿಸಿ, ಇದು ಸರಿಯಾದ ರೀತಿ, ಇದು ಸರಿಯಾದ ಪದ್ಧತಿ ಎಂದು ತಿಳಿದುಹೇಳುತ್ತವೆ. ವಿಮರ್ಶೆಯ ಇತರ ಭಾಗಗಳೂ ಹೀಗೆಯೇ. ಕೇವಲ ಉತ್ತಮ ಗ್ರಂಥವನ್ನು ಉತ್ತಮವೆಂದು ಪ್ರಶಂಸೆಮಾಡುವುದೂ, ದುಷ್ಟ ಗ್ರಂಥವನ್ನು ದುಷ್ಟವೆಂದು ದೂಷಿಸುವುದೂ, ಉತ್ತಮ ಗ್ರಂಥದ ರಸವನ್ನು ಆಸ್ವಾದಮಾಡಿ ಅದನ್ನು ಉತ್ಸಾಹದಿಂದ ವರ್ಣಿಸಿ ಹೇಳುವುದೂ, ದುಷ್ಟ ಗ್ರಂಥಗಳಲ್ಲಿ ಉಕ್ತವಾಗಿರುವ ಭಾವಗಳನ್ನು ಖಂಡಿಸಿ ಬರೆಯುವುದೂ, ಒಬ್ಬ ಕವಿಯ ಜೀವನ ಚರಿತ್ರೆಯನ್ನು ಬರೆಯುವುದೂ, ಅವನ ಗ್ರಂಥಗಳನ್ನೆಲ್ಲ ಸೇರಿಸಿಕೊಂಡು ಅವನ ಭಾವಗಳನ್ನು ಚರ್ಚಿಸಿ ಉಪನ್ಯಾಸಮಾಡುವುದೂ, ಯಾವ ಒಂದು ಗ್ರಂಥವನ್ನಾಗಲಿ ಹತ್ತು ಗ್ರಂಥವನ್ನಾಗಲಿ ಚರ್ಚಿಸದೆ ಸಾಹಿತ್ಯವೆಲ್ಲವನ್ನೂ ಕುರಿತು ವಿಚಾರಮಾಡುವುದೂ, ವಿಮರ್ಶೆಯು ಧರಿಸುವ ರೂಪಭೇದಗಳು. ಎಲ್ಲವೂ ಸಾಹಿತ್ಯದ ವಿಷಯಕ್ಕೆ ಬುದ್ಧಿಯ ಮೂಲಕ ವೈಶದ್ಯವನ್ನು ತರುವುವು. ಒಳ್ಳೆಯ ಗ್ರಂಥವನ್ನು ಒಳ್ಳೆಯದೆನ್ನುವುದರಲ್ಲಿ ಹಾಗೆನ್ನುವುದಕ್ಕೆ ಕಾರಣವನ್ನು ಹೇಳುತ್ತೇವೆ. ಅದರ ರಸವನ್ನು ವರ್ಣಿಸುವುದರಲ್ಲಿ ಪಾಠದಲ್ಲಿ ರಾಗಕ್ಕೆ ಸೋಕಿದ ವಿಷಯವನ್ನು ವಿವರವಾಗಿ ಇತರರಿಗೆ ತಿಳಿಯುವಂತೆ ಹೇಳುತ್ತೇವೆ, ರಸಪರಿಚಯದ ರಹಸ್ಯ ಮಾರ್ಗಗಳನ್ನು ಸ್ಪಷ್ಟಗೊಳಿಸಲು ಯತ್ನಿಸುತ್ತೇವೆ. ಕೆಟ್ಟ ಪುಸ್ತಕವನ್ನು ಕೆಟ್ಟದೆನ್ನುವಾಗಲೂ ಅದರ ದುರಭಿಪ್ರಾಯವನ್ನು ಖಂಡಿಸುವಾಗಲೂ ಸಕಾರಣವಾದ ವಿಚಾರವನ್ನು ಮಾಡುತ್ತೇವೆ. ಕವಿಯ ಜೀವನಚರಿತ್ರೆಯನ್ನು ಬರೆಯುವುದರಲ್ಲಿ ಅವನ ಕಾವ್ಯಭಾವಗಳು ಉತ್ಪನ್ನವಾದ ಸಂದರ್ಭಗಳನ್ನೂ ಆ ಸಂದರ್ಭಗಳು ಅವನ ಮನೋಧರ್ಮವನ್ನು ಹೇಗೆ ನಿರ್ಧರಿಸಿದುವೆಂಬುದನ್ನೂ ಇದರಿಂದ ಆ ಭಾವ

ಗಳು ತಳೆದ ಸ್ವರೂಪವನ್ನೂ ಸೂಚಿಸುವುದಕ್ಕೆ ಯತ್ನಮಾಡುತ್ತೇವೆ. ಒಟ್ಟು ಸಾಹಿತ್ಯದ ಸ್ವಭಾವವನ್ನೇ ವಿಚಾರಮಾಡುವಾಗಲೂ ರಾಗಸ್ಪರ್ಶೆಯಾದ ಸಾಹಿತ್ಯರಸದ ವಿಷಯವನ್ನು ಬುದ್ಧಿಯ ಪರಿಭಾಷೆಯಲ್ಲಿ ಹೇಳಲು ಪ್ರಯತ್ನಿಸುತ್ತೇವೆ. ಈ ಮೀಮಾಂಸೆ ಎಲ್ಲದರಲ್ಲೂ ರಸಪರಿಚಯಕ್ಕೆ ರಾಗವನ್ನೂ ಅದರ ವಿವರಣಕ್ಕೆ ಬುದ್ಧಿಯನ್ನೂ ಸಾಧನವಾಗಿ ಉಪಯೋಗಿಸುತ್ತೇವೆ. ಮೊತ್ತದಲ್ಲಿ ವಿಮರ್ಶೆಯ ಸಾರವು ಹೀಗೆಂದು ತೋರುವುದು ; ಅದು ಸಾಹಿತ್ಯರಸದ ಬುದ್ಧಿದ್ವಾರವಾದ ಅನುವಾದವು.

೪

ಇದರಿಂದ ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯವು ಎಷ್ಟು ಕಷ್ಟಸಾಧ್ಯವಾದದ್ದೆಂದು ನಾವು ಊಹಿಸಬಹುದು. ಅದಕ್ಕೆ ಬೇಕಾದ ತಿಳಿವೂ ಬುದ್ಧಿಶಕ್ತಿಯೂ ಎಂಥವು ಎಂದೂ ಯೋಚಿಸಬಹುದು. ಕವಿಯು ಎಂತವನೇ ಆಗಲಿ ಅವನ ಆವೇಶದ ವಿಷಯದಲ್ಲಿ ಯಾವ ವಿಮರ್ಶಕನಿಗಿಂತಲೂ ಅವನಿಗೇ ಹೆಚ್ಚು ತಿಳಿವಳಿಕೆ ಇರಬೇಕಷ್ಟೆ. ಈ ತಿಳಿವಳಿಕೆಗೆ ಪ್ರತಿಯಾಗಿ ವಿಮರ್ಶಕನಲ್ಲಿ ಊಹೆಯೂ ಪ್ರತಿಭೆಯೂ ಇರಬೇಕಾಗುತ್ತದೆ. ಎಂದರೆ ಪ್ರಪಂಚದ ವಿಷಯದಲ್ಲಿ ಕವಿಗೆ ಯಾವ ಶಕ್ತಿಯು ಇರಬೇಕೋ ಕಾವ್ಯದ ವಿಷಯದಲ್ಲಿ ವಿಮರ್ಶಕನಿಗೆ ಆ ಶಕ್ತಿಯಿರಬೇಕು. ಈ ಶಕ್ತಿಯೊಂದಿಗೆ ಕವಿಯ ಆಶಯವನ್ನು ತಿಳಿಯುವುದಕ್ಕೆ ತಾಳ್ಮೆಯೂ ಔದಾರ್ಯವೂ ಇರಬೇಕು. ತಾಳ್ಮೆ ಔದಾರ್ಯಗಳಂತೂ ವಿಮರ್ಶಕನಲ್ಲಿ ಬಹಳ ಆವಶ್ಯಕವಾಗಿ ಇರಲೇಬೇಕಾದ ಗುಣಗಳು. ಕವಿಯಲ್ಲಿ ದೋಷವಿದೆ ಎಂದು ಹೇಳುವುದರಲ್ಲಿ ಅಂತೂ ಇವು ಎಷ್ಟು ಆವಶ್ಯಕವಾದುವೆಂದು ಹೇಳುವುದು ಸಾಧ್ಯವಲ್ಲ. ಭಾವಗ್ರಹಣಶಕ್ತಿಯೂ ಔದಾರ್ಯವೂ ಅಲ್ಲದೆ ವಿಮರ್ಶಕನಿಗೆ ಕಾವ್ಯವು ತನ್ನಲ್ಲಿ ಉಂಟಾಗಿಸಿದ ಭಾವಗಳನ್ನು ವಿವರಿಸುವ ಶಕ್ತಿ ಇರಬೇಕು. ಕವಿಯ ಅಭಿಪ್ರಾಯಗಳನ್ನು ತಪ್ಪು ಎನ್ನುವುದಕ್ಕಾದರೆ ಕಾವ್ಯದಲ್ಲಿರುವ ವಿಚಾರವನ್ನು ಕುರಿತು ಅವನಿಗೆ ಕವಿಗೆ ತಿಳಿದಿರುವಷ್ಟು ವಿಚಾರವಾದರೂ ತಿಳಿದಿರಬೇಕು. ಎಂದರೆ ವಿಮರ್ಶೆ ಬರೆಯುವೆನೆನ್ನುವವರಿಗೆ ಬಹಳ ಶಕ್ತಿಯೂ ಅನೇಕ ಗುಣಗಳೂ ಇರಬೇಕು ಎಂದ ಹಾಗಾಯಿತು. ಇದರಲ್ಲೇನೂ

ಆಶ್ಚರ್ಯಕ್ಕೆ ಕಾರಣವಿಲ್ಲ. ಸಂಗೀತದಲ್ಲಿ ರುಚಿಯುಳ್ಳ ಯಾರಾದರೂ ತನಗೆ ಸುಖವಾಗಿರುವ ಯಾವ ಸ್ವಲ್ಪ ಭಾಗವನ್ನಾದರೂ ರಾಗದಲ್ಲಿ ಎಳೆದು ತೋರಿಸಬಹುದು; ಇದಕ್ಕೆ ಸಂಗೀತದಲ್ಲಿ ನೈಪುಣ್ಯ ಬೇಕಾದದ್ದಿಲ್ಲ. ಆದರೆ ಅದು ಇಂತ ಸ್ವರಗಳಿಂದ ಕೂಡಿದೆ ಎಂದು ಹೇಳುವುದಕ್ಕೆ ಸಂಗೀತದ ವಿವರ ತಿಳಿದವನಾಗಬೇಕು. ಹೀಗೆಯೇ ಸಾಹಿತ್ಯದಲ್ಲಿ ವಿಮರ್ಶಕನಿಗೆ ಸಾಹಿತ್ಯದ ವಿಷಯವು ವಿವರವಾಗಿ ತಿಳಿದಿರಬೇಕು. ಅವನು ಅದಕ್ಕೆ ಸ್ವರ ಹೇಳುವುದನ್ನು ಬಲ್ಲವನಾಗಿರಬೇಕು. ಅದರ ರಾಗದಲ್ಲಿ ತಪ್ಪು ಸ್ವರ ಸೇರಿದ್ದರೆ ಅದನ್ನು ತೆಗೆದು ತೋರಿಸುವವನಾಗಿರಬೇಕು. ಇದಿಷ್ಟನ್ನು ಮಾಡಬಲ್ಲ ವಿಮರ್ಶಕನೇ ಸರಿಯಾದ ವಿಮರ್ಶಕನು. ಇದಿಷ್ಟನ್ನು ಮಾಡಬೇಕಾದರೆ ಅತ್ಯುತ್ತಮವಾದ ಶಕ್ತಿಯೂ ಗುಣವೂ ವಿಮರ್ಶಕನಲ್ಲಿ ಸೇರಿರಬೇಕು. ಇದು ಎಲ್ಲರೂ ಒಪ್ಪುವ ವಿಷಯ.

ಇದಕ್ಕೆ ಕೆಲವರು ಒಂದು ಮಾತನ್ನು ಹೇಳಬಹುದು. ಇಷ್ಟು ಊಹೆಯೂ ಪ್ರತಿಭೆಯೂ ಈ ತಾಳ್ಮೆ ಈ ಔದಾರ್ಯವೂ ಇಂಥ ವಿಷಯ ಪರಿಜ್ಞಾನವೂ ಶಾಸ್ತ್ರಪರಿಚಯವೂ ಇರುವಂಥ ಮನುಷ್ಯನು ವಿಮರ್ಶೆಯನ್ನು ಏಕೆ ಬರೆಯಬೇಕು? ಕಾವ್ಯವನ್ನು ಬರೆಯಬಾರದೆ? ಈ ಮಾತಿನಲ್ಲಿ ಕಾವ್ಯವನ್ನು ಬರೆಯುವುದಕ್ಕಿಂತ ವಿಮರ್ಶೆಯನ್ನು ಬರೆಯುವುದು ಕೀಳಾದ ಕೆಲಸವೆಂಬ ಒಂದು ಅಭಿಪ್ರಾಯವು ಅಡಗಿದೆ. ಹಾಗಲ್ಲದಿದ್ದರೆ ಈ ಪ್ರಶ್ನೆಯನ್ನು ಕೇಳಬೇಕಾದದ್ದೇ ಇಲ್ಲ. ಇದರಲ್ಲಿ ತಿಳಿಯಬೇಕಾದದ್ದೇನೆಂದರೆ, ಕಾವ್ಯವೆಲ್ಲ ಒಳ್ಳೆಯದು ಅದರ ವಿಮರ್ಶೆಯೆಲ್ಲ ಅದಕ್ಕಿಂತ ಬೆಲೆಯಲ್ಲಿ ಕಡಿಮೆಯಾದುದು ಎಂದು ಹೇಳುವುದು ಸರಿಯಲ್ಲ. ಒಬ್ಬನು ಬರೆದ ಕಾವ್ಯವು ನೀರಸವಾಗಿರಬಹುದು; ಇನ್ನೊಬ್ಬನು ಆ ಕಾವ್ಯದ ವಿಷಯದಲ್ಲಿ ಬರೆದ ವಿಮರ್ಶೆಯು ರಸಭರಿತವಾದ ಉಪನ್ಯಾಸವಾಗಬಹುದು. ಇದು ಅವರವರ ತಿಳಿವು ಮತ್ತು ಶಕ್ತಿಯನ್ನು ಅನುಸರಿಸುತ್ತದೆ. ಇದು ಹಾಗಿರಲಿ. ಕಾವ್ಯವು ಉತ್ತಮವಾದುದಾದರೆ ಅದನ್ನು ಕುರಿತ ವಿಮರ್ಶೆಯು ಅದಕ್ಕೆ ಸಮಾನವಾಗಲಾರದೆನ್ನುವಾಗಲೋ? ಷೇಕ್ಸ್‌ಪಿಯರ ನಾಟಕದ ವಿಷಯದಲ್ಲಿ ಯಾವ ವಿಮರ್ಶೆ

ಕನು ಬರೆದ ವಿಮರ್ಶೆಯೂ ಆ ನಾಟಕಕ್ಕೆ ಸಮವಾಗಲಾರದು. ಷೇಕ್ಸ್ಪಿಯರು, ಕಾಳಿದಾಸ ಮುಂತಾದ ಉತ್ತಮ ಕವಿಗಳು ಅವರ ವ್ಯಾಖ್ಯಾನಕಾರರಿಗಿಂತ ಅಧಿಕರು. ಆದರೆ ಇಂತ ಸಂದರ್ಭದಲ್ಲಿಯೂ ವಿಮರ್ಶಕನು ಬೇರೇ ಕಾವ್ಯವನ್ನು ಬರೆಯುವುದಕ್ಕೆ ಬದಲಾಗಿ ವಿಮರ್ಶೆಗೆ ಕೈಹಾಕುವುದಕ್ಕೆ ಹಲವು ಕಾರಣಗಳಿರಬಹುದು. ಇವುಗಳಲ್ಲಿ ಕೆಲವನ್ನು ಇಲ್ಲಿ ವಿಚಾರಮಾಡೋಣ.

ಕಾವ್ಯವನ್ನು ಹೇಳುವುದಕ್ಕೆ ಯಾವ ಒಂದು ಆವೇಶ ಅಥವಾ ಅವಸ್ಥೆಯು ಆವಶ್ಯಕವೋ ಆ ಆವೇಶ ಅಥವಾ ಅವಸ್ಥೆಯು ಎಲ್ಲರಿಗೂ ಬರುವುದಿಲ್ಲ. ಪ್ರಾಯಶಃ ಉತ್ತಮವಾದ ಕಾವ್ಯವನ್ನು ಬರೆಯುವುದೆಂಬ ಶಕ್ತಿಯು ಮನುಷ್ಯನ ಜನ್ಮದಲ್ಲಿ ಸೇರಿಬಂದಿರಬೇಕು. ಅದನ್ನು ಹೊರಗಣಿಂದ ಕಲಿಯುವುದು ಸಾಧ್ಯವಲ್ಲವೆಂದೇ ಹೇಳಬಹುದು. ಹೀಗೆ ಕಾವ್ಯವನ್ನು ಬರೆಯಬೇಕಾಗುವ ರಾಗದ ಅವಸ್ಥೆಯು ಮನುಷ್ಯನಿಗೆ ಬರದೆ ಇದ್ದರೂ ಅವನಲ್ಲಿ ಊಹೆಯೂ ಪ್ರತಿಭೆಯೂ ಇತರ ಅನೇಕ ವಿಧ ಶಕ್ತಿಯೂ ಕವಿಗಿಂತ ಯಾವ ಅಂಶದಲ್ಲೂ ಕಡಮೆ ಇಲ್ಲದೆ ಇರಬಹುದು. ಅನೇಕವೇಳೆ ಸಾಮಾನ್ಯ ಕವಿಯಾದ ಒಬ್ಬನಿಗಿಂತ ಕವಿಯೇ ಅಲ್ಲದ ಇನ್ನೊಬ್ಬನಿಗೆ ಈ ಶಕ್ತಿಗಳಲ್ಲಿ ಆಧಿಕ್ಯವೇ ಇರಬಹುದು ಆಗ್ಯೆ ಅವನು ಬರೆಯುವ ಗ್ರಂಥದಲ್ಲಿ ರಾಗದ ಭಾಗವು ಕಡಿಮೆಯಾಗಿರುವುದು; ಬುದ್ಧಿಯ ಭಾಗವು ಹೆಚ್ಚಾಗುವುದು; ಅವನಿಗೆ ಕಾವ್ಯವನ್ನು ಬರೆಯುವುದಕ್ಕಿಂತ ಉಪನ್ಯಾಸಗಳನ್ನು ಬರೆಯುವುದರಲ್ಲಿ ಸೌಕರ್ಯ ಹೆಚ್ಚು. ಅಂತಹವನಿಗೆ ವಿಮರ್ಶೆಯು ಸ್ವಭಾವಸಿದ್ಧವಾಗುವುದು. ಇನ್ನು ಕೆಲವರಿಗೆ ರಾಗದ ಅವಸ್ಥೆ ಸಾಧ್ಯವಾದರೂ ಕಾವ್ಯವನ್ನು ಕಾವ್ಯವಾಗಿ ಹೇಳುವ ದಾರಿ ತಿಳಿಯದೆ ಇರಬಹುದು. ಆದರೆ ಯಾರಾದರೂ ಹೇಳಿದ್ದನ್ನು ಇಂತವರು ಚೆನ್ನಾಗಿ ತಿಳಿಯುವರು. ಇವರಂತೆಯೇ ಇನ್ನು ಕೆಲವರು ಕಾವ್ಯಾವಸ್ಥೆ ಬರಬಹುದಾದರೂ ಹೇಳುವ ದಾರಿ ತಿಳಿದಿದ್ದರೂ ಆಳವಾದ ಸ್ವಭಾವ ಉಳ್ಳವರಾದದ್ದರಿಂದ ಆತ್ಮಾನುಭವದ ಉದ್ವೇಗ ಯಾವುದನ್ನೂ ವಿವರಿಸುವುದಕ್ಕೆ ಒಪ್ಪುವುದಿಲ್ಲ. ಇವರಿಗೂ ಕಾವ್ಯರಸಗ್ರಹಣದಲ್ಲಿ ಬಹಳ ಸೌಲಭ್ಯ ಉಂಟು. (ಇತರರಿಗೆ ಏನೂ

ಹೇಳದವರೆಲ್ಲ ಆಳವಾದ ಸ್ವಭಾವವುಳ್ಳವರೆಂದು ನನ್ನ ಅಭಿಪ್ರಾಯವಲ್ಲ. ಅನೇಕರು ಇತರರಿಗೆ ಏನನ್ನೂ ಹೇಳದೆ ಇರುವುದರ ಕಾರಣ ಅವರಲ್ಲಿ ಏನೂ ಇಲ್ಲದೇ ಇರುವುದೇ. ಆದರೆ ವಿಮರ್ಶೆಗೆ ಆವಶ್ಯಕವೆಂದು ಹೇಳಿರುವ ಊಹೆಯೂ ಪ್ರತಿಭೆಯೂ ಇದ್ದು ಕಾವ್ಯರಚನೆಗೆ ಬೇಕಾದ ವಿಷಯ ಪರಿಜ್ಞಾನವುಳ್ಳವರಾದರೂ ಕಾವ್ಯ ಬರೆಯದೆ ಇರತಕ್ಕವರು ಈ ರೀತಿಯ ಮೌನವನ್ನು ಹೊಂದಿರಬಹುದೆಂಬುದು ಇಲ್ಲಿಯ ಭಾವ). ಹೀಗೆ ರಾಗಶಕ್ತಿಗಿಂತಲೂ ಬುದ್ಧಿಶಕ್ತಿ ಅಧಿಕವಾಗಿದ್ದು ರಾಗಶಕ್ತಿ ಸಾಮಾನ್ಯವಾಗಿರುವುದರಿಂದಲೋ, ಭಾವಗಳನ್ನು ಕಾವ್ಯರೂಪವಾಗಿ ವ್ಯಂಜಿಸಲು ಸೌಕರ್ಯವಿಲ್ಲದ ಕಾರಣದಿಂದಲೋ, ಇಲ್ಲ ವ್ಯಂಜಿಸುವುದರಲ್ಲಿ ಮನಸ್ಸು ಪ್ರವರ್ತಿಸದೆ ಇರುವುದರಿಂದಲೋ ಕೆಲವರು ಕಾವ್ಯಕ್ಕೆ ಬೇಕಾದ ವಸ್ತು ಪರಿಜ್ಞಾನ ಊಹೆ ಪ್ರತಿಭೆಗಳು ಎಷ್ಟು ಇದ್ದರೂ ಕಾವ್ಯರಚನೆಯಲ್ಲಿ ತೊಡಗದಂತವರು ಇರುವರು. ಇವರು ಕಾವ್ಯದ ರಸವನ್ನು ಗ್ರಹಿಸಬಲ್ಲರು, ಅದರ ವಿಷಯವನ್ನು ತಿಳಿಸಬಲ್ಲರು. ಎಂದರೆ ಇವರು ಕಾವ್ಯವನ್ನು ಓದುವವರಲ್ಲಿ ಉತ್ತಮ ವರ್ಗದವರಲ್ಲಿ ಸೇರುವರು, ಕವಿಯ ಕಾರ್ಯವನ್ನು ಸಾರ್ಥಕವನ್ನಾಗಿ ಮಾಡುವರು. ಇಂತವರು ತಮಗೆ ಕಾವ್ಯದಿಂದ ತೋರಿದ ವಿಷಯವನ್ನೂ ಕಾವ್ಯದ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನೂ ತಮ್ಮ ಸ್ವಭಾವಕ್ಕೆ ವಿರೋಧವಾಗಿ ನಡೆಯದೆ ಪ್ರಾಯಶಃ ಸ್ವಭಾವಕ್ಕೆ ಅನುಸಾರವಾಗಿ ವರ್ತಿಸಿಯೇ ಉಪನ್ಯಾಸರೂಪವಾಗಿ ವ್ಯಕ್ತಗೊಳಿಸಬಹುದು. ಅಂಥ ಉಪನ್ಯಾಸಗಳು ವಿಮರ್ಶೆಯಾಗುವುದಲ್ಲದೆ ಉತ್ತಮವಾದ ವಿಮರ್ಶೆಯಾಗುವುವು.

ಕೆಲವರ ಸ್ವಭಾವವು ವಿಮರ್ಶೆಗೆ ತಕ್ಕದ್ದಾಗಿರುವುದರಿಂದ ಅವರು ವಿಮರ್ಶೆಯಲ್ಲಿ ಉದ್ಯುಕ್ತರಾಗಬೇಕು ಎಂದಹಾಗಾಯಿತು. ಇಂತವರು ಕೇವಲ ತಮಗಾಗಿ ಮಾತ್ರವಲ್ಲದೆ ಇತರರಿಗಾಗಿಯೂ ಕಾವ್ಯವನ್ನು ಬರೆಯುವುದಕ್ಕೆ ಬದಲಾಗಿ ವಿಮರ್ಶೆಯನ್ನು ಬರೆಯುವುದು ಆವಶ್ಯಕ. ಈಗ ಒಂದು ಉತ್ತಮ ಕಾವ್ಯವಿದೆ ಅದರಲ್ಲಿ ದೋಷವಿಲ್ಲ ಎನ್ನೋಣ. ಅಂತ ಕಾವ್ಯವನ್ನು ಸರಿಯಾಗಿ ಗ್ರಹಿಸುವ ಶಕ್ತಿ ಎಲ್ಲರಿಗೂ ಇರುವುದಿಲ್ಲ. ಪುಸ್ತಕಗಳನ್ನು ಓದುವ ಜನರು ಕೊಳಕ್ಕೆ

ಸೇರಿಗಾಗಿ ಹೋಗುವವರಂತೆ ತಾವು ತೆಗೆದುಕೊಂಡುಹೋದ ಪಾತ್ರೆ ಹಿಡಿಯುವಷ್ಟು ರಸವನ್ನು ಮಾತ್ರ ತೆಗೆದುಕೊಂಡು ಬರಬಹುದು. ಕೆಲವರ ಪಾತ್ರೆ ಬಹಳ ಸಣ್ಣದು. ಇವರಿಗೆ ಕಾವ್ಯದ ಮೇಲ ಮೇಲಣ ಅರ್ಥ ತಿಳಿಯುವುದು. ಅವರು ಅದರ ಭಾವವನ್ನೆಲ್ಲ ಗ್ರಹಿಸಲು ಯತ್ನಮಾಡುವುದಿಲ್ಲ. ಕೆಲವರ ಪಾತ್ರೆ ಅವರ ಶಕ್ತಿಗೆ ಮೀರಿ ಸ್ವಲ್ಪ ದೊಡ್ಡದಾಗಿ ಅವರು ಪಾತ್ರೆಯನ್ನು ಸೇರಿಸಿಂದ ತುಂಬ ಅದನ್ನು ಕೊಳದಲ್ಲೇ ಬಿಟ್ಟು ಬರುವರು. ಕಾವ್ಯವನ್ನು ಓದುವುದರಲ್ಲಿ ಇದು ಹೇಗೆ ಎನ್ನಬಹುದು. ಷೇಕ್ಸ್‌ಪಿಯರ ನಾಟಕಗಳಲ್ಲಿ ಎಲ್ಲಿಯೂ ಯಾವ ತಪ್ಪೂ ಇಲ್ಲವೆನ್ನುವವರು ಈ ಗುಂಪಿನ ಜನರು. ಇವರಲ್ಲಿ ಕೆಲವರು ಕವಿಯು ವರ್ಣಿಸಿರುವ ಹುಚ್ಚರ ನಡೆನುಡಿಗಳಿಂದ ಈಗ ಪ್ರಪಂಚದಲ್ಲಿ ಕಾಣುವ ಹುಚ್ಚರ ನಡೆನುಡಿಗಳನ್ನು ನೋಡಿ ಇವರ ಹುಚ್ಚು ಸರಿಯಾದದ್ದೋ ತಪ್ಪಾದದ್ದೋ ಎಂದು ವಿಚಾರಿಸುವರು. ಷೇಕ್ಸ್‌ಪಿಯರು ಪ್ರಕೃತಿಯಿಂದ ವಿಷಯವನ್ನು ತಿಳಿದನೆಂಬುದನ್ನು ಮರೆತು ಇವರು ಪ್ರಕೃತಿಯು ಷೇಕ್ಸ್‌ಪಿಯರನ್ನನುಸರಿಸಿತೇ ಇಲ್ಲವೇ ಎಂದು ನೋಡುವರು. ಇಂತವರು ನಮ್ಮಲ್ಲೂ ಇದಾರೆ. ಇವರು ಹಿಂದಣ ಸಾಹಿತ್ಯವನ್ನೆಲ್ಲ ಉತ್ತಮವಾದುದೆನ್ನುವರು. ಅದರ ಅಕ್ಷರ ಅಕ್ಷರಕ್ಕೂ ಅಲಂಕಾರವನ್ನು ಆರೋಪಿಸುವರು; ಅಕ್ಷರ ಅಕ್ಷರಕ್ಕೆಲ್ಲ ಅರ್ಥವನ್ನು ಊಹಿಸುವರು. ಭಾವವನ್ನು ಒಂದು ಕಡೆಗಿಟ್ಟು ಮಾತಿಗೆ ಹೊಡೆದಾಡು ವರು. ಹೀಗೆ ಪಾತ್ರೆಯೇ ಇಲ್ಲದೆ ಬರಿಯ ಕೈಯಲ್ಲಿ ಹೋಗುವುದರಿಂದ ರಸವನ್ನು ಪಡೆಯಲಾರದವರಿಗೂ ಶಕ್ತಿಮೀರಿದ ಪಾತ್ರೆಯನ್ನು ತೆಗೆದು ಕೊಂಡು ಹೋಗಿ ಅದನ್ನು ಕೊಳದಲ್ಲಿ ಬಿಟ್ಟು ಏನೂ ಇಲ್ಲದೆ ಹೋಗುವ ವರಿಗೂ ಮಧ್ಯೆ ಕಾವ್ಯದ ವಿಷಯವನ್ನು ಸರಿಯಾಗಿ ಗ್ರಹಿಸಿ ಅದರ ರಸವನ್ನು ತಮಗಾಗಿಯೂ ಈ ಇನ್ನೆರಡು ಗುಂಪಿನವರಿಗಾಗಿಯೂ ತರಬಲ್ಲ ರಸಗ್ರಾಹಿಗಳು ಇರಲೇಬೇಕು. ಇವರು ವಿಮರ್ಶೆಯನ್ನು ಬರೆಯಬೇಕು. ಇವರಿಂದ ಅಪ್ರಬುದ್ಧರು ರಸಗ್ರಹಣಶಕ್ತಿಯನ್ನೂ ಅತಿಪ್ರಬುದ್ಧರು ಮಿತಗ್ರಾಹಿತ್ವವನ್ನೂ ಕಲಿಯಬೇಕು. ಎಂದರೆ ಇಂತ ವಿಮರ್ಶಕರು ಸಾಮಾನ್ಯ ಜನಕ್ಕೆ ಬುದ್ಧಿಯ ಸಂಸ್ಕಾರವನ್ನು ಹೆಚ್ಚಿಸಿ

ಭಾವಿಗೆ ಸೋಪಾನವನ್ನು ಕಟ್ಟಿ ಅದರ ಜಲವನ್ನು ಸುಗಮವಾಗಿಸು ವಂತೆ ಕಾವ್ಯದ ವಿಷಯುವನ್ನು ಇತರರಿಗೆ ಸುಲಭವಾಗಿ ಮಾಡುವರು. ಮುಖ್ಯವಾಗಿ ವಿಮರ್ಶೆಯು ಈ ಕಾರ್ಯವನ್ನು ಇನ್ನೊಂದು ರೀತಿ ಯಿಂದ ಕಾವ್ಯದಲ್ಲಿ ಕವಿಯು ಗ್ರಹಿಸಿಡುವ ತೇಜಸ್ಸನ್ನು ತಾವೇ ಪಡೆಯು ಲಾರದ ಜನರಿಗೆ ಸರಳವಾಗುವಂತೆ ಮಾಡತಕ್ಕದ್ದೇ ಎಂದು ವರ್ಣಿಸ ಬಹುದು. ಚಕಮುಕಿಯನ್ನು ಬಡಿದರೆ ಅಗ್ನಿ ಉಂಟಾಗುವುದು. ಅದರ ಒಳಿ ಇರುವ ಹತ್ತಿ ಆ ಅಗ್ನಿಯನ್ನು ಧರಿಸಿ ಅಭಿವೃದ್ಧಿಗೊಳಿಸು ವುದು. ಆ ಹತ್ತಿಯು ಸೂಕ್ಷ್ಮಗ್ರಹಣ ಶಕ್ತಿಯ ಸಹಾಯದಿಂದ ಹತ್ತಿರದ ಸ್ಥೂಲವಸ್ತುಗಳೂ ಆಮೇಲೆ ಅಗ್ನಿಯನ್ನು ಪಡೆಯಬಹುದು. ಸೂಕ್ಷ್ಮವಾದ ಹತ್ತಿಯಿಂದ ಸ್ಥೂಲವಾದ ಕೊರಡಿನವರೆಗೆ ಎಲ್ಲಕ್ಕೂ ಸಂಸ್ಕಾರ ಬೇಕು. ಇದರಿಂದ ಕೊರಡಿಗೂ ಚಕಮುಕಿಗೂ ನಡುವೆ ಒಂದಕ್ಕಿಂತ ಒಂದು ಸೂಕ್ಷ್ಮವಾದ ಹತ್ತಾರು ದ್ರವ್ಯಗಳು ಇರಬೇಕು. ಕಾಳಿದಾಸನಿಂದ ಸಾಮಾನ್ಯನವರೆಗೆ ಕಾವ್ಯದ ತೇಜಸ್ಸು ತಗುಲಬೇಕಾ ದರೆ ಒಂದು ಅಂತಸ್ತಿನ ವಿಮರ್ಶೆಯೇ ಅಲ್ಲ, ಹತ್ತಾರು ಅಂತಸ್ತಿನ ವಿಮರ್ಶೆಯು ಬೇಕಾಗುತ್ತದೆ. ಕಾವ್ಯದ ಪದ್ಧತಿಯು ಸೂಚನಪದ್ಧತಿ. ಸಂಗೀತದಲ್ಲಿ ಎರಡು ಸ್ವರಗಳ ಬಾಜನದಿಂದ ಅವುಗಳ ನಡುವಣ ಶೂನ್ಯ ವನ್ನು ತುಂಬಿಕೊಳ್ಳುವಂತೆ ಕವಿಯು ಎರಡು ಮಾತುಗಳ ಮೂಲಕ ಅವುಗಳ ನಡುವಣ ಸ್ಥಲವನ್ನು ತುಂಬಿಕೊಂಡು ನಾವು ಕವಿಯ ಭಾವ ವನ್ನು ಗ್ರಹಿಸಬೇಕು. ಹೀಗೆ ಮಾಡುವುದಕ್ಕೆ ಬೇಕಾದ ಊಹೆ ಪ್ರತಿಭೆ ಇವುಗಳನ್ನು ವಿಮರ್ಶಕನು ಇತರರಿಗೆ ತೋರಿಸಿಕೊಡಬೇಕು. ಇದರಲ್ಲಿ ಕವಿಯು ಪ್ರಪಂಚ ವಿವರಣದಲ್ಲಿ ಮಾಡುವ ಸೇವೆಯನ್ನು ವಿಮರ್ಶಕನು ಕಾವ್ಯದ ವಿಷಯದಲ್ಲಿ ಮಾಡುವನು; ಅದರಲ್ಲಿ ಇತರರಿಗೆ ಕಾಣದ ವಿಷಯುವನ್ನು ಉದ್ಧರಿಸಿ ಹೇಳುವನು. ಇದಿಷ್ಟೂ ಉತ್ತಮ ಕಾವ್ಯದ ಮಾತಾಯಿತು. ಉತ್ತಮವಲ್ಲದ ಕಾವ್ಯದ ವಿಷಯದಲ್ಲೂ ವಿಮರ್ಶಕನ ಕೆಲಸವು ಇದೇ ರೀತಿಯದು. ಎಲ್ಲರೂ ಕಾವ್ಯವನ್ನೇ ಬರೆಯುತ್ತ ಹೋದರೆ ಸಾಹಿತ್ಯದ ಕೆಲಸವು ಮುಗಿಯುವುದಿಲ್ಲ. ಕಾವ್ಯದ ಭಾವವು ಅನೇಕರಿಗೆ ತಿಳಿದು ಜನರಲ್ಲಿ ತಿಳಿವಿನ ಮಟ್ಟವು ಏರಬೇಕು. ತಿಳಿವಿನ

ಮಟ್ಟವು ಏರಬೇಕಾದರೆ ಅಭಿಪ್ರಾಯಗಳ ಚರ್ಚೆಯು ಆವಶ್ಯಕವಾಗಿ ನಡೆಯಬೇಕು. ಬರೆಯಬಲ್ಲ ಪ್ರತಿಯೊಬ್ಬನೂ ಸಾಮಾನ್ಯವಾದ ಒಂದು ಗ್ರಂಥವನ್ನು ಬರೆದು ಅದರಲ್ಲಿ ತನ್ನ ಅಭಿಪ್ರಾಯಗಳನ್ನು ಹುಗಿದಿಡು ವುದಕ್ಕೆ ಆರಂಭಮಾಡಿದರೆ ಇಂತ ಚರ್ಚೆಯೇ ಇಲ್ಲವಾಗುವುದು; ಅಸದಭಿಪ್ರಾಯಗಳಿಗೆ ಸಾಕಾದ ನಿರೋಧವಿಲ್ಲದೆ ಹೋಗುವುದು. ಇದ ರಿಂದ ವಿಮರ್ಶೆಯು ವಿಮರ್ಶಕನ ಪ್ರವೃತ್ತಿಗಳ ಸಲುವಾಗಿಯೇ ಅಲ್ಲದೆ ಇತರರಿಗಾಗಿಯೂ ಆವಶ್ಯಕವಾದ ಕಾವ್ಯಶಾಖೆಯೆಂದು ಹೇಳಬೇಕು.

ಶಕ್ತರಾದ ವಿಮರ್ಶಕರಿಂದ ಸದ್ಯ ಇರುವ ಸಾಹಿತ್ಯವು ಎಲ್ಲರಿಗೂ ಚೆನ್ನಾಗಿ ತಿಳಿಯುವುದಲ್ಲದೆ ಮುಂದಕ್ಕೆ ಒಳ್ಳೆಯ ಸಾಹಿತ್ಯವು ಬರು ವುದು ಸಾಧ್ಯವಾಗುವುದು. ಮನುಷ್ಯನ ಬುದ್ಧಿಯೂ ರಾಗವೂ ವ್ಯವ ಹಾರಕ್ಕೆ ಬೇರೆಯೇ ಹೊರತು ಜೀವನದಲ್ಲಿ ಎರಡೂ ಬೆರೆತೇ ಕೆಲಸ ಮಾಡಬೇಕು. ಎರಡನ್ನೂ ಜತೆಯಾಗಿ ನಯಮಾಡುವುದು ನಮ್ಮ ಕರ್ತವ್ಯ. ಮನುಷ್ಯನ ಪುರೋಗಮನದ ಸಾರವೇ ಇದು: ರಾಗದಿಂದ ತಿಳಿದದ್ದನ್ನು ಬುದ್ಧಿಯು ಗ್ರಹಿಸಬೇಕು; ಬುದ್ಧಿಯಿಂದ ತಿಳಿದದ್ದನ್ನು ರಾಗವು ಗ್ರಹಿಸಬೇಕು. ಮೊದಲು ಹಸಿವನ್ನು ತಿಳಿದ ಪ್ರಾಣಿಗಳು ಅದಕ್ಕೆ ಒಂದು ಹೆಸರನ್ನು ಇಟ್ಟುದೂ, ಸುಖವನ್ನು ತಿಳಿದವು ಅದಕ್ಕೆ ಇನ್ನೊಂದು ಹೆಸರನ್ನು ಇಟ್ಟುದೂ ಮನುಷ್ಯನ ಆತ್ಮಜ್ಞಾನದಲ್ಲಿ ಒಂದೊಂದು ಹೆಜ್ಜೆ. ಆ ಆರಂಭದ ಅವಸ್ಥೆಯಿಂದ ಮನುಷ್ಯನು ಈಗ್ಗೆ ಬಹಳದೂರ ಪ್ರಯಾಣಮಾಡಿ ಬಂದಿದಾನೆ. ಬಹಳದೂರ ಬಂದಿರುವುದ ರಿಂದ ಆ ಆರಂಭದ ಅವಸ್ಥೆ ಒಂದು ಇದ್ದಿರಬೇಕೆಂಬುದನ್ನು ಊಹಿಸು ವುದು ಕೂಡ ಅವನಿಗೆ ಸಾಧ್ಯವಲ್ಲದೆ ಆಗಿದೆ. ಆದರೆ ಸ್ವಲ್ಪ ಪರಾಮರ್ಶೆ ದಿಂದ ನೋಡಿದೆವಾದರೆ ಹಿಂದೆ ಆ ಅವಸ್ಥೆ ಇದ್ದುದೇ ಅಲ್ಲದೆ ಈಗ ನಡೆಯುವ ಭಾವ ವಿವರಣದ ನ್ಯಾಸವೂ ಕೂಡ ಅನುಭವಕ್ಕೆ ಹೆಸರನ್ನಿ ಡುವ ಅದೇ ನ್ಯಾಸವೆಂದು ತಿಳಿಯುವುದು. ಕಲೆಯೆಲ್ಲ ರಸವ್ಯಕ್ತಿಗಾಗಿ ನಡೆಯುವ ಕೆಲಸ. ಒಬ್ಬನಿಗೆ ಬಂದ ಅನುಭವವನ್ನು ಇನ್ನೊಬ್ಬನಿಗೆ ತಿಳಿಸುವುದೇ ಅದರ ಉದ್ದೇಶ. ಕಾವ್ಯವು ಅಂತರ್ಯದ ಅನುಭವಕ್ಕೆ ಇಡುವ ಒಂದು ಹೆಸರು; ಸರಳವಾದ ಮೂರಕ್ಷರದ ಹೆಸರಲ್ಲ, ಸ್ವಲ್ಪ

ಕಷ್ಟವಾಗಿ ತಿಳಿಯುವ ಹೆಸರು. ಆದದ್ದರಿಂದ ಈ ಹೆಸರನ್ನು ಹೇಳುವುದೇ ಅಲ್ಲದೆ ಅದು ಅನೇಕರಿಗೆ ತಿಳಿಯುವ ಹಾಗೆ ಮಾಡುವುದರಿಂದ ಜನರಲ್ಲಿ ತಿಳಿವು ವಿಸ್ತಾರವಾಗುತ್ತದೆ, ಪರಿಷ್ಕಾರವಾಗುತ್ತದೆ. ಸಾಹಿತ್ಯವು ಈ ಹೆಸರಾದರೆ, ವಿಮರ್ಶೆಯು ಈ ವಿವರಣ; ವಿಮರ್ಶೆಯು ಸಾಹಿತ್ಯ ಸಮಷ್ಟಿಯ ಅಂಗೋಪಾಂಗಗಳನ್ನೂ ಜೀವಾತ್ಮಾದಿ ವಿಷಯಕವಾದ ನಿಗೂಢ ತತ್ವಗಳನ್ನೂ ವಿವರಿಸಿ ಪ್ರತ್ಯೇಕಿಸಿ ಅದರ ಅರ್ಥವನ್ನೂ ಉದ್ದೇಶವನ್ನೂ ಸರ್ವರಿಗಾಗಿ ಸ್ಪಷ್ಟಗೊಳಿಸಿದಹಾಗೆಲ್ಲ ಜನರಲ್ಲಿ ಸಾಹಿತ್ಯವು ಉತ್ತಮವಾಗುವುದಕ್ಕೆ ಆವಶ್ಯಕವಾದ ಅವಸ್ಥೆಯು ಮತ್ತೆಮತ್ತೆ ಹತ್ತಿರವಾಗುವುದು. ಒಂದು ತಲೆಮಾರಿನಲ್ಲಿ ಕೆಲವರಿಗೆ ಮಾತ್ರ ತಿಳಿದ ವಿಷಯವು ಇನ್ನೊಂದು ತಲೆಮಾರಿನಲ್ಲಿ ಹತ್ತು ಜನರಿಗೆ ತಿಳಿಯುವುದು. ಒಂದು ತಲೆಮಾರಿನಲ್ಲಿ ಒಂದು ವಿಷಯ ತಿಳಿದರೆ ಇನ್ನೊಂದರಲ್ಲಿ ಹತ್ತು ತಿಳಿದಿರುವುದು. ಒಂದು ತಲೆಮಾರಿನ ಜನ ಸರಿಯೆಂದು ತಿಳಿದಿದ್ದ ವಿಷಯಕ್ಕೆ ಹತ್ತು ಆಕ್ಷೇಪಗಳು ತೋರಿಬಂದು ಇನ್ನೊಂದು ತಲೆಮಾರಿನ ಜನ ಸಾಹಿತ್ಯಜ್ಞಾನದಲ್ಲಿ ಅವರಿಗಿಂತ ಮುಂದಾಗುವರು. ಕವಿಯು ಸುತ್ತಣ ಪ್ರಸ್ಥಭೂಮಿಯ ನಡುವೆ ಇರುವ ಪರ್ವತ ಶಿಖರ. ವಿಮರ್ಶೆಯಿಂದ ಈ ಪ್ರಸ್ಥಭೂಮಿ ಉಂಟಾಗುವುದು. ಅದರ ನಡುವೆ ಕವಿಯು ಸಾಧ್ಯವಾಗುವನು. ಜನಾಂಗದ ಮನಸ್ಸು ಕಾವ್ಯಾವೇಶದ ಸಮೀಪ ಸ್ಥಳಗಳಲ್ಲಿ ಸುಳಿಯುವುದು ವಾಡಿಕೆಯಾಗುವುದು.

ಇದೆಲ್ಲ ಸಾಹಿತ್ಯದ ಏಳ್ಗೆಗೆ ಬೇಕಾದ ಕಾರ್ಯ, ಜನಾಂಗದ ಪುರೋಭಿವೃದ್ಧಿಯಲ್ಲಿ ಮುಖ್ಯವಾದ ಕಾರ್ಯ. ಆದದ್ದರಿಂದ ವಿಮರ್ಶೆಯನ್ನು ಬರೆಯುವುದಕ್ಕೆ ಬದಲಾಗಿ ಕಾವ್ಯವನ್ನು ಬರೆಯಬಾರದೆ ಎಂದು ನಾವು ಕೇಳಬಾರದು. ಕಾವ್ಯನಿರ್ಮಾಣಶಕ್ತಿ ಇರುವವರೂ ಕೂಡ ಈ ಕಾರ್ಯದಲ್ಲಿ ಕೈಹಾಕುವುದು ವ್ಯರ್ಥವಲ್ಲ. ಅಂತವರು ವಿಮರ್ಶೆಗೆ ಕೈಹಾಕಿದರೆ ಅದಕ್ಕೆ ಒಂದು ಹೊಸ ಕಳೆ ಬರುವುದು. ಇದೂ ಈ ಸಂದರ್ಭದಲ್ಲಿ ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ವಿಷಯ. ಕಾವ್ಯವು ಸಾಹಿತ್ಯದ ಉನ್ನತ ರೂಪವಾದ್ದರಿಂದ ಅದನ್ನು ವಿಮರ್ಶೆಯಿಂದ ಬೇರೆಯೆಂಬಂತೆ ಹೇಳುತ್ತಿದೆ. ಆದರೆ ವಿಮರ್ಶೆಯೂ

ಒಂದು ರೀತಿಯ ಉಪನ್ಯಾಸ; ಅದು ಸಾಹಿತ್ಯದಲ್ಲಿಯ ಒಂದು ಶಾಖೆ. ವಿಮರ್ಶಕನು ಸಾಮಾನ್ಯನಾದರೆ ಅವನು ಸಾಮಾನ್ಯ ಉಪನ್ಯಾಸಕಾರ ನಂತಾಗುವನು; ಪ್ರತಿಭಾಶಾಲಿಯಾದರೆ ಉಪನ್ಯಾಸವು ಉತ್ತಮವಾದ ಉಪನ್ಯಾಸವಾಗುವುದು. ಪ್ರತಿಭಾಶಾಲಿಯ ವಿಮರ್ಶೆಯಲ್ಲಿ ಕವಿಯ ತತ್ವ ಬೋಧೆಯಂತೆ ಕಾವ್ಯ ವಿವರಣವು ರಸಯುಕ್ತವಾಗುವುದು. ಅಂಥ ವಿಮರ್ಶೆಯೂ ಕಾವ್ಯವೇ ಸರಿ. ನಮ್ಮಲ್ಲಿ ಈ ರೀತಿಯ ಬರವಣಿಗೆ ಬೆಳೆಯದೆ ಇರುವುದರಿಂದ ನಮಗೆ ಈ ಮಾತು ಅರ್ಥವಾಗದೆ ಹೋಗ ಬಹುದು. ಆದರೆ ಪಶ್ಚಿಮ ದೇಶಗಳ ಸಾಹಿತ್ಯದಲ್ಲಿ ವಿಮರ್ಶೆಯು ಧರಿಸಿರುವ ರೂಪಗಳನ್ನು ನೋಡಿದರೆ ಈ ವಿಷಯದಲ್ಲಿ ಸಂದೇಹ ಬರು ವುದಿಲ್ಲ. ಮ್ಯಾತ್ಯು ಆರ್ನಾಲ್ಡ್, ಲೆಸ್ಲೀ ಸ್ಟೀವನ್, ಜಾನ್ ಮಾರ್ಲೀ ಮೊದಲಾದ ವಿಮರ್ಶಕವರ್ಯರು ಇಂಗ್ಲಿಷಿನಲ್ಲಿ ಬರೆದಿರುವ ಉಪನ್ಯಾಸ ಗಳು ಸಾಹಿತ್ಯದಲ್ಲಿ ಅತ್ಯುನ್ನತವಾದ ಸ್ಥಾನಕ್ಕೆ ಅರ್ಹವಾದುವು. ಅವುಗಳಲ್ಲಿ ಅವರ ಜೀವನದ ಉತ್ತಮ ಸಂಸ್ಕಾರವೆಲ್ಲದರ ಛಾಯೆಯೂ ರೂಪುಗೊಂಡಿದೆ. ಉತ್ತಮ ಕವಿಯ ಕಾವ್ಯ ಒಂದನ್ನು ಓದಿದ್ದರಿಂದ ನಮಗೆ ಯಾವ ಸುಖ ಉಂಟಾಗಬಹುದೋ ಯಾವ ಸಂಸ್ಕಾರ ಉಂಟಾ ಗಬಹುದೋ ಆ ಸಂಸ್ಕಾರವು ಈ ಮಹನೀಯರ ವಿಮರ್ಶನಲೇಖನ ಗಳನ್ನು ಓದುವುದರಿಂದ ಉಂಟಾಗುವುದು. ಪ್ರಪಂಚ ಜ್ಞಾನವನ್ನುಂಟು ಮಾಡಿ ರಾಗಗಳನ್ನು ಶೋಧಿಸಿ ಬುದ್ಧಿಯನ್ನು ವಿಕಾಸಗೊಳಿಸುವ ಇವರ ಈ ಲೇಖನಗಳನ್ನು ಓದಿ ಆಶ್ಚರ್ಯಪಡುವ ನಮಗೆ ಈ ಮಹನೀಯರು ಫ್ರಾನ್ಸಿನ ವಿಮರ್ಶಕರ ವಿಷಯದಲ್ಲಿ ಹೇಳಿರುವ ಮಾತನ್ನು ಕೇಳಿದರೆ ಮತ್ತಷ್ಟು ಆಶ್ಚರ್ಯವಾಗುವದು. ಫ್ರಾನ್ಸಿನಲ್ಲಿಯ ವಿಮರ್ಶೆಯ ಎತ್ತರಕ್ಕೆ ಇಂಗ್ಲಿಷರ ವಿಮರ್ಶೆಯು ಹೋಗಿಲ್ಲವೆಂದು ಇವರು ಅಭಿಪ್ರಾಯ ಪಡುತ್ತಾರೆ. ಹಾಗಾದರೆ ವಿಮರ್ಶೆ ಇನ್ನು ಎಷ್ಟು ಉತ್ತಮವಾದಕಾವ್ಯ ವಾಗುವುದು ಸಾಧ್ಯ ಎಂಬುದನ್ನು ಹೇಳಬೇಕಾದದ್ದಿಲ್ಲ. ಆದದ್ದರಿಂದ ವಿಮರ್ಶೆಯ ಕಾರ್ಯವು ಎಂತ ಶಕ್ತನಾದ ಲೇಖಕನಾದರೂ ಕೈಹಾಕ ಬಹುದಾದಷ್ಟು ಉನ್ನತವಾದ ಕಾರ್ಯ. ಕಾವ್ಯವನ್ನು ಬರೆಯುವ ಸಂಸ್ಕಾರ ಉಳ್ಳವನು ಬರೆದದ್ದಾದರೆ ಅದು ಬಹುಮಟ್ಟಿಗೆ ಕಾವ್ಯವೇ

ಆಗುವುದು. ಆ ಸಂಸ್ಕಾರವಿಲ್ಲದೆ ಉಳಿದ ಶಕ್ತಿ ಇರುವವನು ಬರೆದದ್ದಾದರೆ ಅದು ಲೇಖಕನ ಸಂಸ್ಕಾರವನ್ನು ಪೂರ್ತಿಗೊಳಿಸುವ ಬುದ್ಧಿಪ್ರಮುಖವಾದ ಉಪನ್ಯಾಸವಾಗುವುದಲ್ಲದೆ ಸಾಹಿತ್ಯದ ಅರ್ಥವನ್ನು ಜನರಿಗೆ ತಿಳಿಸಿ ಅದರ ಏಳ್ಗೆಗೆ ಸಹಾಯವಾಗಿ ಜನರಿಗೂ ಜನಾಂಗಕ್ಕೂ ಉಪಯುಕ್ತವಾಗುವುದು.

ಸಾಹಿತ್ಯದ ವಿಷಯದಲ್ಲಿ ಸಾಕಾದ ಜ್ಞಾನವೂ ಪರಿಶ್ರಮವೂ ಇಲ್ಲದೆ ವಿಮರ್ಶೆಯ ಕಾರ್ಯವು ಎಷ್ಟು ಉನ್ನತವಾದುದೆಂಬುದನ್ನು ತಿಳಿಯದೆ ಬರೆಯುವ ವಿಮರ್ಶೆಯು ಕೇವಲ ವ್ಯರ್ಥಮಾತ್ರ ಆಗುವುದಲ್ಲದೆ ಹಾನಿಯನ್ನುಂಟುಮಾಡುವುದು. ಅಲ್ಪಜ್ಞಾನ ಅಲ್ಪಪರಿಶ್ರಮದಿಂದ ಉಂಟಾದ ಕಾವ್ಯಕ್ಕಿಂತ ಅಲ್ಪಜ್ಞಾನ ಅಲ್ಪಪರಿಶ್ರಮದಿಂದ ಉಂಟಾಗುವ ವಿಮರ್ಶೆಯಿಂದ ಬರುವ ಹಾನಿ ಹೆಚ್ಚು. ಕಾವ್ಯವು ಒಳ್ಳೆಯದಾಗದೆ ಅದರಿಂದ ಇತರರಿಗೆ ರಾಗ ಸಂಸ್ಕಾರ ಉಂಟಾಗದೇ ಹೋದರೂ ತೊಂದರೆ ಇಲ್ಲ. ಅಲ್ಲದೆ ಅದರಲ್ಲಿಯ ದೋಷವನ್ನು ಓದುವವನ ಹೃದಯವು ಸುಲಭವಾಗಿ ಅರಿಯುವುದು. ವಿಮರ್ಶೆ ದುಷ್ಟವಾದದ್ದಾದರೂ ಬುದ್ಧಿಯ ಆಡಂಬರದಿಂದ ಕೂಡಿರುವುದರಿಂದ ಸಾಮಾನ್ಯರಿಗೆ ಅದರ ದೋಷ ಅಷ್ಟು ಸುಲಭವಾಗಿ ತಿಳಿಯುವುದಿಲ್ಲ. ಕಾವ್ಯದ ರಚನೆ ಅರ್ಧ ಕವಿಗಾಗಿ, ಅರ್ಧ ವಾಚಕರಿಗಾಗಿ; ಕ್ಷುದ್ರ ಕಾವ್ಯವು ಇತರರಿಗೆ ಸುಖಕೊಡದೆ ಇದ್ದರೂ ಅದರಿಂದ ಕವಿಯ ದಾಹವಾದರೂ ಶಮನವಾದ ಹಾಗಾಯಿತು. ವಿಮರ್ಶೆಯು ಕ್ಷುದ್ರವಾಗಲಿ ಅಲ್ಲದೆ ಇರಲಿ ಕೇವಲ ಅಥವಾ ಬಹಳಮಟ್ಟಿಗೆ ವಾಚಕರಿಗಾಗಿ ಉದ್ದೇಶಿಸಲ್ಪಟ್ಟದ್ದು. ಬುದ್ಧಿ ವಿಕಾಸದಿಂದ ಆದದ್ದೆಂದು ಹೆಸರಿಟ್ಟುಕೊಂಡು ಅದು ಮಡ್ಡಿತನದಿಂದ ಉಂಟಾಗಿದ್ದರೆ ಅದು ತಿಳಿಯದವರನ್ನು ಮೋಸಗೊಳಿಸುವುದು. ವಿಮರ್ಶೆಯು ಕೌಶಲಾಪೇಕ್ಷೆಯಲ್ಲಿ ನೇತ್ರ ವೈದ್ಯದಂತೆ. ನೇತ್ರವ್ಯಾಧಿಗೆ ಶಸ್ತ್ರವೈದ್ಯವನ್ನು ಮಾಡಲು ಕವಿರಾಜನಾದರೂ ಹಿಂಜರಿಯಬೇಕು; ಇಂತದರಲ್ಲಿ ಕೊಡಲಿಯನ್ನು ಹಿಡಿದು ಸೌದೆಯನ್ನು ಸೀಳಲು ಕಲಿತ ಕೈಯಿಂದ ಕಣ್ಣು ಸರಿಮಾಡುವೆನೆಂದು ಶಲ್ಯವನ್ನು ತರುವರೆ? ವಿಮರ್ಶೆಯು ಕಾವ್ಯವನ್ನು ತಿರಸ್ಕರಿಸುವುದರಲ್ಲಿಯೂ ಪುರಸ್ಕರಿಸು

ವುದರಲ್ಲಿಯೂ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು; ತನ್ನ ಕೆಲಸದಲ್ಲಿ ಅತಿ ಜಾಗ್ರತೆಯಿಂದ ಪ್ರವರ್ತಿಸಬೇಕು.

ವಿಮರ್ಶೆಯು ವಿಷಯವೆಂದು ತಿಳಿಯದೆ ಅದಕ್ಕೆ ಆವಶ್ಯಕವಾದ ಸಂಸ್ಕಾರವಿಲ್ಲದೆ ಬರೆಯುವ ವಿಮರ್ಶೆಯು ಹಾನಿಕರವಾಗುವುದನ್ನು ನಾವು ಸಾಹಿತ್ಯ ಚರಿತ್ರೆಯಲ್ಲಿಯೂ ಪ್ರಾಯಶಃ ನಮ್ಮಲ್ಲಿ ಈಗ ಇರುವ ಬಹುಭಾಗದ ವಿಮರ್ಶೆಯಿಂದಲೂ ತಿಳಿಯಬಹುದು. ಆಂಗ್ಲೇಯ ಸಾಹಿತ್ಯದಲ್ಲಿ ಹದಿನೆಂಟನೆಯ ಶತಮಾನದ ಕೊನೆಯಲ್ಲಿ ವಿಮರ್ಶೆಯು ಹೆಚ್ಚು ವಾಡಿಕೆಗೆ ಬಂತು. ಹೊಸ ರೀತಿಯ ಕಾವ್ಯಗಳು ಬಂದಂತೆ ಹೊಸ ರೀತಿಯ ವಿಮರ್ಶೆಯೂ ಬಂದು ಕೆಲವರು ವಿಮರ್ಶಕರು ಕವಿಯನ್ನು ಹಿಡಿದು ತೂಕಮಾಡುವುದು ಅಥವಾ ನ್ಯಾಯಾಧಿಕಾರಿಯು ಅಪರಾಧಿಯ ತಪ್ಪನ್ನು ನಿರ್ಧರಿಸುವ ಹಾಗೆ ಕವಿಯ ಕಾವ್ಯದ ತಪ್ಪನ್ನು ನಿರ್ಧರಿಸುವುದೇ ತಮ್ಮ ಕೆಲಸ ಎಂದು ತಿಳಿದಿದ್ದಂತೆ ಕಾಣುತ್ತದೆ. ಈ ನಿರ್ಧರಣ ಕಾರ್ಯದಲ್ಲಿ ಅವರು ಈಗ ಆಂಗ್ಲ ಸಾಹಿತ್ಯದಲ್ಲಿ ಉತ್ತಮರೆಂದು ಗಣಿಸಲ್ಪಟ್ಟಿರುವ ವರ್ಡ್ಸ್‌ವರ್ತ್, ಕೀಟ್ಸ್ ಎಂಬ ಇಬ್ಬರು ಕವಿಗಳನ್ನು ಅತಿ ಹೀನವಾಗಿ ಬಯ್ದರು. ಆ ತಪ್ಪು ಆ ವಿಮರ್ಶಕರಲ್ಲಿ ಅಕ್ಷಮ್ಯ ವೆಂದು ನಾವು ಹೇಳಲಾಗುವುದಿಲ್ಲ; ಆಗ್ಯೆ ಅವರಿಗೆ ತಿಳಿದದ್ದು ಅಷ್ಟು. ಈಗ ನಾವು ಏನು ಮಾಡಬೇಕೆಂದರೆ ವಿಮರ್ಶೆಯ ವಿಷಯವನ್ನು ಸರಿಯಾಗಿ ತಿಳಿದುಕೊಂಡು ಒಂದುಸಲ ಅಲ್ಲಿ ನಡೆದ ತಪ್ಪನ್ನು ಇಲ್ಲಿ ಮತ್ತೆ ನಡೆಯಿಸದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು. ನಮ್ಮ ಸೀಮೆಯ ಈಗಣ ವಿಮರ್ಶೆಯಲ್ಲಿ ಈ ತಿಳಿವಿನ ಚಿಹ್ನೆ ಕಾಣಲಿಲ್ಲ. ಓದುವ ಪುಸ್ತಕದಲ್ಲಿ ಇದು ಸರಿಯಾಗಿದೆ ಇದು ಸರಿಯಾಗಿಲ್ಲ ಎನ್ನುವುದು ಮಾತ್ರ ವಿಮರ್ಶೆ; ಅಥವಾ ಈ ಪದವು ವ್ಯಾಕರಣಕ್ಕೆ ಸರಿಯಾಗಿದೆ ಅಥವಾ ಇಲ್ಲ ಎನ್ನುವುದು ವಿಮರ್ಶೆ. ವಿಷಯ ಸಣ್ಣದಾದರೆ ಹೋಗಲಿ ಅದನ್ನು ಮರ್ಯಾದೆಯಿಂದ ಹೇಳಿದರೆ ಒಂದು ಮಾದರಿ; ವಿಮರ್ಶೆಯಲ್ಲಿ ತಿರುಳಿಲ್ಲದಿದ್ದರೂ ಲಕ್ಷಣವಾದರೂ ಇದೆ ಎನ್ನಬಹುದು. ಕೆಲವು ವಿಮರ್ಶೆಯಲ್ಲಿ ಇದೂ ಇರುವುದಿಲ್ಲ. ಇದಕ್ಕನುಸಾರವಾಗಿ ಕುಹಕ, ಕುಚೋದ್ಯ, ಭಾವಲಾಘವ, ಉಕ್ತಿಲಾಘವ, ಅಪ್ರಬುದ್ಧರು ಪರಸ್ಪರ

ಅವಹೇಳನದಲ್ಲಿ ಉಪಯೋಗಿಸುವ ಅಹಹಾ ಉಹುಹೂ ಎಂಬಂತ ಮಾತುಗಳು ಇರುತ್ತವೆ. ಇದು ವಿಮರ್ಶೆಯ ದಾರಿಯಲ್ಲ. ಅಹಹಾ ಎಂದು ಅವಹೇಳನಮಾಡಬೇಕಾದಷ್ಟು ನಿಕೃಷ್ಟವಾದ ಗ್ರಂಥವನ್ನು ಕುರಿತಾದರೂ ವಿಮರ್ಶಕನು ಅದರ ತಗ್ಗಿಗೆ ಇಳಿದು ಬರೆಯಬಾರದು. ವಿಮರ್ಶಕನು ಹಾಸ್ಯಮಾಡಬಾರದೆಂದಲ್ಲ. ಯಾವುದನ್ನೂ ಭಾವಗೌರವ ಉಕ್ತಿಗೌರವದಿಂದ ಮಾಡಬೇಕೆಂಬುದು ಮಾತ್ರ ಇಲ್ಲಿಯ ಅಭಿಪ್ರಾಯ. ಈ ಕೆಲಸವೇ ಇಷ್ಟರಮಟ್ಟಿಗೆ ಆದಮೇಲೆ ವಿಮರ್ಶೆಯ ಇತರ ಕಾರ್ಯದ ಎಷ್ಟು ಸ್ವಲ್ಪ ಭಾಗವೂ ನಮ್ಮಲ್ಲಿ ಈಗ ಬಹಳಮಟ್ಟಿಗೆ ನಡೆಯುತ್ತಿಲ್ಲವೆಂದು ಹೇಳಬೇಕಾದದ್ದಿಲ್ಲ. ಇದೆಲ್ಲದರ ಕಾರಣ ಬಹಳ ಮಟ್ಟಿಗೆ ವಿಮರ್ಶೆಗೆ ಬೇಕಾದ ತಿಳಿವು ಇಲ್ಲದವರು ವಿಮರ್ಶೆಯಲ್ಲಿ ಉದ್ಯುಕ್ತರಾಗಿರುವುದು. ಕವಿಗಿಂತಲೂ ವಿಮರ್ಶಕನು ತನ್ನ ಶಕ್ತಿಯ ವಿಷಯದಲ್ಲಿ ಅಧಿಕವಾದ ಯೋಚನೆಯುಳ್ಳವನಾಗಿರಬೇಕು; ತಾನು ಹೇಳುವುದು ಸರಿಯೇ ತಾನು ಮಾಡುವುದು ಸರಿಯೇ ಎಂದು ಪರಾಮರ್ಶವುಳ್ಳವನಾಗಿರಬೇಕು ಎಂಬುದೇ ಇದರಿಂದ ತಿಳಿಯಬೇಕಾದುದು.

ಇದು ವಿಮರ್ಶಕನ ಮಾತಾಯಿತು. ಸಾಹಿತ್ಯವು ಮುಂದುವರಿಯಬೇಕಾದರೆ ಕವಿಯೂ ಈ ವಿಷಯಗಳಿಗೆ ಗಮನಕೊಡಬೇಕು. ಉತ್ತಮ ಕವಿಯಲ್ಲಿ ಅವನ ಆವೇಶಕ್ಕೆ ತಕ್ಕ ವಿಮರ್ಶೆಯೂ ಇರುವುದೆಂದು ಈ ಚರ್ಚೆಯಲ್ಲಿ ಹೇಳುತ್ತ ಬಂದಿದೆ. ಈ ಆವೇಶ ಶುದ್ಧಿ ಇರುವುದು ಎಲ್ಲ ಕವಿಗಳಿಗೂ ಅಲ್ಲವೆಂಬುದನ್ನು ಚೆನ್ನಾಗಿ ತಿಳಿಯಬೇಕು. ಇದನ್ನು ಕವಿಯು ತಿಳಿಯುವುದು ಅತ್ಯಾವಶ್ಯಕ. ಕಾವ್ಯವು ಸಾರ್ಥಕವಾಗಬೇಕಾದರೆ ಓದುವವರು ಅದರಿಂದ ಉದ್ದಿಷ್ಟವಾದ ಸಂಸ್ಕಾರವನ್ನು ಪಡೆಯಬೇಕು. ಓದುವವರು ಅದನ್ನು ಪಡೆಯುವರೇ ಇಲ್ಲವೇ ಎಂಬುದನ್ನು ಕವಿಯು ವಿಮರ್ಶಕನ ಮೂಲಕ ಮಾತ್ರ ತಿಳಿಯಬಹುದು. ವಿಮರ್ಶಕನು ಕವಿಗಿಂತ ಹೆಚ್ಚು ತಿಳಿವಳಿಕೆಯವನಾದರೂ ಕಡಿಮೆ ತಿಳಿವಳಿಕೆಯವನಾದರೂ ಅವನು ಸಾವಧಾನವಾಗಿ ಯೋಚಿಸಿ ತನ್ನಲ್ಲಿ ನಿಜವಾಗಿಯೂ ಉಂಟಾದ ಅಭಿಪ್ರಾಯವನ್ನು ಬರೆದರೆ ಅದನ್ನು ನಿರಾಕರಿಸುವುದಕ್ಕೆ ಕವಿಗೆ ಅಧಿಕಾರವಿಲ್ಲ. ವಿಮರ್ಶಕನ ಮಾತನ್ನು ಗ್ರಹಿಸಿ

ಆದರಿಂದ ತಾನು ಏನು ತಿಳಿಯಬೇಕೆಂಬುದನ್ನು ನೋಡುವುದಕ್ಕೆ ಮಾತ್ರ ಅವನಿಗೆ ಅಧಿಕಾರ ಉಂಟು. ಯೋಚನೆ ಮಾಡಿ ಆ ಅಭಿಪ್ರಾಯ ತನಗೆ ಒಪ್ಪದೆ ಇದ್ದರೆ ಬಿಡಲಿ; ಆದರೆ ಬಿಡುವಮೊದಲು ಯೋಚನೆಮಾಡುವುದು ಆವಶ್ಯಕ. ಕೆಲವುವೇಳೆ ವಿಮರ್ಶಕನು ಹೇಳುವ ಮಾತು ಕವಿಗೇ ಮೊದಲು ತೋರಿ ಇದ್ದಿರಬಹುದು; ಆಗ್ಯೆ ವಿಮರ್ಶಕನು ಯೋಚನಾಪರನೆಂದೇ ಆಯಿತು. ಅನೇಕ ವೇಳೆ ವಿಮರ್ಶಕನ ಮಾತು ಕವಿಗೆ ತೋರದೆ ಇದ್ದಿರಬಹುದು; ಅದು ಆಗ್ಗೆ ಪಾಠಕರ ಕಡೆಯಿಂದ ಕಾವ್ಯ ಹೇಗೆ ಕಾಣುವುದೆಂಬುದನ್ನು ಕವಿಗೆ ತೋರಿಸುವುದು. ತನ್ನ ವಾಚಕ ಸಮುದಾಯದ ಸ್ವಭಾವವನ್ನು ತಿಳಿಯುವುದು ಕವಿಗೆ ಆವಶ್ಯಕವಾದದ್ದರಿಂದ ತಾನು ಎಷ್ಟೇ ದೊಡ್ಡವನಾದರೂ ಕವಿಯು ಇದಕ್ಕೆ ತನ್ನ ಮನಸ್ಸನ್ನು ಬಗ್ಗಿಸಬೇಕು. ಹೀಗೆ ಮಾಡಿಯೇ ಕಾವ್ಯವು ಸಾರ್ಥಕವಾಗಬಹುದು.

ಸಾಹಿತ್ಯದ ಆತ್ಮಜ್ಞಾನವಾದ ವಿಮರ್ಶೆಯ ವಿಚಾರವನ್ನು ಸ್ವಲ್ಪಮಟ್ಟಿಗೆ ಚರ್ಚಿಸಲು ಯತ್ನಮಾಡಿರುವ ಈ ಉಪನ್ಯಾಸದಲ್ಲಿ ಈಗ ನಮ್ಮ ಸಾಹಿತ್ಯದಲ್ಲಿ ಇಂಥ ಆತ್ಮಜ್ಞಾನದಿಂದ ನಡೆಯಬೇಕಾಗಿರುವ ಕೆಲಸ ಯಾವುದೆಂದು ಸಂಕ್ಷೇಪವಾಗಿ ಸೂಚಿಸಬಹುದು. ಈಗ ನಮ್ಮ ಸಾಹಿತ್ಯವು ಎರಡನೆಯ ಬಾಲ್ಯಾವಸ್ಥೆಯಲ್ಲಿ ಇದೆ. ಅದು ಇನ್ನೊಂದು ಜೀವನದ ಪಥವನ್ನು ನಡೆಯಬೇಕಾಗಿದೆ. ಹಿಂದಣ ಗ್ರಂಥಗಳು ಎಷ್ಟೇ ಒಳ್ಳೆಯವಾದರೂ ಹಿಂದೆ ನಡೆದ ಪಥವನ್ನೇ ಮತ್ತೆ ನಡೆಯುತ್ತೇವೆ ಹಿಂದಣ ಗ್ರಂಥಗಳನ್ನೇ ಪ್ರತಿಮಾಡುತ್ತೇವೆ ಎಂದರೆ ಸಾಹಿತ್ಯವು ಜನಾಂಗದ ಜೀವನದಲ್ಲಿ ಯಾವ ಕಾರ್ಯವನ್ನು ನೆರವೇರಿಸಬೇಕೋ ಆ ಕಾರ್ಯವನ್ನು ನೆರವೇರಿಸಲಾರದು. ಮನುಷ್ಯನ ಸ್ವಭಾವವು ಬೇರೆಯಾಗದೆ ಆಸೆಗಳು ಬೇರೆಯಾಗದೆ ಇದ್ದರೂ ಯೋಚನೆಯೂ ಅಭಿಪ್ರಾಯಗಳೂ ಹಿಂದಿನವೇ ಈಗಲೂ ಇಲ್ಲ. ಇವು ಬೇರೆಯಾದ ಹಾಗೆ ಇವುಗಳನ್ನು ಕುರಿತ ಸಾಹಿತ್ಯವೂ ಬೇರೆ ಬೇರೆಯ ರೀತಿಯಲ್ಲಿ ತನ್ನ ಕಾರ್ಯಕ್ಕೆ ಕೈಹಾಕಬೇಕು. ಜೀವವುಳ್ಳ ಜನಾಂಗದಲ್ಲಿ ಜೀವವುಳ್ಳ ಸಾಹಿತ್ಯದಲ್ಲಿ ಈ ಹೊಸ ರೀತಿಯು ತಾನಾಗಿ ಕಾಲಕ್ರಮದಲ್ಲಿ ಬರುವುದು; ಆದರೆ ಅದು

ಜಾಗ್ರತೆಯಲ್ಲಿ ಬರುವಂತೆ ಮಾಡುವುದೂ ಸಾಧ್ಯ. ಇದನ್ನು ವಿಮರ್ಶೆಯು ಮಾಡಬೇಕು. ಹೀಗೆ ಸಾಹಿತ್ಯವು ಹೊಸ ಮುಖವಾಗಿ ಪರಿಣಮಿಸುವಂತೆಯೂ ಹೊಸ ಮುಖವಾಗಿ ಬಂದಿರುವ ಜೀವನದ ಪ್ರಶ್ನಾಂಶಗಳಿಗೆ ಉತ್ತರಕೊಡುವಂತೆಯೂ ಮಾಡಿಸುವುದಕ್ಕೆ ವಿಮರ್ಶೆಯು ನಮ್ಮಲ್ಲಿ ಈಗ ಮಾಡಬೇಕಾದ ಕೆಲಸ ನಾನಾಮುಖವಾಗಿದೆ. ಅದು ನಮ್ಮ ಸೀಮೆಯ ಪ್ರಕೃತಕಾಲದ ಜೀವನದ ಅವಸ್ಥೆಗಳನ್ನು ಪರಿಶೀಲಿಸಿ ಅವುಗಳ ಲಕ್ಷಣಗಳನ್ನು ತಿಳಿಸಬೇಕು; ಅದರಲ್ಲಿಯ ಉತ್ತಮ ಭಾವಗಳನ್ನು ಎತ್ತಿ ಪ್ರಶಂಸಿಸಬೇಕು, ದುಷ್ಟ ಭಾಗವನ್ನು ಸಮಾಧಾನವಾಗಿ ಆಕ್ರೋಶವಿಲ್ಲದೆ ಖಂಡಿಸಬೇಕು; ಸಾಹಿತ್ಯಕ್ಕೆ ಸಾಮಗ್ರಿಯಾವುದಿದೆ ಎಂದು ನಿರ್ದೇಶಿಸಬೇಕು, ಅಂತಹ ಸಾಮಗ್ರಿಯನ್ನು ಕವಿಯು ಉಪಯೋಗಿಸಿದಾಗ್ಯೆ ಜನರು ಅದನ್ನು ಸ್ವೀಕರಿಸುವುದು ಸಾಧ್ಯವಾಗುವಂತೆ ಅವರ ಬುದ್ಧಿಯನ್ನು ತಿದ್ದಬೇಕು; ಹಿಂದೆ ನಮ್ಮ ಸಾಹಿತ್ಯದಲ್ಲಿ ಉಪಯೋಗಿಸಲ್ಪಟ್ಟ ಆಕಾರಗಳಲ್ಲದೆ ಇತರ ಆಕಾರಗಳನ್ನು ಜನರ ಪರಿಚಯಕ್ಕೆ ತರಬೇಕು, ಕವಿಗೆ ಉಪಯೋಗವಾಗುವಂತೆ ವಿವರಿಸಬೇಕು; ಸಾಹಿತ್ಯದ ಸಾಧನವಾದ ಭಾಷೆಯಲ್ಲಿ ಯಾವ ವಿಧವಾದ ಕೆಲಸವೆಲ್ಲ ಸಾಧ್ಯವೆಂದು ಪರ್ಯಾಲೋಚನೆ ಮಾಡಬೇಕು; ಇನ್ನೂ ಅದರ ಬಲಾಬಲಗಳನ್ನು ನಿರ್ಧರಿಸಬೇಕು; ಅದನ್ನು ಪುಷ್ಟಿಗೊಳಿಸುವ ದಾರಿಯನ್ನು ನೋಡಬೇಕು; ಮುಖ್ಯವಾಗಿ ನಾವು ಎಲ್ಲರೂ ಎದುರುನೋಡುತ್ತಿರುವ ನಮ್ಮ ದೇಶದ ಮುಂದಣ ಸಾಹಿತ್ಯಕ್ಕೆ ದಾರಿಯನ್ನು ಸರಿಮಾಡಿ ಅದು ಬರುವುದಕ್ಕೆ ಮೊದಲು ಜನರಲ್ಲಿ ಉಂಟಾಗಬೇಕಾದ ಜನಸಾಮಾನ್ಯದ ಬುದ್ಧಿ ಸಂಸ್ಕಾರವನ್ನೂ ವಿಕಾಸವನ್ನೂ ತರಲು ಶ್ರದ್ಧೆಯಿಂದ ತೊಡಗಬೇಕು. ಒಬ್ಬ ವಿಮರ್ಶಕನು ಕಾವ್ಯವನ್ನು ಜೀವನದ ವಿಮರ್ಶೆಯೆಂದು ಕರೆದನು. ಕಾವ್ಯದ ವಿಷಯದಲ್ಲಿ ನಾವು ಇದನ್ನು ಒಪ್ಪದಿದ್ದರೂ ವಿಮರ್ಶೆಯ ಕಾರ್ಯವೇನೆಂಬುದನ್ನು ಈ ಮಾತಿನಿಂದ ಒಂದು ಪರ್ಯಾಯವಾಗಿ ಗ್ರಹಿಸಬಹುದು. ಜೀವನಕ್ಕೆ ಕಾವ್ಯವು ಏನನ್ನು ಮಾಡುವುದೋ ಅದೇ ಕಾರ್ಯವನ್ನು ವಿಮರ್ಶೆಯು ಸಾಹಿತ್ಯಕ್ಕೆ ಮಾಡುವುದು. ಕಷ್ಟನಿಷ್ಠುರದಲ್ಲಿ ಸುಖದಲ್ಲಿ ಸೌಭಾಗ್ಯದಲ್ಲಿ ಮನುಷ್ಯನ ನಾನಾ

ಅವಸ್ಥೆ ಎಲ್ಲದರಲ್ಲಿಯೂ ಸಾಹಿತ್ಯವು ಅವನಿಗೆ ಸಮಾಧಾನವನ್ನೋ ಆನಂದವನ್ನೋ ತರುವುದು; ಬುದ್ಧಿ ರಾಗಗಳನ್ನು ಸ್ತಿಮಿತದಲ್ಲಿಟ್ಟು ಅವನ್ನು ಸುಖದಾಯಕಗಳನ್ನಾಗಿ ಮಾಡುವುದು. ಹೀಗೆ ಸಾಹಿತ್ಯವು ಏಳ್ಗೆಯಲ್ಲಿರಬಹುದು, ತಗ್ಗಿನಲ್ಲಿರಬಹುದು; ಕರ್ತವ್ಯವನ್ನರಿತಿರಬಹುದು. ಅರಿಯದೆ ಇರಬಹುದು; ಸರಿಯಾದ ದಾರಿಯಲ್ಲಿರಬಹುದು ಇಲ್ಲದೆ ಇರಬಹುದು. ಇದು ಹೇಗಾದರೂ ವಿಮರ್ಶೆಯು ಸಾಹಿತ್ಯದ ಜತೆಯಲ್ಲಿ ನಿಂತು ಅದು ಉತ್ಸಾಹದಿಂದ ಅತಿಗೆ ಹೋಗದಂತೆಯೂ ಉತ್ಸಾಹನತೆಯಿಂದ ಭೂಗತವಾಗದಂತೆಯೂ ಅದಕ್ಕೆ ಸಹಾಯವಾಗಿದ್ದು ಅದರ ಸ್ಥಿರವಾದ ಶ್ರೇಯಸ್ಸು ಮತ್ತೆಮತ್ತೆ ಒರುವಂತೆ ಮಾಡುವ ಯತ್ನದಲ್ಲಿ ನಿಲ್ಲಬೇಕು. ನಮ್ಮ ಸಾಹಿತ್ಯದ ಈಗಣ ಅವಸ್ಥೆಯು ಕಷ್ಟಾವಸ್ಥೆಯಾಗಿರುವುದರಿಂದ ವಿಮರ್ಶೆಯು ಈ ಸಂದರ್ಭದಲ್ಲಿ ಮಾಡಬೇಕಾದ ಕೆಲಸವು ಸಾಹಿತ್ಯದ ಒಳ್ಳೆಯ ಸ್ಥಿತಿಯಲ್ಲಿ ಮಾಡಬೇಕಾದದ್ದಕ್ಕಿಂತಲೂ ಕಷ್ಟವಾದ ಕೆಲಸ. ಈ ಕೆಲಸವನ್ನರಿತು ಸಾಹಿತ್ಯದ ಏಳ್ಗೆಗೆ ಬೇಕಾದ ಸರ್ವತೋಮುಖವಾದ ಪ್ರಯತ್ನವನ್ನು ನಮ್ಮಲ್ಲಿಯ ವಿಮರ್ಶೆಯು ಈಗ ಮಾಡಬೇಕಾಗಿದೆ.

---

# ವೈಷ್ಣವದಾಸರ ಕೀರ್ತನೆಗಳು.

---

ನಮ್ಮ ಸೀಮೆಯಲ್ಲಿ ಈಗಲೂ ಭಿಕ್ಷುಕರು ಕೀರ್ತನೆಗಳನ್ನು ಹೇಳುತ್ತಾ ಬೀದಿಗಳಲ್ಲಿ ಬಂದು ಭಿಕ್ಷೆ ತೆಗೆದುಕೊಂಡು ಹೋಗುವ ವಾಡಿಕೆ ಇರುವುದು ಸರಿಯಷ್ಟೆ. ಈಗಿನ ಕಾಲದಲ್ಲಿ ಇದು ಉದರ ಪೋಷಣೆಗಾಗಿ ಮಾಡುವ ಒಂದು ಕಸಬಾಗಿ ಹೋಗಿದೆ. ಇತರ ಕೆಲಸ ಬಾರದ್ದರಿಂದಲೋ ಬಂದರೂ ಅದನ್ನು ಮಾಡಿ ಜೀವನವನ್ನು ಸಂಪಾದಿಸಿಕೊಳ್ಳುವುದಕ್ಕೆ ಮೈಬಗ್ಗದೆ ಇರುವುದರಿಂದಲೋ ಬಹು ಜನರು ಈ ವೃತ್ತಿಯನ್ನು ಅನುಸರಿಸಿರುತ್ತಾರೆ. ಆದರೆ ಪೂರ್ವದಲ್ಲಿ ಹೀಗೆ ಭಿಕ್ಷೆಗೆ ಹೋಗುವುದರ ಉದ್ದೇಶವು ಹೊಟ್ಟೆಯ ಪಾಡನ್ನು ನೋಡುವುದಾಗಿರಲಿಲ್ಲ. ಜನರಿಗೆ ಮನೋರಂಜನವನ್ನುಂಟುಮಾಡುವುದೂ ಜೀವನದ ಮುಖ್ಯ ತತ್ವಗಳನ್ನು ತಿಳಿಸಿ, ಒಳ್ಳೆಯದು ಕೆಟ್ಟದ್ದು ಎಂಬುವುದನ್ನು ತೋರಿಸಿಕೊಟ್ಟು ಸರಿಯಾದ ಮಾರ್ಗದಲ್ಲಿ ನಡೆಯುವುದನ್ನು ಹೇಳಿಕೊಡುವುದೂ, ಈ ಏರ್ಪಾಡಿನ ಉದ್ದೇಶವಾಗಿತ್ತೆಂಬುದು ಸ್ವಲ್ಪ ಯೋಚನೆಯಿಂದ ತಿಳಿಯುವುದು. ಜನರಿಗೆ ಮನೋರಂಜನವು ಅವಶ್ಯಕ. ಜೀವನವು ಸಾರ್ಥಕವಾಗಬೇಕಾದರೆ ಸದಸದ್ವಿವೇಚನವು ಕೇವಲ ಅವಶ್ಯಕ. ಇವು ಜನರೆಲ್ಲರಿಗೂ ಬರುವಂತೆ ಮಾಡುವುದು ಅವಶ್ಯಕ. ಜನರಿಗೆಲ್ಲ ಮನೋರಂಜನವು ಆಗುವುದು ಹೇಗೆ? ಒಳ್ಳೆಯದಾದ ನೀತಿಯನ್ನು ಸೀಮೆಗೆಲ್ಲಾ ತಿಳಿಯಹೇಳುವ ಬಗೆಹೇಗೆ? ಓದುವುದರಿಂದಲೂ ಯೋಚನೆಯಿಂದಲೂ ತಿಳಿಯುವವರು ಒಬ್ಬರು ಇದ್ದರೆ ಇತರರಿಂದ ಕೇಳಿ ತಿಳಿಯಬೇಕಾದವರು ನೂರು ಜನ ಇರುವರು. ಆ ಒಬ್ಬನು ಈ ನೂರು ಜನಕ್ಕೆ ತನ್ನ ಯೋಚನೆಯನ್ನು ತಿಳಿಸುವುದು ಹೇಗಿದ್ದರೂ ಕಷ್ಟವೇ. ಈಗ ನಾವು ವಿದ್ಯಾಭ್ಯಾಸವೆಂದು ಹೇಳುತ್ತ, ಬಹಳ ಮಾತನಾಡಿ ಕೆಲವು ಅಕ್ಷರಗಳನ್ನು ಹೇಳಿಕೊಡುವ ಮಾತ್ರಕ್ಕಾಗಿ ಅಲ್ಲಲ್ಲಿ ಸ್ಕೂಲುಗಳನ್ನಿಡುವೆವು; ಬಹಳ ಖರ್ಚಿನಿಂದ ಜನಾಂಗದ ಬಹು ಸ್ವಲ್ಪ

ಭಾಗಕ್ಕೆ ಅದು ನೀತಿಯನ್ನು ಕಲಿಯಲು ಅಪೇಕ್ಷಿಸಿದಲ್ಲಿ ಅದನ್ನು ಕಲಿಯುವ ಬಗ್ಗೆ ಸಾಧನವನ್ನು ಮಾತ್ರ ಸಂಪಾದಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿ ಸುಮ್ಮನಿರುವೆವು. ತಿಳಿವಿನಿಂದ ಬರುವ ಸಂತೋಷ ವಾಗಲಿ ನೀತಿಯಾಗಲಿ ಹೀಗೆ ಪ್ರಚಾರವಾಗುವುದೆನ್ನುವುದು ಕೇವಲ ಭ್ರಮೆ. ಹಿಂದಿನಕಾಲದಲ್ಲಿ ಎಲ್ಲರೂ ಓದುಬರಹವನ್ನು ಕಲಿಯುತ್ತಿರಲಿಲ್ಲ; ಈಗಿನಂತೆ ವಿದ್ಯಾಭ್ಯಾಸದ ಏರ್ಪಾಡುಗಳೂ ಇರಲಿಲ್ಲ.. ಆದದ್ದರಿಂದ ತಿಳಿದಂಥ ಒಬ್ಬನ ತಿಳಿವನ್ನು ನೂರು ಜನಕ್ಕೆ ತಿಳಿಸುವದಕ್ಕಾಗಿ ಸಮಾ ಜನೇತೃಗಳು ಪುರಾಣ, ಹರಿಕಥೆ, ಪ್ರಸಂಗ ಮೊದಲಾದ ಅನೇಕ ಸಂದರ್ಭ ಗಳನ್ನು ಕಲ್ಪಿಸಿದರು. ಅಲ್ಲಿಗೆ ಬಂದು ಕೇಳಲಾರದೆ ಇರುವ ಜನರಿಗೆ ಮನೆಗಳಲ್ಲಿ ಕೂಡ ಈ ಸಂಬಂಧದ ಮಾತು ಕಿವಿಗೆ ಬೀಳುವಂತೆ ಮನೆಮನೆಯೂ ಸುತ್ತಿ ನೀತಿ ವಾಕ್ಯಗಳನ್ನು ಜನರಿಗೆ ತಿಳಿಸುವುದಕ್ಕಾಗಿ ನಿತ್ಯಯಾತ್ರೆಯೆಂಬ ಭಿಕ್ಷೆಯ ಏರ್ಪಾಡನ್ನು ಮಾಡಿದರು. ಅದ ರಿಂದಲೇ ನಿತ್ಯಯಾತ್ರೆಯು ಜನರಿಗೆ ಆಗ್ಗೆ ಬಹಳ ಮರ್ಯಾದೆ ಇದ್ದದ್ದು. ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿಯಿಲ್ಲದವರೇ ಪ್ರಾಯಶಃ ಈ ಕಾರ್ಯಕ್ಕೆ ಕೈಹಾಕುತ್ತಿದ್ದರು. ಈ ಕೆಲಸವನ್ನು ಮಾಡುವುದರಲ್ಲಿ ಜನರಿಗೆ ಜ್ಞಾನವನ್ನು ತಂದುಕೊಡುವುದೇ ಅವರ ಮುಖ್ಯ ಉದ್ದೇಶ ವಾಗಿತ್ತು; ಜನರು ಇಷ್ಟಪಟ್ಟು ಕೊಟ್ಟ ಅಲ್ಪಸ್ವಲ್ಪದಿಂದ ಅವರ ಜೀವನವು ನಡೆಯುವುದಕ್ಕೂ ಇದು ದಾರಿಯಾಗಿತ್ತು. ಸಮಾಜ ಕ್ಕಾಗಿ ಕೆಲಸಮಾಡುವವರ ಭರಣವು ನ್ಯಾಯವಾಗಿ ಸಮಾಜವನ್ನೇ ಸೇರಿದ್ದು. ಇಂಥವರು ಬಹುಮಟ್ಟಿಗೆ ವ್ಯವಹಾರ ಪ್ರಪಂಚದ ಉದ್ಯೋಗ ಜೀವನವನ್ನು ಬಿಟ್ಟು ಜನರ ಉನ್ನತಿಗಾಗಿ ಬಾಳನ್ನು ಅರ್ಪಿಸಿ ಆ ಯತ್ನವು ಸಫಲವಾಗಲು ತಾವು ಸರ್ವದಾ ಜ್ಞಾನಾರ್ಜನೆಯಲ್ಲಿಯೂ ಸತ್ಯಾನುಷ್ಠಾನದಲ್ಲಿಯೂ ನಿರತರಾಗಿ ನಿಂತರು. ಇಂಥವರಲ್ಲಿ ಒಂದು ಮುಖ್ಯ ಕೂಟವು ವೈಷ್ಣವದಾಸರ ಕೂಟ. ಜೀವನದ ಕ್ಲೇಶಕಾರ್ಪಣ್ಯ ಗಳನ್ನು ತೊರೆದು ಸರ್ವದಾ ದೇವರ ಧ್ಯಾನದಲ್ಲಿಯೂ ಪರೋಪಕಾರ ದಲ್ಲಿಯೂ ನಿರತರಾದ ಈ ಜನರಿಗೆ ಉತ್ತಮ ಸಂಸ್ಕಾರಗಳನ್ನು ದಿನ ದಿಂದ ದಿನಕ್ಕೆ ಅನುಭವಮಾಡುವುದು ಸಾಧ್ಯವಾಯಿತು; ಅವರ ದಿನ

ಚರಿಯೆಲ್ಲವೂ ದೇವರ ಸೇವೆಯೇ ಆಗಿ ಪರಿಣಮಿಸಿತು. ಭಕ್ತಿಪೂರಿತಗಳಾದ ಅವರ ಹೃದಯಗಳು ತಮ್ಮ ಭಕ್ತಿಯನ್ನು ಕೀರ್ತನೆ, ಸ್ತೋತ್ರ, ನೀತಿಬೋಧಕ ಪದ್ಯ ಮೊದಲಾದ ರೂಪಗಳಲ್ಲಿ ವ್ಯಕ್ತಪಡಿಸಿದವು. ಇವೇ ದಾಸರ ಕೀರ್ತನೆಗಳು, ದೇವರ ನಾಮಗಳು, ಪದ್ಯಗಳು. ಇವುಗಳನ್ನು ರಚಿಸಿದ ದಾಸರೂ ಇವರ ಶಿಷ್ಯರೂ ಈ ಕೃತಿಗಳನ್ನು ಹಾಡುತ್ತ ಮನೋರಂಜನವನ್ನು ಮಾಡುತ್ತ ಜನಗಳಿರುವ ಕಡೆಯಲ್ಲೆಲ್ಲ ಅತ್ಯುತ್ತಮವಾದ ನೀತಿಯನ್ನು ಹರಡಿ ಧರ್ಮಬದ್ಧವಾದ ನಡೆವಳಿಕೆಯನ್ನು ಒಂದು ಸಂಪ್ರದಾಯವಾಗುವಂತೆ ಮಾಡಿದರು. ಈ ಕಾರಣದಿಂದ ಇವರ ಸಂಪ್ರದಾಯಕ್ಕೆ ನಮ್ಮ ಜನಾಂಗವು ಎಷ್ಟು ಕೃತಜ್ಞವಾಗಿರಬೇಕೆಂಬುದನ್ನು ಹೇಳುವುದು ಸಾಧ್ಯವಲ್ಲ.

ದಾಸ ಸಂಪ್ರದಾಯದ ಪದಗಳು, ಕೀರ್ತನೆಗಳು, ಸ್ತೋತ್ರಗಳು ಸಾಹಿತ್ಯದಲ್ಲಿ ಒಂದು ಪಂಗಡ; ಪ್ರಾಯಶಃ ಇವುಗಳಲ್ಲಿ ಮೂರುಪಾಲು ಕರ್ತೃವಿನ ಆತ್ಮದ ಯಾವುದೋ ಒಂದು ಕ್ಷಣದ ಅವಸ್ಥೆಯನ್ನು ಎಂದರೆ ದೇವರ ವಿಷಯದಲ್ಲಿ ತೋರಿದ ಒಂದು ಯೋಚನೆ, ಜೀವನದ ವಿಷಯದಲ್ಲಿ ತೋರಿದ ಒಂದು ಭಾವ, ಒಂದು ಸಂದರ್ಭದಲ್ಲಿ ಹುಟ್ಟಿದ ಬೇಸರ ಆನಂದ ಉತ್ಸಾಹ ಮೊದಲಾದ ಮನೋಭಾವಗಳನ್ನು ವಿವರಿಸುವುದರಿಂದ ಇವುಗಳನ್ನು ವ್ಯಂಜಕ ಕಾವ್ಯಗಳೆಂದು ಹೇಳಬಹುದು. ಇನ್ನು ಕೆಲವು ಮುಖ್ಯವಾಗಿ ನೀತಿಯನ್ನು ಸುಲಭವಾದ ಮಾತಿನಲ್ಲಿ ಹೇಳುವುದಕ್ಕಾಗಿ ರಚಿಸಲ್ಪಟ್ಟಿರಬೇಕು. ಈ ಎರಡು ಬಗೆಯ ಕಾವ್ಯಗಳೂ ಸಾಹಿತ್ಯದಲ್ಲಿ ಸೇರಿದುವೇ ಸರಿ. ಆದರೆ ಹಿಂದೆ ಇವುಗಳನ್ನು ಸಾಹಿತ್ಯವೆಂದು ಎಣಿಸುತ್ತಿರಲಿಲ್ಲವೆಂದು ತೋರುತ್ತದೆ. ದಾಸರು ಕವಿಗಳ ಜೊತೆಗೆ ತಾವೂ ಕವಿಗಳೆಂದು ಹೇಳಿಕೊಳ್ಳದೆ ಇದ್ದದ್ದು ಇದರ ಮುಖ್ಯ ಕಾರಣವಾಗಿದ್ದಿರಬೇಕು. ಇದರಿಂದ ಕವಿಗಳು ಬರೆದ ಗ್ರಂಥಗಳು ಸಾಹಿತ್ಯವೆಂದೂ ದಾಸರು ಬರೆದವು ಸಾಹಿತ್ಯದಿಂದ ಬೇರೆಯಾದವೆಂದೂ ಅಭಿಪ್ರಾಯವು ವಾಡಿಕೆಗೆ ಬಂದಿರಬಹುದು. ಅಲ್ಲದೆ ದಾಸರ ಕಾವ್ಯಗಳ ಮುಖ್ಯೋದ್ದೇಶವು ಭಕ್ತಿನಿರೂಪಣವೂ ನೀತಿಬೋಧೆಯೂ ಆಗಿದ್ದು ವಿಶೇಷವಾಗಿ ಮತವನ್ನು ಕುರಿತದ್ದರಿಂದ ಇವು ಮತ ಗ್ರಂಥಗಳಾಗಿ

ಗಣಿಸಲ್ಪಟ್ಟವು. ಮತ ಗ್ರಂಥಗಳಿಗೆ ಸೇರಿದಮೇಲೆ ಸಾಹಿತ್ಯವು ಇವನ್ನು ತನ್ನ ಗುಂಪಿಗೆ ಸೇರಿದುವೆಂದು ಸ್ಥಾಪಿಸಲು ಯತ್ನಮಾಡಲಿಲ್ಲ. ಹೀಗೆಯೇ ತಮಿಳಿನಲ್ಲೂ ಸಂಸ್ಕೃತದಲ್ಲೂ ನಮಗೆ ತಿಳಿದಹಾಗೆ ಇಂಗ್ಲೀಷಿನಲ್ಲೂ ಆಳ್ವಾರ್ ಸ್ತೋತ್ರಗಳೂ ಆಚಾರ್ಯಕೃತ ಸ್ತವಗಳೂ ವೆಸ್ಲೀ ಮೊದಲಾದವರ ಪ್ರಾರ್ಥನಾ ಗೀತಗಳೂ ಸಾಹಿತ್ಯವಾಗಿ ಎಣಿಸಲ್ಪಡುವುದಿಲ್ಲ. ಕೇವಲ ಸ್ತೋತ್ರವೇ ಆದರೆ ಅಂಥ ಕವನವನ್ನು ಸಾಹಿತ್ಯವೆಂದು ಎಣಿಸಬೇಕಾದದ್ದೂ ಇಲ್ಲ. ಕವನವು ಸಾಹಿತ್ಯವೂ ಆಗಬೇಕಾದರೆ ಅದರಲ್ಲಿ ಮನೋರಂಜನಮಾಡುವ ಉದ್ದೇಶವೂ ಗೌಣವಾಗಿಯಾದರೂ ಸೇರಿರಬೇಕು. ಈ ರೀತಿಯ ಕವನಗಳು ದಾಸರ ಪದಗಳಲ್ಲಿ ಅನೇಕವಾಗಿ ಇವೆ. ಈ ಉಪನ್ಯಾಸದಲ್ಲಿ ಕರ್ಣಾಟಕದ ವೈಷ್ಣವ ದಾಸರ ಇಂಥ ಕವನಗಳನ್ನು ಕುರಿತು ಎರಡು ಮಾತನ್ನು ಹೇಳಲು ಪ್ರಯತ್ನ ಮಾಡಿದೆ.

೨

ಮನುಷ್ಯನಿಗೆ ಅನೇಕ ಕಾರಣಗಳಿಂದ ನೆನವು ಮರೆತು ಅವನು ದೇವರನ್ನು ಧ್ಯಾನಿಸದೆ ಕೊನೆಗೆ ಕ್ಷಮೆಯನ್ನು ಕೇಳುವುದಕ್ಕೆ ಕೂಡ ಅಧಿಕಾರವನ್ನು ಕಳೆದುಕೊಳ್ಳುವನೆಂಬ ವಿಷಯವು ಪುರಂದರ ದಾಸರ ಈ ಕೀರ್ತನೆಯಲ್ಲಿ ಉಕ್ತವಾಗಿದೆ:—

ಜನ್ನಹಕೆ ಬಾಯಿಲ್ಲವಯ್ಯ।
ಅನಂತ ಅಪರಾಧ ಎನ್ನಲ್ಲಿ ಇರಲಾಗಿ ॥ ಪ ॥

ಅನ್ನಮದ ಅರ್ಥಮದ ಅಖಿಳ ವೈಭವದ ಮದ
ಮುನ್ನಪ್ರಾಯದ ಮದದಿ ರೂಪ ಮದದಿ
ತನ್ನ ಸತ್ವದ ಮದ ಧಾತ್ರಿವಶವಾದ ಮದ
ಇನ್ನು ಎನಗೆದುರಿಲ್ಲ ಎಂದೆಂಬ ಮದದಿಂದ ॥

ಸತಿಮೋಹ ಸುತಮೋಹ ಜನನಿಜನಕರ ಮೋಹ
ರಸಿಕ ಭ್ರಾತರಮೋಹ ರಾಜಮೋಹ
ಪಶುಮೋಹ ಶಿಶುಮೋಹ ಬಂಧುವರ್ಗದ ಮೋಹ
ಅಸುರಾರಿ ನಿನ್ನ ಮರೆತೆನು ಅಕಟ ಅಕಟಾ ॥

ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ
ಅಷ್ಟು ದೊರಕಿದರೆ ಮತ್ತಷ್ಟರಾಸೆ
ಕಷ್ಟಜೀವನದಾಸೆ ಕಾಣಾಚಿಯೆಂಬಾಸೆ
ನಷ್ಟಜೀವನದಾಸೆ ಪುರಂದರ ವಿಠಲ ॥

ಸಾಮಾನ್ಯ ಜೀವನವು ಮಾಡಬೇಕಾದುದನ್ನು ಮಾಡದೆಯೂ ಮಾಡಬಾರದುದನ್ನು ಮಾಡುತ್ತಲೂ ಕ್ಷಣಕ್ಷಣದಲ್ಲಿಯೂ ಉತ್ತಮ ಧರ್ಮಕ್ಕೆ ವಿರೋಧವಾಗಿ ನಡೆಯುತ್ತ ಇರುತ್ತದೆ. ಆದರೆ ತನ್ನ ಈ ನಡತೆಯು ದೌರಾತ್ಮ್ಯವೆಂಥದೆಂದು ಅದು ಭಾವಿಸಲಾರದು. ಉತ್ತೀರ್ಣ ಜೀವರಾದ ಪುರಂದರದಾಸರು ಭಗವಂತನ ಮುಂದೆ ಯಾವ ವಿಜ್ಞಾಪನೆಗೂ ಬಾಯಿಬಾರದಂತೆ ತಮ್ಮಲ್ಲಿ ತಪ್ಪುಗಳು ತುಂಬಿವೆಯೆಂದು ಹೇಳಿಕೊಳ್ಳುವಾಗ ಇದನ್ನು ಕೇಳಿದ ಉಳಿದವರಿಗೆ ಮನಸ್ಸಿನಲ್ಲಿ ಎಷ್ಟು ದೈನ್ಯವು ಉಂಟಾಗಬೇಕು. ಈ ಹಾಡನ್ನು ಗಾನಮಾಡುವಾಗ ಕೇಳುವ ಜನರ ಮುಖಭಾವವನ್ನು ನೋಡಿದರೆ ಇದರ ಸತ್ವವು ಯಾರಿಗಾದರೂ ತಿಳಿಯುವುದು. ಇದೆಲ್ಲದರ ಜೊತೆಗೆ, ಇದರ ಮಾತು ಬಹು ಸುಲಭ; ಅರ್ಥ ಬಹು ಸುಲಭ; ಕೇಳುತ್ತಿದ್ದಹಾಗೆ ಭಾವವು ಮನವನ್ನು ಮುಟ್ಟುವುದು; ಹೃದಯದಲ್ಲಿ ದೈನ್ಯರಸವು ಉಕ್ಕಿಬರುವುದು.

ಸಾಮಾನ್ಯವಾಗಿ ಹಾಡುವ ಇನ್ನೊಂದು ಕೃತಿಯಲ್ಲಿ ಜೀವವು ಪರಮಾತ್ಮನನ್ನು ಶರಣುಬೇಡಿ ಸಾರುವ ಭಾವವು ಬಹಳ ಚೆನ್ನಾಗಿ ವರ್ಣಿತವಾಗಿದೆ:—

ಸಾರಿದೆನೋ ನಿನ್ನ ಚರಣ ವೆಂಕಟರಮಣ
ನೀರಜನಯನನೇ ನಿರ್ಗುಣ ಪರಿಪೂರ್ಣ ॥

ಅನಾಥನು ನಾನು ಎನಗೆ ಬಂಧುವು ನೀನು
ನೀನಾಗಿ ದಯಮಾಡು ನಿನ್ನವನೆಂದು ನೋಡು ॥

ಎನ್ನ ಕುಂದುಗಳನು ಎಣಿಸಲಾಗದೊ ದೇವ
ಪನ್ನಗಶಯನ ಶ್ರೀ ಪರಮಪುರುಷ ಹರಿಯೇ ॥

ದೇಶದೇಶದವರ ಪೊರೆವಂತೆ ಪೊರೆಯೆನ್ನ
ಶೇಷಶಯನ ಘನ ಶ್ರೀಶಾ ಶ್ರೀಹಯವದನ ॥

ಈ ಗೀತೆಯಲ್ಲಿ ಮೊದಲು ದಯೆಯನ್ನು ಬೇಡಿ ಆಮೇಲೆ ನಿನ್ನವ ನೆಂದೆಣಿಸು ಎಂದು ಪ್ರಾರ್ಥಿಸಿರುವುದರ ಸಾರ್ಥಕ್ಯವನ್ನು ಯೋಚಿಸಿದರೆ ಇದು ಎಷ್ಟು ಉತ್ತಮ ರೀತಿಯ ಸಾಹಿತ್ಯವೆಂದು ತೋರುವುದು. ಅಲ್ಲದೆ ದೀನನು ಹೇಳುವ ಮಾತಾದ್ದರಿಂದ ಒಂದೊಂದು ನುಡಿಗೆ ಒಂದೊಂದು ಸಣ್ಣ ಪ್ರಾರ್ಥನೆ ಮಾತ್ರ ಇದೆ.

ಏನಾದರೂ ನಿನ್ನನ್ನು ಬಿಡುವುದಿಲ್ಲ ಎಂದು ದಾಸರು ದೇವರಲ್ಲಿ ವಿಜ್ಞಾಪಿಸುವ ಈ ಕೃತಿಯನ್ನು ಸಾಮಾನ್ಯವಾಗಿ ಎಲ್ಲರೂ ಕೇಳಿರ ಬಹುದು:—

ಬಿಡೆ ನಿನ್ನ ಪಾದವ ಬಂಕವಿದ್ದಾಕೊ
ಕೊಡು ಮನೋಭೀಷ್ಟವ ಕೋಪವಿದ್ದಾಕೊ ॥

ನೀರೊಳು ಪೊಕ್ಕರು ನಿನ್ನನು ನಾ ಬಿಡೆ
ಭಾರವ ತಳೆಬಹೆನೆಂದರೂ ಬಿಡೆನು
ಕೋರೆಯ ತೋರಿಸಿ ಕೊಸರಿಕೊಂಡರೂ ಬಿಡೆ
ಘೋರ ರೂಪವ ತಾಳಿ ಘುಡಿಘುಡಿಸಲು ಬಿಡೆ ॥

ತಿರುಕನೆಂದರೂ ಬಿಡೆ ತಾಯ ಕೊರಳನು
ತರಿದವನೆಂದರೂ ನಿನ್ನ ನಾ ಬಿಡೆನು
ಪೊರೆಯ ಪಿತನ ಮಾತ ಕಾಡ ಸೇರಲು ಬಿಡೆ
ದುರುಳ ಮಡುವಿನಲಿ ಧುಮುಕಲು ಬಿಡೆನು ॥

ಕಡುಬೆತ್ತಲೆಯಲ್ಲಿ ಕಾಸಿಲ್ಲೆಂದರೂ ಬಿಡೆ
ಕುದುರೆಯನೇರಿ ಕಡಿಯಬಂದರೂ ಬಿಡೆ
ಒಡೆಯ ಶ್ರೀ ಪುರಂದರ ವಿಠಲರಾಯ
ಕಡೆಹಾಯಿಪ ಭಾರ ನಿನ್ನದಾಗಿರೆ ನಾನು ॥

ಹಟದಿಂದ ಮರೆಹೊಗುವುದನ್ನು ಈ ಕೃತಿಯಲ್ಲಿ ತೋರಿರುವಂತೆ ಛಲಮಾಡಿ ಮರೆಹೊಗುವುದನ್ನು ದಾಸರು ಇನ್ನೊಂದು ಕೃತಿಯಲ್ಲಿ ತೋರಿದ್ದಾರೆ:—

ಕರುಣಾಕರ ನೀನೆನ್ನುವುದ್ಯಾಕೊ
ಭರವಸೆ ಇಲ್ಲೆನಗೆ ॥ ಪ ॥

ಪರಿಪರಿಯಲಿ ಈ ನರಜನ್ಮವನಿತ್ತು ।
ತಿರುತಿರುಗಿಸಿ ಪುನ ಕರಗಿಸುವುದ ಕಂಡು ॥ ಅ.ಪ. ॥

ಕರಿ ಬಲಿ ಧ್ರುವ ಪಾಂಚಾಲಿ ಅಹಲ್ಯೆಯರ
ಪೊರೆದವ ನೀನಂತೆ
ಅರಿದು ವಿಚಾರಿಸಿ ನೋಡಲೆಲ್ಲವು
ಅದು ಏನೋ ಬಹು ಕಂತೆಯುಂತಿದೆ ಕೃಷ್ಣ ॥

ಕರುಣಾಕರ ನೀನಾದರೆ ಈಗ
ಕರಪಿಡಿದೆನ್ನನು ಹರಿಕಾಯೋ
ಸರಸಿಜಾಕ್ಷ ನೀ ಸರಸನಾದೊಡೆ
ದುರಿತಗಳೆನ್ನನು ಪೀಡಿಪುದುಂಟೆ ॥

ಮರಣಕಾಲದಲಿ ಅಜಮಿಳಗೊಲಿದೆ
ಗರುಡಧ್ವಜನೆಂಬ ಬಿರುದಿಂದ
ಪರಬಿರುದುಗಳ್ ನಿನಗಿರಬೇಕಾದರೆ
ತ್ವರಿತದಿ ಸಲಹೆನ್ನ ಪುರಂದರ ವಿಠಲ ॥

ಈ ಎರಡು ಕೃತಿಗಳಲ್ಲೂ ಪುರಾಣ ಕಥೆಗಳೇ ತಿರುಳಾಗಿದ್ದರೂ ಕವಿಯು ಬಹಳ ಚಮತ್ಕಾರದಿಂದ ದೇವರು ಭೀಕರನಾದರೂ ಶರಣ್ಯನೆಂದೂ ಒಂದೊಂದು ಜೀವಕ್ಕೂ ಅವನು ದಿಕ್ಕಾಗಿ ಕಾದಿರುವನೆಂದೂ ಸೂಚಿಸಿದ್ದಾನೆ.

ಎಲ್ಲವನ್ನೂ ಪರಮಾತ್ಮನ ಅಂಶವೆಂದೆಣಿಸಿ ತನುಮನಗಳನ್ನೆಲ್ಲಾ ಅವನಲ್ಲಿ ಅರ್ಪಿಸುವುದು ಕನಕದಾಸರ ಈ ಕೃತಿಯಲ್ಲಿ ಎಣೆಯಿಲ್ಲದ ರೀತಿಯಲ್ಲಿ ವರ್ಣಿಸಲ್ಪಟ್ಟಿರುವುದು.

ತನು ನಿನ್ನದು ಜೀವನು ನಿನ್ನದು
ಅನುದಿನದಲಿ ಬಹ ಸುಖದುಃಖ ನಿನ್ನದಯ್ಯ ॥

ಸವಿಸುಡಿ ವೇದ ಪುರಾಣ ಶಾಸ್ತ್ರಂಗಳ
ಕಿವಿಯಲ್ಲಿ ಕೇಳುವ ಕಥೆ ನಿನ್ನದು
ಸವಮೋಹನಾಂಗಿಯರ ರೂಪವ ಕಣ್ಣಲಿ
ಎವೆ ಇಕ್ಕದೆ ನೋಡುವ ನೋಟ ನಿನ್ನದಯ್ಯ ‖

ಒಡಗೂಡಿ ಗಂಧ ಕಸ್ತೂರಿ ಪರಿಮಳಂಗಳ
ಬಿಡದೆ ಲೇಪಿಸಿಕೊಂಬುದು ನಿನ್ನದು
ಷಡುರಸದನ್ನಕ್ಕೆ ನಲಿದಾಡುತೆ ಜಿಹ್ವೆ
ಕಡುರುಚಿಗೊಂಬುದು ಆ ರುಚಿ ನಿನ್ನದಯ್ಯ ‖

ಮಾಯಾಪಾಶದ ಬಲೆಯೊಳಗೆ ಸಿಲ್ಕಿರುವಂಥ
ಕಾಯ ಪಂಚೇಂದ್ರಿಯಗಳು ನಿನ್ನವು
ನ್ಯಾಯದೆ ಕನಕನ ಪೊರೆವ ಶ್ರೀಕೇಶವ
ರಾಯನೀನಲ್ಲದೆ ನರರು ಸ್ವತಂತ್ರರೆ ‖

ಭಕ್ತನಾದವನಿಗೆ ನಾನು ಎನ್ನುವುದೇ ಇಲ್ಲ; ಎಲ್ಲವೂ ದೇವರೇ. "ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ" ಎಂದು ಇದೇ ಮಾತನ್ನು ಇನ್ನೊಂದು ವಿಧವಾಗಿ ಹೇಳಿರುವ ಪುರಂದರದಾಸರ ಗೀತೆಯನ್ನು ಅನೇಕರು ಕೇಳಿರಬೇಕು.

ಚಿಂತೆಯಲ್ಲಿ ಇರುವವರಿಗೆ ಕನಕದಾಸರ ಈ ಕೃತಿಯಿಂದ ಎಷ್ಟು ಸಮಾಧಾನ ಒರುವುದೆಂಬುದನ್ನು ಚಿಂತೆ ಕೊರೆಯುತ್ತಿರುವ ಮನಸ್ಸುಳ್ಳ ಜನರು ಮಾತ್ರ ಅರಿಯಬಹುದು :—

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವೆ ‖

ಬೆಟ್ಟದ ತುದಿಯಲ್ಲಿ ಪುಟ್ಟಿರುವ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆಯುವರು ಯಾರು
ಪುಟ್ಟಿಸಿದ ದೈವವೆ ಹೊಣೆಗಾರನಾಗಿಹನು
ಘಟ್ಟಿಯಾಗಿತಿಳಿ ನಿನ್ನೊಳಿಷ್ಟು ಸಂಶಯ ಬೇಡ ‖

ನವಿಲಿಗೆ ಚಿತ್ರಪತ್ರಗಳ ಬರೆದವರಾರು
ಬವಳ ಲತೆಗೆ ಕೆಂಪ ಬಳಿದವರು ಯಾರು
ಸವಿಮಾತಿನರಗಿಳಿಗೆ ನುಡಿಯು ಕಲಿಸಿದರಾರು
ಇವ ಮಾಡಿದವನು ನಮ್ಮನು ಸಲಹದಿಹನೇ ॥

ಕಲ್ಲೊಳಗೆ ಇರುವ ಕ್ರಿಮಿಕೀಟಗಳಿಗೆಲ್ಲಕೂ
ಅಲ್ಲೆ ಆಹಾರವನು ತಂದೀವರ್ಯಾರು
ಫುಲ್ಲಲೋಚನ ಕಾಗಿನೆಲೆಯಾದಿಕೇಶವನು
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥

ಪಲ್ಲವಿಯಲ್ಲಿ ಸಂಶಯವೇ ಎಂದು ಕೇಳಿ ಕೊನೆಯ ನುಡಿಯಲ್ಲಿ ಸಂಶಯವಿಲ್ಲ ಎಂದು ಹೇಳಿರುವುದೂ, ಮೊದಲ ನುಡಿಯಲ್ಲಿ ಆವಶ್ಯಕ ವಸ್ತುಗಳನ್ನು ಎತ್ತಿಹೇಳಿ ಎರಡನೆಯದರಲ್ಲಿ ಅಲಂಕಾರ ವಸ್ತುಗಳನ್ನು ಎತ್ತಿಹೇಳಿರುವುದೂ, ಮೂರನೆಯದರಲ್ಲಿ ಕೇವಲ ಅಸಾಧ್ಯವೆಂದು ತೋರಬಹುದಾದ ವಿಷಯಗಳೂ ಸಾಧ್ಯವಾಗಿರುವುದನ್ನು ತೋರಿಸಿರುವದೂ, ಕವಿಯ ಉದ್ದೇಶವನ್ನು ಎಷ್ಟು ಸ್ಪಷ್ಟವಾಗಿ ತಿಳಿಸುತ್ತವೆ. ಮನಸ್ಸಿನ ಭಾವವು ಧಾರಾಳವಾಗಿ ಹೀಗೆ ರೂಪುಗೊಳ್ಳುವುದು ಅತ್ಯುತ್ತಮ ಕಾವ್ಯದ ಲಕ್ಷಣ.

ಪ್ರಪಂಚದ ನಡೆವಳಿಕೆ ಯಾವುದನ್ನು ಪರಿಶೀಲಿಸಿ ನೋಡಿದರೂ ನಮ್ಮ ಮನಸ್ಸಿಗೆ ಆಶ್ಚರ್ಯವು ತೋರಿಬರುವುದು. ಭಗವಂತನ ಲೀಲೆಯು ಎಷ್ಟು ವಿಚಿತ್ರವಾದುದೆಂಬ ಈ ಭಾವನೆಯು ಬರದೇ ಇರುವುದು ಯೋಚನೆಯೇ ಇಲ್ಲದ ಮೌಢ್ಯದ ಚಿಹ್ನೆ. ದಾಸರ ಮನಸ್ಸಿನಲ್ಲಿ ಈ ಯೋಚನೆಯು ಹುಟ್ಟಿದಾಗ ಅವರು ಹೀಗೆಂದು ಹೇಳಿದರು :—

ನೀ ಮಾಯದೊಳಗೊ ನಿನ್ನೊಳು ಮಾಯವೋ ॥
ಬಯಲೊಳಗೆ ಆಲಯವೊ ಆಲಯದೊಳಗೆ ಬಯಲೊ
ಬಯಲು ಆಲಯವೆರಡು ನಯನದೊಳಗೊ
ನಯನ ಬುದ್ಧಿಯೊಳಗೊ ಬುದ್ಧಿ ನಯನದೊಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಕೃಷ್ಣ ॥

ಸವಿಯೊಳಗೆ ಸಕ್ಕರೆಯೊ ಸಕ್ಕರೆಯೊಳಗೆ ಸವಿಯೋ
ಸವಿಯು ಸಕ್ಕರೆ ಎರಡು ಜಿಹ್ವೆಯೊಳಗೊ
ಜಿಹ್ವೆ ಮನಸಿನೊಳಗೊ ಮನಸು ಜಿಹ್ವೆಯೊಳಗೊ
ಮನಸು ಜಿಹ್ವೆಗಳೆರಡು ನಿನ್ನೊಳಗೊ ಕೃಷ್ಣಾ ||

ಕುಸುಮದಲಿ ಗಂಧವೊ ಗಂಧದಲಿ ಕುಸುಮವೊ
ಕುಸುಮ ಗಂಧಗಳೆರಡು ಘ್ರಾಣದೊಳಗೊ
ಅಸಮಭವಕಾಗಿನೆಲೆಯಾದಿಕೇಶವ ನಿನ್ನ
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೆ ||

ಮೇಲಣ ತನು ನಿನ್ನದು ಜೀವನು ನಿನ್ನದು ಎಂಬ ಗೀತೆಯಲ್ಲಿ ಸೂಚಿಸಿರುವಂತೆ, ನೀವಾಯದೊಳಗೋ ಎಂಬ ಇದರಲ್ಲಿಯೂ ಕರಣಗಳೆಲ್ಲವೂ ಪರಮಾತ್ಮನ ಅಧೀನವೆಂದು ಸೂಚಿಸಿರುವುದಲ್ಲದೆ ಸೃಷ್ಟಿಯೆಲ್ಲ ನಮ್ಮ ಚೇತನದ ಭಾವನೆಯಿಂದ ಮಾತ್ರ ಇರುವುದೆಂದು ಸೂಚಿತವಾಗಿದೆ. ಇದು ವೇದಾಂತ ತತ್ವದ ಚರಮ ಸೀಮೆ. ಇದನ್ನು ಹೇಳಿರುವ ಮಾತಿನ ಸೌಲಭ್ಯವೋ ವರ್ಣನೆಗೆ ಅಸದಳವಾಗಿದೆ.

ದಾಸರು ಕೆಲವು ಸಂದರ್ಭಗಳಲ್ಲಿ ಕೇವಲನೈತಿಕವಾದ ಪದ್ಯಗಳನ್ನು ಹಾಡಿರುವರು. ಈ ಗೀತೆಗಳಲ್ಲಿ ಬರುವ ಬಹಳ ಮಾತುಗಳು ಜನರಲ್ಲಿ ಸಾಮಾನ್ಯವಾಗಿ ವಾಡಿಕೆಗೆ ಬಂದಿವೆ. "ಕೊಟ್ಟ ದೇವರು ಕೊಂಡು ಹೋದರೆ ಕುಟ್ಟಿಕೊಂಡು ಅಳುವುದ್ಯಾಕೆ?" "ಇಕ್ಕಲಾರದ ಕೈಯೆಂಜಲು," "ಅಟ್ಟಡಿಗೆ ಉಣಲಿಲ್ಲ ಇಟ್ಟನೀರು ಮಿಾಯಲಿಲ್ಲ," "ಉರಗನ ಹೆಡೆಯ ನೆಳಲ ಸೇರಿದ ಕಪ್ಪೆ ಸ್ಥಿರಕಾಲ ಬಾಳ್ವುದೆ ಜೀವವೆ?" "ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೆ?" "ಕತ್ತೆಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ?" ಅನೇಕವೇಳೆ ಈ ಮಾತುಗಳು ಎಲ್ಲಿವೆಯೆಂದು ತಿಳಿಯದೆಯೇ ಜನರು ಇವನ್ನು ಆಡುವರು. ದಾಸರ ನೀತಿಯು ಜನರಲ್ಲಿ ಎಷ್ಟು ಚೆನ್ನಾಗಿ ಊರಿದೆ ಎಂಬುದನ್ನು ಇದರಿಂದಲೇ ಊಹಿಸಬಹುದು. ದಾಸರ ನೀತಿಯು ಎಷ್ಟು ಉಚ್ಚವಾದುದೆಂದು ತಿಳಿಯುವಂತೆ ಇಲ್ಲಿ ಒಂದು ಉದಾಹರಣೆಯನ್ನು ಕೊಡ

ಒಹುದು. ಈಗ ನಮ್ಮಲ್ಲಿ ಹೊಲೆಯನನ್ನು ಮುಟ್ಟಬಾರದೆಂದು ಅರಿಯದ ಉತ್ತಮನೇ ಇಲ್ಲ. ಒಂದು ಪಂಗಡದ ಜನರನ್ನು ಹೊಲೆಯರೆಂದು ಕರೆದು ನಮ್ಮಲ್ಲಿ ಉಳಿದ ಜನರೆಲ್ಲರೂ ಈಗ ಅವರ ಹತ್ತಿರ ಹೋಗದೆ ಇದ್ದೇವೆ. ಹೊಲೆಗೆ ದಾಸರು ಇನ್ನೊಂದು ಅರ್ಥವನ್ನು ಕಲ್ಪಿಸಿರುವರು.

"ಹೊಲೆಯ ಹೊರಗಿಹನೆ ಊರೊಳಗಿಲ್ಲವೆ?"
ಹಾಗಾದರೆ ಯಾರು ಹೊಲೆಯರು ?—

ಕೇಳಿ ಹರಿಶಾಸ್ತ್ರಗಳ ಪೇಳದವ ಹೊಲೆಯ
ಆಳಾಗಿ ಅರಸಿಗೆ ಮುನಿವವನೆ ಹೊಲೆಯ
ಸೂಳೆಯ ಹೋಗುವವ ಶುದ್ಧ ಹೊಲೆಯ
ಇದ್ದಾಗ ದಾನಧರ್ಮವ ಮಾಡದವ ಹೊಲೆಯ
ಕದ್ದು ತನ್ನೊಡಲ ಹೊರೆವವ ಶುದ್ಧ ಹೊಲೆಯ
ಕೊಂಡ ಋಣವನ್ನು ಕೊಡದಿದ್ದವನೆ ಹೊಲೆಯ
ಭಂಡಮಾತನು ಬಯಲುಮಾಡುವವ ಹೊಲೆಯ
ಗಂಡ ಹೆಂಡರ ಪುತ್ರ ಭೇದ ಮಾಳ್ಪವ ಹೊಲೆಯ
ಆಸೆಯನು ಕೊಟ್ಟು ಭಾಷೆಗೆ ತಪ್ಪುವವ ಹೊಲೆಯ
ಲೇಸು ಉಪಕಾರವನು ಅರಿಯದವ ಹೊಲೆಯ
ಪೇಸಕೊಟ್ಟು ಬಹಳ ಕೊಟ್ಟೆನೆಂಬುವ ಹೊಲೆಯ
ಹುಸಿಮಾತು ಬೊಗಳುವವ ಹುಚ್ಚು ಹೊಲೆಯ
ಅರಿತು ಅನ್ಯಾಯವ ಹರಿಯದಿದ್ದವ ಹೊಲೆಯ
ಗುರುಹಿರಿಯರಿಗೆ ಎರಗದಿದ್ದವ ಹೊಲೆಯ
ಪರನಿಂದೆ ಆತ್ಮಸ್ತುತಿಮಾಡುವವ ಅತಿ ಹೊಲೆಯ
ಪುರಂದರ ವಿಠಲನ ಭಜಿಸದಿದ್ದವ ಹೊಲೆಯ

ಜಾತೀಯರಲ್ಲಿ ಉತ್ತಮರೆಂದು ಹೇಳಿಕೊಳ್ಳುವ ನಮ್ಮಲ್ಲಿ ಎಂಥವನಾದರೂ ಪರೀಕ್ಷಿಸಿನೋಡಿಕೊಂಡರೆ ಈ ಹೊಲೆತನದಲ್ಲಿ ನಾಲ್ಕೈದು ಭಾಗವಾದರೂ ಒಬ್ಬೊಬ್ಬನಲ್ಲೂ ಸಿಕ್ಕುವುದೆನ್ನುವುದರಲ್ಲಿ

ಸಂದೇಹವಿಲ್ಲ. ಯೋಚನಾಪರರಿಗೆ ದಾಸರ ಈ ಗೀತೆಯಿಂದ ಬರಬಹು ದಾದ ಪಶ್ಚಾತ್ತಾಪವು ಎಷ್ಟು ಎಂದು ಹೇಳಬೇಕಾದದ್ದಿಲ್ಲ. ಅದಲ್ಲದೆ ಇದರ ನೀತಿ ಎಷ್ಟು ಉದಾತ್ತವಾದುದು! ಅನ್ಯಾಯವನು ಅರಿತು ಹರಿಯದಿದ್ದವ ಹೊಲೆಯ! ಕೆಟ್ಟುದು ನಡೆಯುತ್ತಿರುವುದನ್ನು ಕಂಡ ಮನುಷ್ಯನು ಅದನ್ನು ಸರಿಪಡಿಸುವುದಕ್ಕೆ ದೇವರು ಇದಾನೆ ನಮಗೇನು ಎಂದು ಹೇಳಿ ತಟಸ್ಥನಾಗಿರುವುದಕ್ಕಿಲ್ಲ. ಕಂಡ ಅನ್ಯಾಯವನ್ನು ಹರಿಸಬೇಕೆನ್ನುವುದೂ ಸಾಧ್ಯವಾದಲ್ಲಿ ನ್ಯಾಯವನ್ನು ಸ್ಥಿರಪಡಿಸಬೇಕೆ ನ್ನುವುದೂ ಕರ್ಮಯೋಗದ ಕೊನೆಯ ಪಾಠನೆಂದು ಹೇಳಬಹುದು. ಹೀಗೆ ಎಣಿಸಿದವನು ಸುದರ್ಶನದ ಅವತಾರವೇ ಸರಿ. ದಾಸರ ಪದವು ಮನುಷ್ಯನನ್ನು ಈ ದುಸ್ಸಾಧ್ಯವಾದ ಕಾರ್ಯದಲ್ಲಿ ನಿಯಮಿಸುತ್ತದೆ.

ಇದೇ ರೀತಿಯಲ್ಲಿ ನಿಜವಾದ ಶುಚಿಯು ಬರಿಯ ಶರೀರಕ್ಕೆ ಸಂಬಂಧಪಟ್ಟದ್ದಲ್ಲ, ಅಂತಃಶುದ್ಧಿ ಮುಖ್ಯ, ಎಂಬ ವಿಷಯವನ್ನು ಹೇಳುವ "ಮಡಿ ಮಡಿ ಎಂದು ಮೂರು ನಾರು ಹಾರುತಿ" ಎಂಬ ಗೀತೆಯನ್ನೂ; ಶುದ್ಧ ಜೀವನವೇ ದೊಡ್ಡ ಹಬ್ಬವೆಂದು ನೊದಲಾಗಿ ಹೇಳುವ "ಕಾಮ ಕ್ರೋಧಂಗಳ ಬಿಡುವುದೆ ಬಲು ಹಬ್ಬ" ಎಂಬ ಗೀತೆಯನ್ನೂ; ಸಂಸಾರವನ್ನು ಬಿಟ್ಟು ಓಡಿಹೋಗುವುದು ದೊಡ್ಡ ವಿಷಯವಲ್ಲ, ಅದರಲ್ಲಿ ಇದ್ದೇ ನಮ್ಮ ಋಣವನ್ನು ತೀರಿಸಿಕೊಳ್ಳಬೇಕು ಎಂದು ಹೇಳುವ "ಈಸಬೇಕು, ಇದ್ದು ಜಯಿಸಬೇಕು" ಎಂಬ ಗೀತೆಯನ್ನೂ; ಸಂಸಾರವನ್ನು ಜೀವನದ ವಾಸಸ್ಥಾನವೆಂದು ಎಣಿಸದೆ ಅದು ನಮ್ಮ ಆತ್ಮದ ಯಾತ್ರೆಯಲ್ಲಿ ದಾರಿಯ ಒಂದು ಬಿಡಾರನೆಂದು ಎಣಿಸಬೇಕೆಂದು ಹೇಳುವ "ಹಂಗಾಗಿರಬೇಕು ಸಂಸಾರದಲ್ಲಿ" ಎಂಬ ಗೀತೆಯನ್ನೂ; ಪ್ರಯೋಜನವಿಲ್ಲದ ಕೆಲಸಗಳನ್ನು ಹೇಳುವ "ಆರ ಹಾರೈಸಿದರೇನುಂಟು ಬರಿನೀರಕಡೆದರಲ್ಲೇನುಂಟು" ಎಂಬ ಗೀತೆ ಯನ್ನೂ; ಹಣದ ವಿಕಟಶಕ್ತಿಯನ್ನು ವರ್ಣಿಸುವ "ಹಣವೇ ನಿನ್ನ ಗುಣವನೆಂತು ವರ್ಣಿಸಲೀ" ಎಂಬ ಗೀತೆಯನ್ನೂ; ಪ್ರಪಂಚದ ಸುಖ ವನ್ನು ಪ್ರಮುಖವಾಗಿ ಮಾಡಿಕೊಳ್ಳಬಾರದು, ಐಹಿಕ ಐಶ್ವರ್ಯವು ಆತ್ಮಕ್ಕೆ ಬಂಧನವಾಗಬಾರದು, ಎಂದು ಹೇಳಿರುವ ಅನೇಕ ಗೀತೆ

ಗಳನ್ನೂ ; ಮರಣವು ಸರ್ವದಾ ಪಕ್ಕದಲ್ಲಿಯೇ ಇದೆ ಎಂಬುದನ್ನು ನೆನೆದು ನೀತಿಮಾರ್ಗದಲ್ಲಿ ನಿರತರಾಗಿರಬೇಕು ಎಂದು ''ಕತ್ತಲು ಬೆಳದಿಂಗಳು ಸಂಸಾರಾ ಕಟ್ಟೋ ಧರ್ಮದ ಮೊಟ್ಟೆ! ಚಿತ್ತಶುದ್ಧದಲಿ ನಡಕೊಳ್ಳದಿದ್ದರೆ ವ್ಯರ್ಥವಾಗಿ ನೀ ಕೆಟ್ಟೇ'' ಎಂದು ಮೊದಲಾಗಿ ಹೇಳುವ ಗೀತೆಗಳನ್ನೂ; ಪರಮಾತ್ಮನ ವಿಷಯದಲ್ಲಲ್ಲದೆ ಗಾನ ಮಾಡುವ ಉತ್ತಮ ಗಾನವೂ ಗಾರ್ಧಭಗಾನ ಎಂದು ಮೊದಲಾಗಿ ದೇವರಲ್ಲಿ ಅರ್ಪಿಸದ ಎಲ್ಲವೂ ವ್ಯರ್ಥವೆಂದು ಹೇಳುವ ಗೀತೆಯನ್ನೂ ; ದಿನವೂ ಮಾಡುವ ಕೆಲಸವೂ ದೇವರ ಸೇವೆಯೇ ಎಂಬ ಅಭಿಪ್ರಾಯದಿಂದ ''ನೀನು ನಡೆವ ಒಂದೊಂದು ಹೆಜ್ಜೆಯೂ ದೇವರ ಬಳಿಗ ನಡೆದದ್ದೇ ಎಂದು ತಿಳಿ. ಹಗಲೆಲ್ಲ ಕೆಲಸಮಾಡಿ ಸೋತು ರಾತ್ರಿ ಹಾಸಿಗೆಯಲ್ಲಿ ಬೀಳುವೆಯಲ್ಲಾ ಅದನ್ನೇ ದೇವರಿಗೆ ಪ್ರಣಾಮವೆಂದೆಣಿಸು'' ಎಂದು ಬೋಧಿಸುವ ಗೀತೆಯನ್ನೂ ; ಇದೇ ಧ್ವನಿಯ ''ಸಕಲವೆಲ್ಲವು ಹರಿಸೇವೆಯೆನ್ನಿ ನುಡಿವುದೆಲ್ಲವು ನಾರಾಯಣ ಕೀರ್ತನೆಯೆನ್ನಿ ; ನಡೆವುದೆಲ್ಲವು ದೇವರ ಯಾತ್ರೆಯೆನ್ನಿ'' ಎಂದು ಮೊದಲಾದ ಗೀತೆಯನ್ನೂ ; ಪರಮಾತ್ಮನು ಸರ್ವವ್ಯಾಪಿಯೆಂದು ತಿಳಿಸುವುದಕ್ಕೆ, ಕನಕನ ಗುರು ಶಿಷ್ಯರಿಗೆ ಹಣ್ಣನ್ನುಕೊಟ್ಟು ಯಾರೂ ಇಲ್ಲದಕಡೆ ತಿನ್ನಿ ಎಂದಾಗ ಉಳಿದವರು ತಿಂದುಬರಲು ಕನಕನು ಮಾತ್ರ ಎಲ್ಲಿಹೋದರೂ ದೇವರಿದ್ದಾನೆ, ಇದನ್ನು ತಿನ್ನುವುದಕ್ಕೆ ಸ್ಥಳವಿಲ್ಲ ಎಂದನೆಂದು ಹೇಳುವ ಗೀತೆಯನ್ನೂ ಸಾಮಾನ್ಯವಾಗಿ ಅನೇಕರು ಕೇಳಿರಬಹುದು.

ವೈಷ್ಣವದಾಸರ ಕೀರ್ತನೆಗಳೆಂದರೆ ವೈರಾಗ್ಯದ ಕೀರ್ತನೆಗಳೆಂದು ಜನಗಳಲ್ಲಿ ಭಾವನೆ ಇದೆ. ಆದರೆ ಆ ವೈರಾಗ್ಯವು ವೇಷದ ವೈರಾಗ್ಯವಾದರೆ ಉಪಯೋಗವಿಲ್ಲ. ಮಡಿ ಎನ್ನುವುದು ನಿಜವಾಗಬೇಕಾದರೆ ಅದು ಮನಸ್ಸನ್ನು ಶುದ್ಧಿಮಾಡುವುದು ಹೇಗೆ ಅವಶ್ಯಕವೋ ಹಾಗೆ ವೈರಾಗ್ಯವು ನಿಜವಾಗಬೇಕಾದರೆ ಅದೂ ಮನಸ್ಸನ್ನು ತಟ್ಟಬೇಕು. ಹೀಗೆಂದು ಹೇಳಿರುವ ದಾಸರ ಈ ಗೀತೆಯು ಅತ್ಯುತ್ತಮವಾದುದು.

ಉದರವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲದ ॥ ಪ ॥

ಉದಯಪೂರ್ವದೊಳೆದ್ದು ಗಡಗಡ ನಡುಗುತ
ನದಿಯಲಿ ಮಿಂದೆನೆಂದು ಹಿಗ್ಗುತಲಿ
ಮದ ಮತ್ಸರ ಕ್ರೋಧ ಒಳಗೆ ತುಂಬಿಟ್ಟುಕೊಂಡು
ಬದಿಯಲಿದ್ದವರಿಗೆ ಆಶ್ಚರ್ಯ ತೋರುವ ||

ಕಂಚುಗಾರನ ಬಿಡಾರದಂದದಿ
ಕಂಚು ಹಿತ್ತಾಳೆಯ ಪ್ರತಿಮೆಯ ಹರಡಿ
ಮಿಂಚಬೇಕೆಂದು ಬಲು ಜ್ಯೋತಿಯ ಹಚ್ಚಿ
ವಂಚನೆಯಿಂದಲೆ ಪೂಜೆಯ ಮಾಳ್ಪುದು ||

ಕರದಲಿ ಜಪಮಣಿ ಬಾಯೊಳು ಮಂತ್ರವು
ಅರಿವೆಯ ಮೋರೆಗೆ ಮುಸುಕುಹಾಕಿ
ಪರಧನ ಪರನಾರಿಯರನು ನೆನೆಯುತ
ಪರಮ ವೈರಾಗ್ಯಶಾಲಿಯೆಂದೆನಿಸುವ ||

ಬೂಟಕತನದಲಿ ಬಹಳ ಭಕುತಿ ತೋರಿ
ಈತಗೆ ಎಣೆಯಾರೂ ಇಲ್ಲೆನಿಸಿ
ನಾಟಕಸ್ತ್ರೀಯಳಂತೆ ಬಯಲು ಡಂಭವ ತೋರ್ಪ
ಊಟದ ಮಾರ್ಗದ ಕಾರ್ಯವಿದೆಲ್ಲವು ||

ನಾನು ಎನ್ನದು ಎನ್ನುವುದನು ಬಿಟ್ಟು
ಏನಾದರೂ ಗತಿ ಹರಿ ಎನ್ನದೆ
ಕ್ಷೋಣಿಯೊಳಗೆ ನಮ್ಮ ಪುರಂದರ ವಿಠಲನ
ಕಾಣದೆ ಮಾಡುವ ಕಾರ್ಯವಿದೆಲ್ಲವು ||

ಆರಂಭದಲ್ಲಿ ತತ್ವಜ್ಞಾನದ ಸಾರವು ಮನಸ್ಸಿನಲ್ಲಿ ಊರಿದ್ದರಿಂದ ಭಕ್ತಿಯು ಹುಟ್ಟಿ ದಾಸವರ್ಗಕ್ಕೆ ಸೇರಿದ ಮಹನೀಯರು ತತ್ವಾರ್ಥವನ್ನೊಳಕೊಂಡ ಭಕ್ತಿಯುಕ್ತವಾದ ಈ ರೀತಿಯ ಸುಲಭವಾದ ಗೀತೆಗಳನ್ನು ರಚಿಸಿದರು. ಶಿಷ್ಯವರ್ಗವು ಹೆಚ್ಚಿ ತಿಳಿವು ಬರುವುದಕ್ಕೆ ಮೊದಲೇ ಭಕ್ತಿಯ ಉದ್ವೇಗದಿಂದ ರಚಿಸಿದ ಅನೇಕ ಗೀತೆಗಳು ದಾಸರ ಗೀತೆಗಳ

ಜೊತೆಗೆ ಸೇರಿಹೋಗಿವೆ. ಭಕ್ತಿ ಸಂಪ್ರದಾಯವು ಮುಂದೆ ಮುಂದೆ ನಂದ ಗೋಕುಲದ ಇತಿಹಾಸಗಳಲ್ಲಿ ಮಗ್ನವಾಯಿತು. ಪುರಂದರದಾಸರನಂತರ ಬಂದ ಅನೇಕ ದಾಸರು ರಚಿಸಿದ ಅನೇಕ ಕೃತಿಗಳು ಕೃಷ್ಣನ ಲೀಲೆಗಳನ್ನು ವರ್ಣಿಸತಕ್ಕವಾಗಿವೆ. ಕೃಷ್ಣಲೀಲೆಯು ಅನೇಕ ಭಾಗಗಳು ಸಾಮಾನ್ಯ ಜೀವನದ ನೀತಿಗೆ ವಿರೋಧವಾದುವೆಂದು ತೋರಬಹುದಾದ ಸಂದರ್ಭದಲ್ಲಿ ನಮ್ಮ ಭಾಗವತರು ಇತಿಹಾಸಕ್ಕೆಲ್ಲಾ ತತ್ವ ಸಂಬಂಧವಾದ ಗೂಢಾರ್ಥಗಳನ್ನು ಆರೋಪಿಸಿರುವುದು ನಮಗೆ ತಿಳಿದ ವಿಷಯುವೇ. ದಾಸೋತ್ತಮರು ರಚಿಸಿದ ಈ ತೆರನ ಗೀತೆಗಳಲ್ಲಿ ತತ್ವ ಸಂಬಂಧವಾದ ಭಾವವೇ ಪ್ರಮುಖವಾಗಿರಬೇಕು. ಅದಕ್ಕೆ ಸೇರಿದ ಹಾಗೆ ಅವರು ಸೃಷ್ಟಿಯ ಸೌಂದರ್ಯದಲ್ಲಿ ಪರಮಾತ್ಮನ ಸ್ವರೂಪವನ್ನು ಕಂಡು ಅನುಭವಿಸಿದ ಆನಂದವು ಪ್ರತಿಬಿಂಬಿತವಾಗಿದೆ. ದಾಸೋತ್ತಮರಲ್ಲದವರು ಅವರಂತೆ ಕೃಷ್ಣಚರಿತ್ರೆಯನ್ನು ವರ್ಣಿಸಿ ಹೇಳುವುದರಲ್ಲಿ ತೀರಾ ವ್ಯಂಗ್ಯಾರ್ಥಗಳನ್ನು ಕೊಡುವ ಅನೇಕ ಅಪಕೃತಿಗಳನ್ನು ರಚಿಸಿದ್ದಾರೆ. ದಾಸರ ಕೀರ್ತನೆಗಳ ಪುಸ್ತಕಗಳನ್ನು ಕೈಗೆ ತೆಗೆದುಕೊಂಡರೆ ಅವುಗಳಲ್ಲಿ ಈ ರೀತಿಯ ಪದ್ಯಗಳು ಅನೇಕ ಸಿಕ್ಕುವುವು. ಸಂಪ್ರದಾಯವು ಈ ರೀತಿ ಸಣ್ಣದಾರಿಗಳಿಗೆ ಹೋಗುವುದರ ಮೊದಲು ರಚಿತವಾದ ಗೋಪಿಕಾ ಗೀತೆಗಳು ಅತ್ಯುತ್ತಮವಾದ ವರ್ಣನಾ ಕಾವ್ಯಗಳಾಗಿವೆ. ದೈವ ಭಕ್ತರು ಪ್ರಕೃತಿಯ ಸೊಬಗನ್ನು ಕಂಡಾಗ ಅಹಃ ಎನ್ನದೆ ಸುಮ್ಮನೆ ಇರಬೇಕೆಂದು ಈಗ ನಮ್ಮ ಜನರಲ್ಲಿ ಕೆಲವರ ಅಭಿಪ್ರಾಯವುಂಟು. ನಮ್ಮ ಪೂರ್ವಿಕರು ದೇವಾಲಯುಗಳನ್ನು ಕಟ್ಟುವುದಕ್ಕೂ ತಪಶ್ಚರ್ಯೆಗೂ ಹುಡುಕಿ ವರಿಸಿದ ಸ್ಥಳಗಳನ್ನು ನೋಡಿದರೆ ಹಿಂದೆ ನಮ್ಮ ಜನರಲ್ಲಿ ಈ ಭಾವನೆಯಿರಲಿಲ್ಲವೆಂಬುದು ಸ್ಪಷ್ಟವಾಗುವುದು. ವೈಷ್ಣವ ಸಂಪ್ರದಾಯದ ಪರಮಭಕ್ತರಿಗೆ ಪ್ರಪಂಚದ ಸೌಂದರ್ಯದ ವಿಷಯದಲ್ಲಿ ಅನಭಿಜ್ಞತೆಯಾಗಲಿ ಅಶ್ರದ್ಧೆಯಾಗಲಿ ಇರಲಿಲ್ಲ. ಇದು ತೋರುವಂತೆ ಇಲ್ಲಿ ಒಂದು ಗೀತೆಯನ್ನು ಉದ್ಧರಿಸಿದೆ:—

ಕೊಳಲನೂದುವ ಚದುರನ್ಯಾರೇ ಪೇಳಮ್ಮಯ್ಯ
ತಳಿರಂದದಿ ತಾ ಪೊಳೆವ ಕರದಿ ಪಿಡಿದು ||

ನಾದದಿ ತುಂಬಿತು ಗೋವರ್ಧನಗಿರಿ
ಯಾದವಕುಲಜನಾವರಿಸಿತು ಖಗಗಳು
ಸಾಧಿಸಿ ನೋಡಲು ಕೃಷ್ಣನ ಈಗಲೆ
ಸಾಧ್ಯವೇನೇ ಬೃಂದಾವನದೊಳು ॥

ಮೇವ ಮರೆತವು ಗೋವುಗಳೆಲ್ಲ
ಸಾವಧಾನದಿ ಹರಿದಳು ಯಮುನಾ
ಆವು ಕಾಯುತಿರೆ ಗೋವಳರೆಲ್ಲರು
ಹಾವಭಾವದಲಿ ಬೃಂದಾವನದೊಳು ॥

ಸುರರು ಸುರಿದರಾಕಾಶದಿ ಸುಮಗಳ
ಸರಿದು ಪೋಗಿನೋಡು ಬೃಂದಾವನದೊಳು
ಸಾರಿಸಾರಿ ಶ್ರೀಕೃಷ್ಣನು ಈಗಳೆ
ತುರುಗಳ ಕಾಯ್ವ ಕದಂಬ ವನದೊಳು ॥

ಪರಮಾತ್ಮನ ಕೊಳಲಗಾನದಿಂದ ಮನುಷ್ಯವರ್ಗದ ಇನ್ನೂ ಇತರ ಜೀವರಾಶಿಗಳ ಎಲ್ಲಾ ಇಚ್ಛೆಗಳೂ ತೃಪ್ತವಾಗುವುವು. ಆ ಗಾನವನ್ನು ಕೇಳಿದವಾದರೆ ಗೋವುಗಳಿಗೆ ಮೇವು ಬೇಡ; ಪತಿಯ ಮನೆಗೆ ಹೋಗ ಬೇಕೆಂದು ಪರ್ವತ ಪ್ರಾಂತ್ಯದಿಂದ ಆತುರವಾಗಿ ಇಳಿದು ಬಂದ ಯಮು ನೆಯೂ ಪರಮಾತ್ಮನ ಗಾನವನ್ನು ಕೇಳಿ ಸಾವಧಾನವಾಗಿ ಹರಿಯು ತ್ತಾಳೆ. ಆ ಗಾನವು ಅಷ್ಟು ಇಂಪು. ಅವನು ಕೊಳಲನ್ನು ನುಡಿಸುತ್ತ ನುಡಿಸುತ್ತ ಸ್ಥಾವರಜಂಗಮದಲ್ಲೆಲ್ಲ ತನ್ನ ಶಕ್ತಿಯನ್ನು ಪಸರಿಸಿ ಅದರ ಮೂಲಕ ಎಲ್ಲವೂ ನಡೆಯುವ ಹಾಗೆ ಮಾಡುತ್ತಾನೆ. ಈ ತತ್ವವನ್ನು ತಿಳಿದವರು ಅದರ ಆಶ್ಚರ್ಯದಲ್ಲಿ ಮಗ್ನರಾಗಿ ಅವನಲ್ಲಿ ಎಲ್ಲವನ್ನೂ ಅರ್ಪಿಸಿ ಎಲ್ಲಾ ಇಚ್ಛೆಗೂ ಅವನ ಧ್ಯಾನದಿಂದ ತೃಪ್ತಿಯನ್ನು ಪಡೆದು ಮುಕ್ತರಾಗುವರು. ಬೃಂದಾವನದ ಬಳಿ ಭೂಮಿಯು ಚಪ್ಪಟೆಯಾಗಿ ರುವುದರಿಂದ ನದಿಯು ಸಾವಧಾನವಾಗಿ ಹರಿಯುವುದೆಂದು ಇಲ್ಲಿ ಸಂಕೇತವನ್ನಿಟ್ಟುಕೊಂಡು ದಾಸರು ಅದನ್ನು ಎಷ್ಟು ಅಂದವಾಗಿ ವರ್ಣಿಸಿ ನದಿಯ ಸಾವಧಾನತೆಗೆ ಎಂಥ ಅರ್ಥವನ್ನು ಕಲ್ಪಿಸಿದಾರೆ.

೩

ಈ ಉಪನ್ಯಾಸದಲ್ಲಿ ಉದ್ಧೃತವಾಗಿರುವ ಗೀತೆಗಳೆಲ್ಲವೂ ಅತ್ಯುತ್ತಮವಾದ ಸಾಹಿತ್ಯದಲ್ಲಿ ಸೇರಿರತಕ್ಕವು. ಮನಸ್ಸಿನ ಸೂಕ್ಷ್ಮವಾದ ಭಾವಗಳನ್ನೂ ನೀತಿಯ ಅತ್ಯುತ್ತಮವಾದ ಅಂಶಗಳನ್ನೂ ತತ್ವಾನ್ವೇಷಣದ ಸಾರ ತತ್ವಗಳನ್ನೂ ಸ್ಪಷ್ಟವಾಗಿ ಸುಲಭವಾಗಿ ಮನಮುಟ್ಟುವ ಹಾಗೆ ಸರಸವಾಗಿ ಹೇಳುವುದೇ ಸಾಹಿತ್ಯದ ಮುಖ್ಯ ಲಕ್ಷಣ. ಈ ಲಕ್ಷಣವು ಈ ಗೀತೆಗಳಲ್ಲೆಲ್ಲ ಇದೆ. ಈ ರೀತಿಯ ಗೀತೆಗಳು ದಾಸರ ಕೀರ್ತನೆಗಳಲ್ಲಿ ಇನ್ನೂ ಅನೇಕ ಇವೆ. ಅವು ಸಾಹಿತ್ಯಕ್ಕೆ ಸೇರಿದುವೇ. ಹೀಗೆಂದರೆ ಅವು ಮತಗ್ರಂಥಗಳಲ್ಲವೆಂದು ಅರ್ಥವಲ್ಲ. ಈ ಗೀತೆಗಳು ಮತಗ್ರಂಥಗಳಲ್ಲಿ ಸೇರಿದುವೂ ಹೌದು; ತತ್ವಗ್ರಂಥಗಳಲ್ಲಿ ಸೇರಿದುವೂ ಹೌದು. ವೈಷ್ಣವ ಸಂಪ್ರದಾಯದ ಅತ್ಯಮೂಲ್ಯವಾದ ಪ್ರಯೋಜನವೇ ಇದು. ಈ ಸಂಪ್ರದಾಯದಲ್ಲಿ ಸಾಹಿತ್ಯವೂ ಮತವೂ ತತ್ವವೂ ಒಂದೇ. ಕೇವಲ ರಸಿಕರಿಗೆ ಮಾತ್ರ ಸಾಹಿತ್ಯವೂ ಕೇವಲ ಪುರೋಹಿತ ವರ್ಗಕ್ಕೆ ಮಾತ್ರ ಮತ ವಿಚಾರವೂ ಕೇವಲ ತಾರ್ಕಿಕರಿಗೆ ಮಾತ್ರ ತತ್ವವೂ ಸೇರಿರುವ ಕಾಲಕ್ಕೆ ಈ ಮೂರು ಪಂಗಡದ ಜನರೂ ಬೇರೆ ಬೇರೆ. ಅವರು ಪ್ರವರ್ತಿಸುವ ಕಾರ್ಯಕ್ಷೇತ್ರವು ಬೇರೆ ಬೇರೆ. ಜ್ಞಾನಾರ್ಜನೆ ಮಾತ್ರ ಜನಗಳ ಲಕ್ಷ್ಯವಾಗಿರುವಲ್ಲಿ ಈ ರೀತಿಯ ವಿಭಾಗವೂ ಅದರ ಫಲವಾದ ಏಕಾಗ್ರತೆಯೂ ಅವಶ್ಯಕ. ಜನಾಂಗದ ಚರಿತ್ರೆಯ ಕೇವಲ ಆರಂಭದಲ್ಲಿ ಸಾಹಿತ್ಯವೂ ತತ್ವವೂ ಮತವೂ ಒಂದೇ ಆಗಿರುವುವು. ಆ ಮೇಲೆ ವಿಚಾರ ಉಂಟಾದಾಗ ಅವು ಬೇರೆಬೇರೆಯಾಗಿ ಬೇರೆಬೇರೆ ಪಂಗಡಗಳ ಏಕಾಗ್ರವಾದ ಉಪಾಸನೆಯಿಂದ ಉನ್ನತಿಯನ್ನೈದುವುವು. ಈ ಮೂರು ಹೀಗೆ ಉಚ್ಛ್ರಾಯಸ್ಥಿತಿಗೆ ಬಂದಮೇಲೆ ಈ ಬೇರೆ ಬೇರೆ ಪಂಗಡದವರು ಸಂಪಾದಿಸಿದ ತಿಳಿವು ಎಲ್ಲರಲ್ಲಿಯೂ ಪ್ರಚುರವಾಗುವುದು ಅವಶ್ಯಕವಾಗುವುದು. ಮತ ಸಂಬಂಧವಾದ ಉತ್ತಮ ವಿಷಯಗಳು ಜನರಿಗೆಲ್ಲ ತಿಳಿಯಬೇಕು. ಹೀಗೆಯೇ ತತ್ವದ ಸಾರಾಂಶವೂ ಜನಾಂಗದಲ್ಲಿ ಪ್ರಸರಿಸಬೇಕು. ಜೀವನ ಸುಖ ಸೌಂದರ್ಯಗಳ ನಿಜವಾದ ಸ್ವಭಾವವೂ ಫಲವೂ ಜನರಿಗೆ ತಿಳಿಯಬೇಕು; ಅವರು ಸುಂದರವಾದ ಈ

ಪ್ರಪಂಚದ ಮಧ್ಯದಲ್ಲಿ ಜೀವಿಸುವುದರಿಂದ ಪಡೆಯಬೇಕಾದ ರಾಗ ಸಂಸ್ಕಾರವನ್ನು ಪಡೆಯುವುದನ್ನು ಕಲಿಯಬೇಕು. ಹೀಗೆ ಜನಾಂಗದ ಉತ್ತಮವಾದ ಅನುಭವದ ಸಾರಾಂಶವು ಜನರಲ್ಲೆಲ್ಲಾ ಹರಡಬೇಕಾದರೆ ಮತ್ತೆ ಸಾಹಿತ್ಯವೂ ತತ್ವವೂ ಮತವೂ ಒಂದಾಗಿ ಸೇರಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಜನಾಂಗದ ನೇತೃವರ್ಗದವರೂ ಸಮಾಜ ಸೇವಕರೂ ಇವುಗಳನ್ನು ಒಂದಾಗಿ ಸೇರಿಸುತ್ತಾರೆ; ಎಂದರೆ ಮತ ತತ್ವಗಳ ಉತ್ತಮ ಭಾವಗಳನ್ನೆಲ್ಲಾ ಸಾಹಿತ್ಯದ ರೀತಿಯಲ್ಲಿ ಹೇಳುತ್ತಾರೆ. ಈ ಉದ್ದೇಶದಿಂದ ಆರಂಭವಾದ ಎಲ್ಲಾ ಸಮಾರಂಭಗಳಲ್ಲೂ ಈ ನ್ಯಾಸವು ಕಾಣಬರುವುದು. ದಾಸರ ಕೀರ್ತನೆಗಳು ಈ ಉದ್ದೇಶದಿಂದ ರಚಿತವಾದದ್ದರಿಂದ ಅವು ಮತ ತತ್ವ ಸಾಹಿತ್ಯ ಈ ಮೂರಕ್ಕೂ ಸೇರಿದುವಾಗಿವೆ. ಬಸವೇಶ್ವರನ ಮತದ ಅನುಯಾಯಿಗಳ ಉತ್ತರ ಕಾಲದ ಕವನಗಳಲ್ಲಿ ಇದೇ ರೀತಿಯ ಮಿಲನವು ಕಾಣುವುದು. ತಮಿಳಿನ ಆಳ್ವಾರ ಕೃತಿಗಳಲ್ಲೂ, ಶಿವಸಂಬಂಧವಾದ ತೇವಾರಗಳಲ್ಲಿಯೂ ಇದನ್ನು ನೋಡಬಹುದು. ಉತ್ತರ ಹಿಂದೂಸ್ಥಾನದ ವೈಷ್ಣವಗೀತೆಗಳು, ಕಬೀರನ ನಾಮಗಳು, ನಾನಕನ ಗೀತೆಗಳು ಇವುಗಳೆಲ್ಲದರಲ್ಲೂ ಈ ಲಕ್ಷಣವು ತೋರುವುದು. ಜನಾಂಗದ ಪುರೋಗಮನದಲ್ಲಿ ಈ ರೀತಿಯ ಸಂಯೋಜನವು ಸದಾಕಾಲದಲ್ಲೂ ಅವ್ಯಕ್ತವಾಗಿ ನಡೆಯುತ್ತಿರತಕ್ಕದ್ದು ಒಮ್ಮೊಮ್ಮೆ ಸ್ಪಷ್ಟವಾಗಿ ಒತ್ತಿದಂತೆ ನಡೆಯಬೇಕಾಗುವುದು. ಹೀಗೆ ನೋಡಿದರೆ ದಾಸರ ಕೀರ್ತನೆಗಳು ಜನಾಂಗದ ಆಗಣ ಸಂಸ್ಕಾರವನ್ನು ಸೂಚಿಸತಕ್ಕ ಸಂಕೇತಗಳೆಂದು ಹೇಳಬಹುದು. ದಾಸರು ಜನಾಂಗದ ತಿಳಿವಿನ ಪ್ರತಿನಿಧಿಗಳು. ಹೀಗೆ ಜನಾಂಗದ ತಿಳಿವಿನ ಅತ್ಯುತ್ತಮವಾದ ಅಂಶವನ್ನು ಹಿಂದೆ ಸಾಮಾನ್ಯರಿಗೆ ಸುಲಭವನ್ನಾಗಿ ಮಾಡಿದುದರಿಂದಲೇ ಜನಾಂಗವು ವೈಷ್ಣವ ಸಂಪ್ರದಾಯಕ್ಕೆ ಎಷ್ಟು ಕೃತಜ್ಞವಾಗಿದ್ದರೂ ತೀರದು ಎಂದು ಉಪನ್ಯಾಸದ ಆರಂಭದಲ್ಲಿ ಹೇಳಿರುವುದು.

ಜನಾಂಗದಲ್ಲಿ ತಿಳಿವನ್ನು ಹರಡುವುದು ಅಲ್ಲದೆ ಈ ಸಂಪ್ರದಾಯದಲ್ಲಿ ಇನ್ನೊಂದು ಶ್ಲಾಘನೀಯವಾದ ಭಾವನೆ ಇದೆ. ಉತ್ತಮವಾದ ಆತ್ಮಸಂಸ್ಕಾರವು ಯಾರಿಗೂ ಅಸಾಧ್ಯವಲ್ಲ. ಒಬ್ಬೊಬ್ಬರೂ ಈ

ಸಂಸ್ಕಾರಕ್ಕೆ ಪ್ರಯತ್ನಮಾಡಬೇಕು, ಎನ್ನುವುದೇ ಈ ಭಾವನೆ. ಈ ಪ್ರಪಂಚವು ಬುದ್ಧಿವಂತರಿಗೆ ಮಾತ್ರ ಸೇರಿದ್ದಲ್ಲ. ಭಗವಂತನು ಬುದ್ಧಿವಂತರನ್ನು ಮಾತ್ರ ಸೃಷ್ಟಿಸಲಿಲ್ಲ. ಎಲ್ಲರೂ ಜಗತ್ತಿನ ಈ ಒಂದು ಆವರಣದಲ್ಲಿ ಬಂದು ಇದರ ಸಂಸ್ಕಾರವನ್ನು ಪಡೆಯುವವರಾಗಿದ್ದಾರೆ. ಪ್ರತಿಯೊಬ್ಬನ ಮನಸ್ಸಿನ ಭಾವವೂ ಅವನವನ ಜೀವನದಲ್ಲಿ ಮುಖ್ಯ; ಅವನ ಸಂಸ್ಕಾರಕ್ಕೆ ಅವಶ್ಯಕ. ಉತ್ತಮರಾದವರು ತಮ್ಮ ಜೀವನ ದಿಂದ ತಾವು ಪಡೆಯುವ ಸಂಸ್ಕಾರವನ್ನು ವರ್ಣಿಸಿದರೆ ಆ ರೀತಿಯಲ್ಲಿ ಸಾಮಾನ್ಯರೂ ಸಂಸ್ಕಾರವನ್ನು ಪಡೆಯಲು ಪ್ರಯತ್ನಪಡಬಹುದು. ಹೀಗೆ ನೋಡಿದರೆ ದಾಸರ ಕೀರ್ತನೆಗಳು ಒಂದು ಆತ್ಮದ ಚರಿತ್ರೆಗೆ ಮಾತ್ರ ಸಂಬಂಧಪಟ್ಟ ಮಾತುಗಳೆನ್ನಬಹುದು. ಬುದ್ಧಿಯ ನಯದಲ್ಲಿ ಅಭ್ಯಾಸವೂ ಪಾಠವೂ ಹೇಗೆ ಉಂಟೋ ಹಾಗೆ ರಾಗದ ನಯದಲ್ಲಿ ಅಭ್ಯಾಸವೂ ಪಾಠವೂ ಉಂಟು. ಬುದ್ಧಿಯ ನಯವು ಸುಲಭವಾಗಿ ಬರುವುದು; ರಾಗದ ನಯವು ಬರುವುದು ಕಷ್ಟಸಾಧ್ಯ. ಈ ನಯವನ್ನು ಸಂಪಾದಿಸುವ ದಾರಿಯನ್ನು ಈ ಸಂಪ್ರದಾಯವು ಹೇಳಿಕೊಡುತ್ತದೆ. ಒಂದೊಂದು ಜೀವನವೂ ಮುಖ್ಯವಾದದ್ದೆಂದು ಹೇಳುವುದರಲ್ಲಿಯೂ ಒಂದೊಂದೂ ಯಾವರೀತಿಯಲ್ಲಿ ಉತ್ತಮ ಸಂಸ್ಕಾರವನ್ನು ಪಡೆಯ ಬಹುದೆಂದು ದಾರಿಯನ್ನು ತೋರಿಸುವುದರಲ್ಲಿಯೂ ಹೀಗೆ ವೈಷ್ಣವ ಸಂಪ್ರದಾಯವು ಜನಾಂಗದ ಏಳಿಗೆಯಲ್ಲಿ ಅತ್ಯಾವಶ್ಯಕವಾದ ಒಂದು ಮಹತ್ಕಾರ್ಯವನ್ನು ಸಾಧಿಸಿದೆ.

ಸದ್ಯದಲ್ಲಿ ಅನೇಕ ಕಾರಣಗಳಿಂದ ಅಭ್ಯುದಯದಲ್ಲಿ ಭಂಗವನ್ನು ಹೊಂದಿರುವ ನಮ್ಮ ಜನಾಂಗವು ಮತ್ತೆ ಶ್ರೇಯಸ್ಸನ್ನು ಪಡೆಯಬೇಕಾ ದರೆ ಹಿಂದೆ ನಿಂತುಹೋದಕಾರ್ಯಗಳೆಲ್ಲವನ್ನೂ ಮತ್ತೆ ಕೈಗೊಳ್ಳ ಬೇಕು; ಹಿಂದೆ ಇದ್ದ ಧರ್ಮಜ್ಞತೆಯನ್ನು ಮತ್ತೆ ಜನರಲ್ಲಿ ತರಬೇಕು; ಹಿಂದಿನಂತೆ ಜೀವನದಲ್ಲಿ ಶ್ರದ್ಧೆಯಿಂದ ನಡೆಯುವುದನ್ನು ಕಲಿಸಬೇಕು; ಹಿಂದಿನಂತೆ ಪಂಡಿತರ ಮತ್ತು ಜ್ಞಾನಿಗಳ ಉನ್ನತ ವಿಜ್ಞಾನವನ್ನು ಸಾಮಾನ್ಯ ಜನರ ಸಾಮಾನ್ಯ ಜ್ಞಾನದಲ್ಲಿ ಐಕ್ಯಮಾಡಬೇಕು. ಹಿಂದೆ ಜನಗಳಿಗೆ ದೇವರು ಇರುವನೇ ಎಂಬ ಸಂಶಯವಿರಲಿಲ್ಲ.

ಮರಣಾನಂತರ ಪಾಪಕ್ಕೆ ನರಕದಲ್ಲಿ ಶಿಕ್ಷೆ ಆಗುವುದೆಂಬ ಭಾವನೆ ಇತ್ತು; ಪಾಪವೆಂದರೆ ಭೀತಿ ಇತ್ತು. ಧರ್ಮಕ್ಕೆ ಕೊನೆಯಲ್ಲಿ ಪ್ರತಿ ಫಲವುಂಟು ಎಂಬ ನಂಬಿಕೆ ಇತ್ತು; ಧರ್ಮದಲ್ಲಿ ಆಸಕ್ತಿಯಿತ್ತು. ಈಗ ಅನೇಕ ಕಾರಣಗಳಿಂದ ದೇವರು ಸರ್ವಶಕ್ತನೂ ಸರ್ವವ್ಯಾಪಿಯೂ ಆದ ನಾಯಕನು, ಅವನು ಧರ್ಮಕ್ಕೆ ಸ್ವರ್ಗವನ್ನೂ ಪಾಪಕ್ಕೆ ನರಕ ವನ್ನೂ ಕೊಡುವನು ಎಂಬ ಭಾವನೆಯು ಶಿಥಿಲವಾಗಿದೆ. ಸ್ವರ್ಗದ ಅಪೇಕ್ಷೆಯಿಂದಲಾಗಲಿ ಆ ಅಪೇಕ್ಷೆಯಿಂದ ಅಲ್ಲದೆ ಆಗಲಿ ಜನರು ಧರ್ಮದಲ್ಲಿ ನಡೆಯಬೇಕಾದದ್ದು ಮುಖ್ಯ. ಸ್ವರ್ಗದಲ್ಲಿ ನಂಬಿಕೆ ಇಲ್ಲದವ ರಾದರೂ ಪ್ರಾಜ್ಞರಾದರೆ ಬೇರೆಯ ಕಾರಣಗಳಿಂದ ಧರ್ಮದಲ್ಲಿ ನಡೆಯು ವರು. ನರಕವಿಲ್ಲವೆಂದು ದೃಢವಾಗಿ ತಿಳಿದವರು ಪ್ರಾಜ್ಞರಾದರೆ ನರಕದ ಭಯವಿಲ್ಲದಿದ್ದರೂ ಪಾಪವನ್ನು ಮಾಡರು. ಇವರ ನಡತೆಗೆ ಸಾಕಾದ ಕಾರಣಗಳಿವೆ. ಸ್ವರ್ಗ ನರಕಗಳ ವಿನಾ ಬೇರೆಯಾದ ಈ ಕಾರಣಗಳು ಜನರಿಗೆ ಈಗ ತಿಳಿಯಬೇಕಾಗಿದೆ. ಯೋಚನಾಪರರಾದ ಕೆಲವರು ಮಾತ್ರ ಈ ವಿಷಯಗಳನ್ನು ತಿಳಿದುಕೊಂಡರೆ ಜನಾಂಗದ ಏಳಿಗೆಗೆ ಸಾಕಾಗುವುದಿಲ್ಲ. ಹೀಗೆ ಜನರಲ್ಲಿ ನಷ್ಟವಾಗುತ್ತ ಬಂದಿರುವ ಧರ್ಮ ಪಕ್ಷಪಾತವೂ ಪಾಪ ಭೀತಿಯೂ ಮತ್ತೆ ಹುಟ್ಟುವಂತೆ ಮಾಡುವುದಕ್ಕೆ ನಮ್ಮಲ್ಲಿನ ವಿದ್ಯಾವಂತರು ಹಿಂದಿನ ಸಂಪ್ರದಾಯವನ್ನು ಸಜೀವವಾಗಿ ಮಾಡಬೇಕು. ಈಗ ನಮ್ಮ ಜನರಲ್ಲಿ ಪ್ರೌಢ ವಿದ್ಯೆಯನ್ನು ಕಲಿತವರಲ್ಲಿ ಅನೇಕರು ಇಂಗ್ಲಿಷು ಭಾಷೆಯನ್ನು ಮಾತ್ರ ಚೆನ್ನಾಗಿ ಬಲ್ಲರು; ದೇಶ ಭಾಷೆಗಳನ್ನು ಕಾಣರು. ಈ ನವೀನ ವಿದ್ಯಾಸಂಪಾದನೆಯಲ್ಲಿ ಜನಸಾ ಮಾನ್ಯದ ಜೀವನ ಸ್ವಭಾವವನ್ನು ಅರಿಯಲು ಅವಕಾಶವಿಲ್ಲದೆ ವಿದ್ಯಾ ವಂತರಿಗೂ ಸಾಮಾನ್ಯರಿಗೂ ಭಾವನಾ ಪ್ರಪಂಚವು ಬೇರೆ ಬೇರೆಯಾಗಿ ಹೋಗಿದೆ. ಜನದ ಜೀವನವು ಚೆನ್ನಾಗಿ ಬೆಳೆಯಬೇಕಾದರೆ ಅದೂ ಒಂದು ವ್ಯಕ್ತಿಯಂತೆ ಇದ್ದು ಅದರ ಒಂದೊಂದು ಭಾಗವೂ ತಾನು ಮಾಡುವ ಕಾರ್ಯದಿಂದ ತಾನು ಬದಕುವುದಲ್ಲದೆ ಇತರ ಭಾಗಗಳಿಗೂ ಪ್ರಯೋಜನವಾಗುವಂತೆ ಕಾರ್ಯದಲ್ಲಿ ಪ್ರವರ್ತಿಸಬೇಕು. ಇತರ ಭಾಗಗಳಿಗೆ ಸಹಾಯವಾಗದಂತೆ ತನ್ನ ಏಳಿಗೆಯನ್ನು ಕುರಿತು ಮಾತ್ರ

ಆಸಕ್ತವಾಗಿರುವ ಭಾಗವು ಜನರಲ್ಲಿ ಸೇರಲಾರದು. ಇದು ಜನಾಂಗಕ್ಕೆ ಮಾತ್ರವಲ್ಲದೆ ಅಂಥ ಭಾಗಕ್ಕೂ ಹಾನಿಕರವಾದದ್ದು. ಈಗ ನಮ್ಮ ವಿದ್ಯಾವಂತರು ಇದನ್ನು ನೆನಪಿಗೆ ತೆಗೆದುಕೊಳ್ಳಬೇಕಾಗಿದೆ. ಜನಾಂಗದ ಏಳಿಗೆಯಲ್ಲಿ ಉದ್ಯುಕ್ತರಾದ ಎಲ್ಲರೂ ಈ ವಿಷಯಗಳನ್ನು ಪರ್ಯಾಲೋಚಿಸಿ ಜನಾಂಗದ ತಿಳಿವಿನ ಮಟ್ಟವನ್ನು ಹೆಚ್ಚಿಸಿ ಜನರಲ್ಲಿ ಧರ್ಮಜ್ಞಾನವೂ ಪಾಪಭೀತಿಯೂ ಮತ್ತೆ ಸರ್ವಸಾಮಾನ್ಯವಾಗುವಂತೆ ಮಾಡಬೇಕಾಗಿದೆ. ಒಂದೊಂದು ಜೀವನವೂ ಯತ್ನಯುಕ್ತವಾಗಬೇಕು, ಈ ಮೂಲಕ ಜನಾಂಗದ ಜೀವನವು ಉತ್ತಮವಾಗಬೇಕು, ಎನ್ನುವುದಕ್ಕಿಂತ ಭಕ್ತರಿಗಾಗಲಿ ಲೋಕಹಿತೈಷಿಗಳಿಗಾಗಲಿ ಬೇರೆಯೊಂದು ದೊಡ್ಡ ಲಕ್ಷ್ಯವಿಲ್ಲ. ಈ ಲಕ್ಷ್ಯದಿಂದ ಸಾಮಾನ್ಯರ ತಿಳಿವನ್ನು ಹೆಚ್ಚಿಸುವವನು ಅನುಸರಿಸುವುದಕ್ಕೆ ದಾಸರ ಪದ್ಧತಿಯಷ್ಟು ಅನುಕೂಲವಾದ ಬೇರೆಯೊಂದು ಪದ್ಧತಿಯಿಲ್ಲ.

---

# ಸತೀಹಿತೈಷಿಣೀ ಗ್ರಂಥಮಾಲೆ.

ಪಾಶ್ಚಿಮಾತ್ಯರ ಸಂಪರ್ಕದಿಂದ ನಮ್ಮ ಸೀಮೆಯಲ್ಲಿ ಉಂಟಾಗಿರುವ ಪರಿವರ್ತನಗಳಲ್ಲಿ ಅರ್ಥಗೌರವವೂ ವಿಷಯಗೌರವವೂ ಪ್ರಧಾನ ಲಕ್ಷಣವಾಗಿದ್ದು ನಮ್ಮ ಪೂರ್ವಿಕರ ಗ್ರಂಥಗಳ ಮೇಲಣ ಅಭಿರುಚಿ ಕಡಮೆಯಾಗಿ ನಾವಲು ಮೊದಲಾದ ಲಘುತರ ಗ್ರಂಥಗಳಲ್ಲಿಯೂ ಪುಸ್ತಕಗಳಲ್ಲಿಯೂ ಜನರ ಆದರಣೆ ಹೆಚ್ಚಿರುವುದು ಒಂದು. ನಮ್ಮ ದೇಶದ ಭಾಷೆಗಳಲ್ಲೆಲ್ಲಾ ಈ ಪರಿವರ್ತನವು ಕಾಣಬರುತ್ತದೆ. ಉನ್ನತಿಯುನ್ನೈದಿರುವ ಬಂಗಾಳೀ ಭಾಷೆಯಲ್ಲೂ ನಾವಲುಗಳೇ ವಿಶೇಷವಾಗಿ ಪ್ರಕಟವಾಗುತ್ತಿವೆ. ತತ್ತ್ವವಿಚಾರ, ಸಾಹಿತ್ಯ, ಗೀತಾ ಮೊದಲಾದ ಕಾವ್ಯಶಾಖೆಗಳಲ್ಲಿ ಬಹುಕಾಲದಿಂದ ಉನ್ನತ ಪದವಿಯಲ್ಲಿದ್ದಿರುವ ತಮಿಳು ಭಾಷೆಯಲ್ಲಿ ಕೇವಲ ಸಾಮಾನ್ಯವಾದ ನಾವಲುಗಳು ಮಿತವಿಲ್ಲದೆ ಹರಡಿ "ತಮಿಳು ನಾವಲು" ಎಂಬ ಪದವು ಈಗ ದೂಷ್ಯಪದವಾಗಿದೆ. ಮಿಕ್ಕ ಭಾಷೆಗಳ ವಿಚಾರವನ್ನೆಲ್ಲ ಹೇಳಬೇಕಾದ ಅವಶ್ಯವಿಲ್ಲ. ಎಲ್ಲಾ ಕಡೆಯಲ್ಲಿಯೂ ನಾವಲುಗಳು ಪ್ರಬಲವಾಗಿವೆ ಎಂದು ಮಾತ್ರ ಹೇಳಿದರೆ ಸಾಕು.

ಇತರ ಭಾಷೆಗಳಲ್ಲಿ ಹೇಗೋ ಹಾಗೆಯೇ ನಮ್ಮ ಭಾಷೆಯಲ್ಲಿಯೂ ನಾವಲುಗಳು ಹೇರಳವಾಗಿ ಪ್ರಕಟವಾಗುತ್ತಿವೆ. ಬಹುಪ್ರಸಿದ್ಧರೂ, ಮಾನ್ಯರೂ, ಕನ್ನಡನಾಡಿನ ಜನರ ಸರ್ವಕಾಲದ ವಿಶ್ವಾಸ ಗೌರವಗಳಿಗೆ ಪಾತ್ರರೂ ಆದ ದಿವಂಗತ ಬಿ. ವೆಂಕಟಾಚಾರ್ಯರು ನಮ್ಮ ದೇಶದವರ ಉಪಯೋಗಕ್ಕಾಗಿ ಬಂಕಿಂಚಂದ್ರ ಚಟ್ಟೋಪಾಧ್ಯಾಯರ ಬಂಗಾಳೀ ನಾವಲುಗಳನ್ನು ತರ್ಜುಮೆ ಮಾಡುವುದಕ್ಕೆ ಪ್ರಾರಂಭ ಮಾಡಿದಂದಿನಿಂದ ಈ ವರೆಗೆ ಅನೇಕರು ವಂಗಭಾಷೆಯ ಕತೆಗಳನ್ನು ತರ್ಜುಮೆ ಮಾಡಿಯೋ, ಅವುಗಳನ್ನು ಅನುಸರಿಸಿಯೋ, ತಮ್ಮ ಕಲ್ಪನೆಯಿಂದಲೋ ಅನೇಕ ನಾವಲುಗಳನ್ನು ರಚಿಸಿದ್ದಾರೆ. ಪ್ರಚುರವಾ

ಗಿರುವ ಈ ನಾವಲುಗಳ ಸಂಖ್ಯೆಯಲ್ಲಿ ಹತ್ತರಲ್ಲಿ ಒಂದು ಭಾಗದಷ್ಟಾದರೂ ನಾವಲಲ್ಲದ ಪುಸ್ತಕಗಳು ರಚಿತವಾಗಿಲ್ಲವೆಂದು ಹೇಳಬಹುದು.

ನಾವಲಿನ ಈ ಪ್ರಾಬಲ್ಯಕ್ಕೆ ಕಾರಣವನ್ನು ವಿಚಾರಿಸುವುದು ಪ್ರಕೃತ ದಲ್ಲಿ ಅವಶ್ಯವಲ್ಲ; ಆದರೂ ಅದನ್ನು ಸೂಕ್ಷ್ಮವಾಗಿ ಸೂಚಿಸಬಹುದು. ಜನರು ಬೇರೆಯ ವಿಧವಾದ ಗ್ರಂಥಗಳಿಗೆ ಪ್ರೋತ್ಸಾಹವನ್ನು ಕೊಡ ದಿರುವುದೂ, ಇತರ ಗ್ರಂಥಗಳನ್ನು ಬರೆಯುವುದಕ್ಕಿಂತಲೂ ನಾವಲ್ಲನು ಬರೆಯುವುದು ಸರ್ವಸುಲಭವಾಗಿರುವುದೂ, ನಾವಲಿನ ಪ್ರಾಬಲ್ಯಕ್ಕೆ ಕಾರಣವೆಂದು ತೋರುತ್ತದೆ. ಸರ್ವಸುಲಭವೆಂದರೆ, ಯಾರು ಬೇಕಾ ದರೂ ಕುಳಿತುಕೊಂಡು ಚೆನ್ನಾಗಿರುವುದೋ ಚೆನ್ನಾಗಿಲ್ಲದುದೋ, ಓದು ವುದಕ್ಕೆ ಸುಖವಾಗಿರುವುದೋ ಅಸಹ್ಯವಾಗಿರುವುದೋ, ಹೇಗಾದರೂ ಇರುವ ನಾಲ್ಕು ಮಾತನ್ನು "ರಾಮನು ಹೀಗೆಂದನು," "ಕೃಷ್ಣನು ಹಾಗೆಂದನು" ಎಂದು ಒಂದು ಕತೆಯಾಗಿ ಬರೆದಿಡಬಹುದು. ಶಿವಾಜಿಯ ಚರಿತ್ರೆ ಎಂದರೆ, ಚರಿತ್ರೆ ನಮಗೇಕೆ ಎಂದು ಒಂದು ಕಡೆಗಿರುವ ವಾಚಕರು ರಾಮ, ಕೃಷ್ಣ ಎಂಬ ಇಬ್ಬರು ಮಾತನಾಡುವ ಪುಟ ಒಂದಿರುವ ಪುಸ್ತಕವನ್ನು ಇದೇನು ಕತೆಯೋ ಎಂದು ಓದುವರು. ಹೀಗೆ ಈಗ ಪುಸ್ತಕ ಪ್ರಪಂಚವು ನಾವಲುಗಳಿಂದ ತುಂಬಿಹೋಗಿದೆ.

ಕರ್ಣಾಟಕದ ಪುಸ್ತಕ ಪ್ರಪಂಚವನ್ನು ನಾವಲುಗಳಿಂದ ವೃದ್ಧಿ ಗೊಳಿಸುತ್ತಲಿರುವವರಲ್ಲಿ ನಂಜನಗೂಡು ಸತೀಹಿತೈಷಿಣೀ ಕಾರ್ಯಾಲ ಯದಿಂದ ತಮ್ಮ ಲೇಖನಗಳನ್ನು "ಸತೀಹಿತೈಷಿಣೀ ಗ್ರಂಥಮಾಲೆ" ಎಂಬ ಹೆಸರಿನಿಂದ ಪ್ರಕಟಿಸುತ್ತಿರುವ ಶ್ರೀಮತಿ ತಿರುಮಲಮ್ಮನವರು ಒಬ್ಬರು. ಒಂದುಸಾವಿರದ ಒಂಬೈನೂರ ಹದಿಮೂರನೆಯ ಇಸವಿ ಯಲ್ಲಿ ತಮ್ಮ ಮೊದಲನೆಯ ಪುಸ್ತಕವನ್ನು ಅಚ್ಚಿಗೆ ಕೊಟ್ಟು ಇವರು ಇದುವರೆಗೆ ಏಳು * ಪುಸ್ತಕಗಳನ್ನು ಕನ್ನಡಿಗರಿಗೆ ಒಪ್ಪಿಸಿದ್ದಾರೆ. ಈ ಪುಸ್ತಕಮಾಲೆಯಲ್ಲಿ ಮೊದಲನೆಯದು ಸುಶೀಲೆ; ಎರಡನೆಯದು ಸತೀತ್ವೈರಕ್ಷಿಣಿ ಅಥವಾ ನಭಾಭಾಗ ೧; ಮೂರನೆಯದು ವಿದ್ಯುಲ್ಲತಾ; ನಾಲ್ಕನೆಯದು ವಿರಾಗಿಣಿ ಅಥವಾ ನಭಾ, ಇದು ಎರಡನೆಯದರ

* ಇದನ್ನು ಬರೆದ ಈಚೆಗೆ ಇವರು ಬೇರೆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಮುಂದುವರಿದ ಭಾಗ, ಅದರ ಕತೆಯನ್ನು ಮುಗಿಸುತ್ತದೆ; ಐದನೆಯದು ದಕ್ಷಕನ್ಯಾ; ಆರನೆಯದು ಕರ್ಣಾಟಕ ಮಾತೃನಂದಿನಿ; ಏಳನೆಯದು ರಮಾನಂದ, ನಾಟಕರೂಪದಲ್ಲಿ ನಾವಲು. ಮೂರನೆಯದಾದ ವಿದ್ಯುಲ್ಲತಾ ಎಂಬ ಪುಸ್ತಕವು ಹರಿಣಿ ಎಂಬ ರಮಣಿಯ ಕತೆಯನ್ನು ಅರ್ಧ ಹೇಳಿ ನಿಲ್ಲಿಸುತ್ತದೆ; ಮುಂದಕ್ಕೆ ಮತ್ತೊಂದು ಭಾಗವು ಬರುವ್ರದೆಂದು ಗ್ರಂಥಕರ್ತ್ರಿಯವರು ಪುಸ್ತಕದ ಆರಂಭದಲ್ಲಿ ತಿಳಿಸಿದ್ದಾರೆ. ಅಂತು ನಾಲ್ಕು ಕತೆಯೂ, ಒಂದು ಕತೆಯ ಒಂದರ್ಧವೂ, ಒಂದು ನಾಟಕವೂ ಪ್ರಚುರವಾದ ಹಾಗಾಯಿತು. ಯಾವ ಭಾಷೆಯಲ್ಲಾಗಲಿ ಸ್ತ್ರೀಯರು ಗ್ರಂಥಗಳನ್ನು ರಚಿಸುವುದು ಅಸಾಧಾರಣ. ಇಂಗ್ಲಿಷು ಭಾಷೆಯಲ್ಲಿ ಕೂಡ ಪ್ರಸಿದ್ಧರಾದ ಸ್ತ್ರೀ ಲೇಖಕರು ಕಡಮೆಯೆಂದೇ ಹೇಳಬೇಕು. ಹೀಗಿರುವಲ್ಲಿ ನಮ್ಮ ಕನ್ನಡ ನಾಡಿನಲ್ಲಿ ನಮ್ಮ ಸೋದರಿಯರಲ್ಲೊಬ್ಬರು ಜನರ ಉಪಯೋಗಕ್ಕಾಗಿ ಪುಸ್ತಕಗಳನ್ನು ರಚಿಸುವುದು ನಮಗೆಲ್ಲಾ ಸಂತೋಷಕ್ಕೆ ಕಾರಣವಾದ ವಿಷಯ. ಈ ಕಾರಣದಿಂದ ಈ ಪುಸ್ತಕಮಾಲೆಯ ಗ್ರಂಥಕರ್ತ್ರಿಯವರನ್ನು ನಾವು ಮೊದಲು ಮನಃಪೂರ್ವಕವಾಗಿ ಅಭಿನಂದಿಸಿ ಈ ಪುಸ್ತಕಗಳ ವಿಚಾರವಾಗಿ ಇಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇವೆ.

ಇವುಗಳಲ್ಲಿ ಮೊದಲನೆಯದಾದ ಸುಶೀಲೆ ಎಂಬ ಪುಸ್ತಕವು ಮೈಸೂರ ''ಮಧುರವಾಣೀ'' ಪತ್ರಿಕೆಯ ಬಹುಮಾನಸ್ಪರ್ಧೆಗಾಗಿ ಬರೆಯಲ್ಪಟ್ಟುದೆಂದೂ ಆ ಸ್ಪರ್ಧೆಗಾಗಿ ಈ ಪುಸ್ತಕವೊಂದು ಮಾತ್ರ ಅವರಿಗೆ ಕಳುಹಲ್ಪಟ್ಟಿತೆಂದೂ ಪ್ರಕಾಶಕರ ಪೀಠಿಕೆಯಿಂದ ತಿಳಿದುಬರುತ್ತದೆ. ಇದು ಗ್ರಂಥಕರ್ತ್ರಿಯವರ ಮೊದಲ ಪುಸ್ತಕವೆಂದು ಅವರು ಬರೆದಿರುವ ಪ್ರಸ್ತಾವನೆಯಿಂದ ತಿಳಿದುಬರುತ್ತದೆ. ಬಹುಮಾನ ಸ್ಪರ್ಧೆಗಾಗಿ ಅವಸರದಿಂದ ಬರೆದುದರಿಂದಲೋ, ಅಥವಾ ಗ್ರಂಥಕರ್ತ್ರಿಯವರ ಪ್ರಥಮ ಪ್ರಯತ್ನವಾದುದರಿಂದಲೋ ಈ ಪುಸ್ತಕವು ಇವರ ಇತರ ಪುಸ್ತಕಗಳ ಹಾಗೂ ಇಲ್ಲ; ಕೇವಲ ಸಾಮಾನ್ಯವಾದುದಾಗಿದೆ.

ನಾವು ಈಗ ನಾವಲು ಎಂದು ಯಾವುದನ್ನು ಕರೆಯುತ್ತೇವೋ ಅದು ನಾವು ಇಂಗ್ಲಿಷರ ಸಾಹಿತ್ಯವನ್ನು ನೋಡಿ ಕಲಿತ ಪುಸ್ತಕಜಾತಿ.

ಇಂಗ್ಲಿಷಿನಲ್ಲಿ ನಾವೆಲಸ್ನು ನಾಲ್ಕೈದು ಪಂಗಡವಾಗಿ ವಿಂಗಡಿಸುತ್ತಾರೆ. ಇಲ್ಲಿ ಎರಡು ತರಗತಿಗಳ ಮಾತು ಮಾತ್ರ ಪ್ರಕೃತ. ಸಾಧಾರಣವಾದ ಸಂಸಾರದ ಚಿತ್ರವಾಗಿರುವ ಕತೆಗಳು ಒಂದು ತರಗತಿ; ಮನಸ್ಸಿನ ಆಹ್ಲಾದಕ್ಕೋ ಕೌತುಕಕ್ಕೋ ಸಾಧಕವಾದ ರೊಮಾನ್ಸ್ ಎಂಬ ಕಥಾ ವಿಶೇಷವು ಇನ್ನೊಂದು ತರಗತಿ. ರೊಮಾನ್ಸಿನಲ್ಲಿ ಪ್ರತಿ ಒಂದು ವಿಷಯವೂ ಇಂದು ನಾಳೆ ನಡೆಯಬಹುದಾದ ವಿಷಯವಾಗಿರಬೇಕಾದ ಆವಶ್ಯಕತೆಯಿಲ್ಲ. ಓದುವವರು ಕಥೆಯನ್ನೋದುವ ಸಂತೋಷದಲ್ಲಿ ಇದು ನಿಜವಾಗಿಯೂ ನಡೆದುದೋ ಎಂಬ ಶಂಕೆಯನ್ನು ಹಚ್ಚಿಕೊಳ್ಳುವುದಿಲ್ಲ. ಈ ವಿಷಯವು ಉದಾಹರಣೆಯಿಂದ ಸುಲಭವಾಗಿ ಮನಸ್ಸಿಗೆ ಬರಬಹುದು. ದೇವೀಚೌಧುರಾಣಿಯನ್ನು ಓದಿದಲ್ಲಿ ಅಸಾಧಾರಣವಾದ ಶಕ್ತಿಯಿಂದಲೂ ಗುಣದಿಂದಲೂ ಕೂಡಿದ ಸ್ತ್ರೀಯೊರ್ವಳು ಸದ್ವ್ರತನಾದ ಬ್ರಾಹ್ಮಣ ಗುರುವಿನ ಬಳಿ ಧರ್ಮಜ್ಞಾನವನ್ನು ಪಡೆದು, ಲೋಕದ ಹಿತಕ್ಕಾಗಿ ತನ್ನ ಜೀವನವನ್ನು ಅರ್ಪಿಸಿ, ಕೊನೆಗೆ ಪತಿಸಾನ್ನಿಧ್ಯವನ್ನು ಸೇರಿ ಸುಖಿಯಾದಳೆಂದು ಆ ಗ್ರಂಥದಿಂದ ತಿಳಿಯುವುದು. ಪ್ರಾಯಶಃ ದೇವೀಚೌಧುರಾಣಿಯಂತಹ ಸ್ತ್ರೀಯರು, ಎಂದರೆ ಅವಳಿಗೆ ಒಂದೊದಗಿದ ರೀತಿಯ ಕಷ್ಟಗಳನ್ನನುಭವಿಸಿ ಅವಳ ಜೀವನವು ಹೇಗೆ ಪರಿಣಮಿಸಿತೋ ಹಾಗೆ ಪರಿಣಮಿಸಿದ ಜೀವನವುಳ್ಳವರು ಅನೇಕರಿರರು. ಆದರೆ ಅದೇ ಸ್ಥೈರ್ಯವೂ ಅದೇ ಪ್ರೇಮವೂ ಅದೇ ಧರ್ಮಾಕಾಂಕ್ಷೆಯೂ ಮನಸ್ಸಿನಲ್ಲಿ ನೆಲಸಿರುವ ಸ್ತ್ರೀಯರನ್ನು ನಾವು ಅಲ್ಲಲ್ಲಿ ನೋಡಬಹುದು; ಅಥವಾ ಮನಸ್ಸಿನಲ್ಲಿ ಊಹಿಸಿಕೊಳ್ಳಬಹುದು. ಕತೆಯನ್ನು ಓದುವಲ್ಲಿ ಅದರಲ್ಲಿ ಪ್ರಾಪ್ತವಾಗುವ ಸಂಗತಿಗಳು ನಿಜವೇ ಸುಳ್ಳೇ ಎಂಬ ಯೋಚನೆ ಬರುವುದಿಲ್ಲ. ಅವು ಕತೆಯಲ್ಲಿ ನಿರ್ದೇಶಿಸಲ್ಪಟ್ಟ ಭಾವನಾ ಪ್ರಪಂಚದಲ್ಲಿ ಪ್ರಾಪ್ತವಾಗಬಹುದಾದ ಸಂಗತಿಗಳಾದರೆ ಸಾಕು. ಇದು ರೊಮಾನ್ಸ್ ಎಂಬ ಇತಿಹಾಸ ವಿಶೇಷದ ಗುಣ. ಸಾಂಸಾರಿಕ ಚಿತ್ರದಲ್ಲಾದರೋ ನಡೆದ ನಡೆವಳಿಕೆ ನಮ್ಮ ದೈನಂದಿನ ಪ್ರಪಂಚದಲ್ಲಿ ಸಾಧ್ಯವಾದುದಾಗಿರಬೇಕು. ಹಾಗೆ ಇಲ್ಲದೆ ಇದ್ದರೆ ಕತೆ ಅಸಂಭವವೆಂದು ತೋರಿ ಅಭಿರುಚಿಸದೆ ಹೋಗುವುದು.

ಸುಶೀಲೆ ಎಂಬ ಕತೆಯನ್ನು ಓದಿದರೆ ಇದು ರೊಮಾನ್ಸ್ ಅಲ್ಲ ದೈನಂದಿನದ ನಡೆವಳಿಕೆಗಳನ್ನು ವರ್ಣಿಸುವ ಸಾಂಸಾರಿಕಚಿತ್ರ ಎಂದು ಕಾಣುವುದು. ಅಂತಹ ಚಿತ್ರದಲ್ಲಿ ಅಸಂಭವವಾದ ಸಂಗತಿಗಳು ಕೆಲವು ಸೇರಿಹೋಗಿವೆ. ಅವೆಲ್ಲವನ್ನೂ ಇಲ್ಲಿ ಹೇಳಬೇಕಾದುದಿಲ್ಲ. ಎರಡು ಉದಾಹರಣೆಗಳನ್ನು ಕೊಡುತ್ತೇವೆ. ವಿನೋದನು ಬಹು ದುಷ್ಟ; ಜಾರ; ಮದ್ಯಪಾಯಿ; ತನ್ನ ಹೆಂಡತಿಯನ್ನು ಬಾಕಿನಿಂದ ಹೊಡೆಯು ವುದಕ್ಕೂ ಹಿಂದೆಗೆಯದ ನೀಚ; ಹೀಗಿದ್ದ ಮನುಷ್ಯನು ಸಾಕಾದಷ್ಟು ಕಾರಣಗಳೇನೂ ಇಲ್ಲದೆ ತನ್ನ ಕೆಟ್ಟತನವನ್ನು ಬಿಟ್ಟು ಪತ್ನಿಯ ಕ್ಷಮೆ ಯನ್ನು ಬೇಡಿ ಕೊನೆಯ ಪುಟದಲ್ಲಿ ಆನಂದದಲ್ಲಿದ್ದಾನೆ. ಇದು ಅಸಂಭವ. ನ್ಯಾಯದ ಕೋರ್ಟು ವಿನೋದನನ್ನು ಸುಮ್ಮನೆ ಬಿಟ್ಟುಬಿಡುತ್ತದೆ; ವಿನೋದನು ಮಾಡಿದ ಕಾರ್ಯಗಳು ಯಾವ ಕೋರ್ಟಿನಿಂದಲೂ ಇಂಥ ಮನ್ನಣೆಯನ್ನು ಹೊಂದತಕ್ಕುವುಗಳಲ್ಲ. ಅಸಂಭವವಾದ ಸಂಗತಿ ಗಳಿರುವುವೆಂಬುದಕ್ಕೆ ಇದು ಎರಡನೆಯ ಉದಾಹರಣೆ.

ಅಸಂಭವವಾದ ಸಂಗತಿಗಳೇ ಅಲ್ಲದೆ ಈ ಪುಸ್ತಕದಲ್ಲಿ ಇನ್ನೊಂದು ದೋಷವಿದೆ. ಪುಸ್ತಕಗಳಲ್ಲಿ ನೀತಿ ತಿಳಿಸಲ್ಪಡಬೇಕಾದುದು ಅವಶ್ಯ ವಾದರೂ ಅವುಗಳನ್ನು ತಿಳಿಸುವುದಕ್ಕೆಂದು ಒಂದೊಂದು ಪಾತ್ರದ ಬಾಯಲ್ಲಿ ಒಂದೊಂದು ವಿಷಯವನ್ನು ಕುರಿತ ಒಂದೊಂದು ಲೆಕ್ಚರನ್ನು ಇಟ್ಟರೆ ಅದು ಕತೆಯಾಗುವುದಿಲ್ಲ. ನಾವು ಹುಡುಗರಾಗಿದ್ದಾಗ ಓದುತ್ತಿದ್ದ ಕನ್ನಡ ಪಾಠದ ಯಾವುದೋ ಒಂದು ಪುಸ್ತಕದಲ್ಲಿ ಗೌರಿಯನ್ನೋ ಇನ್ನಾವುದೋ ಹುಡುಗಿಯನ್ನೋ ಸ್ಕೂಲಿಗೆ ಕಳು ಹಿಸುವ ವಿಷಯವಾಗಿ ಒಬ್ಬ ತಾಯಿಗೂ ಅವಳ ಮಗನಿಗೂ ನಡೆದ ಸಂವಾದವು ಹುಡುಗಿಯರಿಗೆ ವಿದ್ಯಾಭ್ಯಾಸವು ಅವಶ್ಯವೆಂಬ ಅಂಶವನ್ನು ತಿಳಿಯಪಡಿಸುವುದಕ್ಕೆ ಸೇರಿಸಲ್ಪಟ್ಟಿತ್ತು. ಮಕ್ಕಳಿಗೆ ಆ ವಿಷಯವನ್ನು ತಿಳಿಸಲು ಅದು ಸರಿಯಾದ ಮಾರ್ಗವಿರಬಹುದು. ದೊಡ್ಡವರಿಗೆ ಅದೇ ವಿಷಯವನ್ನು ತಿಳಿಸಬೇಕಾದರೆ, ಇಲ್ಲವೆ ಆ ವಿಷಯವನ್ನು ಕುರಿತು ಒಂದು ಲೆಕ್ಚರನ್ನು ಬರೆಯಬಹುದು; ಇಲ್ಲವೆ ಕತೆಯಲ್ಲಿ ವಿದ್ಯಾ ವತಿಯರ ನಡೆನುಡಿಗಳನ್ನು ವರ್ಣಿಸಿ ತಿಳಿಸಬಹುದು. ಲೆಕ್ಚರನ್ನು

ಐದಾರು ಭಾಗವಾಗಿ ಮಾಡಿ ಒಂದೊಂದು ಭಾಗವನ್ನು ಒಬ್ಬೊಬ್ಬರಿಗೊ, ಅಥವಾ ಎಲ್ಲವನ್ನೂ ಒಬ್ಬರಿಗೆ ಮಾತ್ರವೋ ಆರೋಪಿಸುವುದು ನಾವಲಿನ ಮಾರ್ಗವಲ್ಲ. ಇದಕ್ಕೆ ಈ ಪುಸ್ತಕದಲ್ಲಿಯೇ ನಿದರ್ಶನವಿದೆ. ಸುಶೀಲೆಯ ನಡತೆಯಿಂದ ಪಾತಿವ್ರತ್ಯವು ಸ್ತ್ರೀಗೆ ಅವಶ್ಯಕವಾದ ಗುಣವೆಂದು ತೋರಿಸಲ್ಪಟ್ಟಿದೆ. ಹೀಗಲ್ಲದೆ, ಪಾತಿವ್ರತ್ಯದ ವಿಷಯವಾದ ಲೆಕ್ಚರನ್ನು ಅವಳಿಂದ ಹೇಳಿಸಿದರೆ ಅದರಿಂದ ನೀತಿ ತೋರಿಬಂದರೂ ಬರೆವಣಿಗೆ ವಯಸ್ಸಾದವರಿಗೆ ತಕ್ಕ ಕತೆಯಾಗುವುದಿಲ್ಲ. ಅಲ್ಲದೆ ಈ ಪುಸ್ತಕದಲ್ಲಿ ಸುಶೀಲೆ ಬಹಳ ನಿಜವಾದ ವ್ಯಕ್ತಿ ಎಂದು ಹೇಳುವಂತಿಲ್ಲ. ಓದಿದವಳೆನ್ನುವುದಕ್ಕೆ ಓದಿನ ಮಾತು; ಪತಿವ್ರತೆ ಎನ್ನುವುದಕ್ಕೆ ಪಾತಿವ್ರತ್ಯದ ವಿಷಯವಾಗಿ ತಂತ್ರನಾಥನೊಡನೆ ಮಾತು; ಪತಿಪರಾಯಣೆ ಎನ್ನುವುದಕ್ಕೆ ವಿನೋದನಿಗೆ ಹೇಳುವ ನೂರಾರು ಮಾತು; ಇಷ್ಟೇ ವಿನಾ ಸುಶೀಲೆ ನಿಜವಾದ ವ್ಯಕ್ತಿ ಎಂದು ನಮಗೆ ಭಾವನೆಯುಂಟಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಕತೆ ಯಾವುದಾದರೊಂದು ಸಂಸಾರದ ನಿಜವಾದ ಚಿತ್ರವೆಂದು ತೋರುವುದಿಲ್ಲ.

ಇದು ಗ್ರಂಥಕರ್ತ್ರಿಯವರ ಮೊದಲ ಪುಸ್ತಕವಾದುದರಿಂದ ಈ ದೋಷಗಳಿವೆ ಎಂದು ಹೇಳುವಹಾಗೆಯಿಲ್ಲ. ಇವರ ಇತರ ಪುಸ್ತಕಗಳಲ್ಲೂ ಈ ದೋಷಗಳೇ ಅಲ್ಲಲ್ಲಿ ಇವೆ. ನೀತಿಯನ್ನು ಬೋಧಿಸುವುದಕ್ಕೆ ಪಾತ್ರಗಳ ಬಾಯಲ್ಲಿ 'ಲೆಕ್ಚರು'ಗಳನ್ನು ಇಟ್ಟಿರುವ ಸಂದರ್ಭಗಳು ಬಹಳವಾಗಿವೆ. ಎರಡನೆಯ ಪುಸ್ತಕದಲ್ಲಿ ಸಭೆಯು ರಮಾನಂದ ಭಗವಾನಂದರಿಗೆ ವಿದ್ಯೆಯ ವಿಚಾರವಾಗಿ ಕೊಡುವುದೊಂದು ಲೆಕ್ಚರು; ಮೂರನೆಯ ಪುಸ್ತಕದಲ್ಲಿ ಪೋಲೀಸ್ ವೇಷವನ್ನು ತಾಳಿದ ಜಯಂತನು ಪೋಲೀಸ್ ಜಮಾದಾರನಿಗೆ ಪೋಲೀಸಿನವರ ವಿಷಯವಾಗಿ ಕೊಡುವ ಲೆಕ್ಚರು; ಹರಿಣಿ ಮೇದಿನಿಗೆ ವಿದ್ಯಾಭ್ಯಾಸದ ವಿಚಾರದಲ್ಲಿ ಕೊಡುವ ಲೆಕ್ಚರು; ಮೇದಿನಿ ಹರಿಣಿಗೂ ಉತ್ತಮ ಸ್ತ್ರೀಯೆಂದು ನಮಗೆ ತೋರುತ್ತದೆ; ಗ್ರಂಥಕರ್ತ್ರಿಯವರ ಆಶಯವು ಹೇಗಿದ್ದೀತೋ ನಾವರಿಯೆವು; ಆದರೆ ಅವರಿಬ್ಬರಲ್ಲಿ ಹರಿಣಿ ಉತ್ತಮ ಸ್ತ್ರೀಯೆಂದು ಅವರು ಭಾವಿಸುವಂತೆ ಕಾಣುತ್ತದೆ; ಕಾಮಪಾಲನು ಭ್ರಮರೆಗೆ ಸದ್ವೃತ್ತಿಯ

ವಿಚಾರವಾಗಿ ಕೊಡುವ ಲೆಕ್ಚರು; ನಾಲ್ಕನೆಯದರಲ್ಲಿ ವಿರಾಗಿಣಿ ತುಂಗೆಗೆ ವಿಧವೆಯರ ಗತಿಯನ್ನು ಕುರಿತು ಕೊಡುವ ಲೆಕ್ಚರೊಂದು; ನಾಟಕವುಂದಿರದಲ್ಲಿ ವಿರಾಗಿಣಿ, ತುಂಗಾ ಮತ್ತು ತಾರೆ ಇವರಿಗೆ ನಾಟಕಗಳ ವಿಚಾರವಾಗಿ ಕೊಡುವುದೊಂದು; ಇದಂತೂ ಶುದ್ಧ ಅಸಮಂಜಸ; ವಿರಾಗಿಣಿ ಮಾತನಾಡುವುದಲ್ಲದೆ ಸಿಕ್ಕಿದ ಕಡೆಯಲ್ಲೆಲ್ಲಾ ಮಾತನಾಡತಕ್ಕವಳೆಂದು ಇದರಿಂದ ತಿಳಿಯುತ್ತದೆ; ಆರನೆಯ ಪುಸ್ತಕ ದಲ್ಲಿ ಮೊದಲಿಂದ ಕಡೆಯವರೆಗೂ ಜಿಜ್ಞಾಸವೇ. ಹೀಗೆ ಇವರ ಪುಸ್ತಕಗಳಲ್ಲಿ ನೀತಿಯನ್ನು ಬೋಧಿಸುವುದಕ್ಕೆಂದು ಪಾತ್ರಗಳು ಅನೇಕ ಸ್ಥಳಗಳಲ್ಲಿ ಲೆಕ್ಚರುಗಳನ್ನು ಕೊಡುತ್ತವೆ.

ದೈವನಿರ್ಮಿತವಾದ ಈ ಪ್ರಪಂಚದ ಪದಾರ್ಥಗಳ ಸ್ವಭಾವವನ್ನು ಅರಿಯುವುದು ಮಾನವನಿಗೆ ಬಹುಕಷ್ಟ; ಅದರಲ್ಲೂ ಮಾನವ ಜಾತಿಯ ಸ್ವಭಾವವನ್ನು ಅರಿಯುವುದು ಹೆಚ್ಚು ಕಷ್ಟಸಾಧ್ಯ. ಒಂದು ಪದಾ ರ್ಥದ ಸ್ವಭಾವವನ್ನು ಮತ್ತೊಂದು ಅರಿಯಬಹುದು; ತನ್ನ ಸ್ವಭಾವ ವನ್ನು ತಾನೇ ತಿಳಿಯುವುದೆಂದರೆ, ತನ್ನಲ್ಲಿ ತಾನೇ ಎರಡಾಗಿ ಒಂದು ಇರತಕ್ಕುದು, ಇನ್ನೊಂದು ಎಲ್ಲವನ್ನೂ ಪರೀಕ್ಷಿಸಿನೋಡತಕ್ಕುದು ಎಂಬ ಎರಡು ಕಾರ್ಯಗಳನ್ನೂ ಮಾಡಬೇಕಾಗುವುದು. ನಮ್ಮನ್ನು ನಾವೇ ತಿಳಿಯುವುದು ಕಷ್ಟವಾಗುವುದಕ್ಕೆ ಇದೇ ಕಾರಣ. ನಾವು ಇತರರ ಸ್ವಭಾವವನ್ನರಿಯಬೇಕಾದರೆ ನಮ್ಮ ಸ್ವಭಾವವನ್ನೆ ಮೊದಲು ಅರಿತು ಅದನ್ನು ಸಾಮಾನ್ಯಾಪವರ್ತನವಾಗಿಟ್ಟುಕೊಂಡು ಅವರ ಸ್ವಭಾವವನ್ನು ಅರಿಯಬೇಕು. ಆದುದರಿಂದ ಮನುಷ್ಯರ ಸ್ವಭಾವ ವನ್ನು ವರ್ಣಿಸುವುದು ಕಷ್ಟಸಾಧ್ಯ. ಆದರೆ ಈ ಸ್ವಭಾವವನ್ನು ವ್ಯಕ್ತ ಪಡಿಸುವ ನಡೆನುಡಿಗಳನ್ನು ವರ್ಣಿಸುವುದು ಕಣ್ದೆರೆದು ನೋಡುವವ ರೆಲ್ಲರಿಗೂ ಅವರವರ ಶಕ್ತ್ಯನುಸಾರ ಸಾಧ್ಯ. ಇದಕ್ಕೆ ಅನುಭವವು ಆವಶ್ಯಕ. ಪ್ರಾಯಶಃ ಮನುಷ್ಯನ ಸ್ವಭಾವವನ್ನು ಕುರಿತು ಬರೆಯುವ ವರೆಲ್ಲರೂ ಈ ರೀತಿ ಅವನ ನಡೆನುಡಿಗಳನ್ನು ವರ್ಣಿಸುವರು. ಆದರೆ ಯಾವ ಮನುಷ್ಯನಲ್ಲಿಯೇ ಆಗಲಿ ನಡೆನುಡಿಗಳು ಅನೇಕ ರೀತಿಯಾಗಿರು ತ್ತವೆ. ದುಷ್ಟನಲ್ಲಿ ಬರಿಯ ದೌಷ್ಟ್ಯವೇ ಅಲ್ಲದೆ ಸ್ವಲ್ಪ ಸೌಜನ್ಯವೂ

ಇರುವುದು ; ಒಳ್ಳೆಯುವನೆಂಬವನಲ್ಲಿ, ಸ್ವಲ್ಪವಾದರೂ ಸಲ್ಲದ ಗುಣಗಳಿರುವುವೇನೋ. ಹೀಗಿರುವುದರಿಂದ ಯಾರಿಗೇ ಆಗಲಿ ಕೇವಲ ದೌಷ್ಟ್ಯವನ್ನೋ ಕೇವಲ ಸೌಜನ್ಯವನ್ನೋ ಆರೋಪಿಸಿದರೆ ವ್ಯಕ್ತಿ ನಿಜವಾದುದೆಂದು ಬೋಧೆಯಾಗದು. ಅಲ್ಲದೆ ಮನುಷ್ಯನ ಜೀವನವು ಸ್ಥೂಲವಿಚಾರಗಳಿಂದಲೂ ಸೂಕ್ಷ್ಮವಿಚಾರಗಳಿಂದಲೂ ಕೂಡಿದುದು. ಒಬ್ಬ ಮನುಷ್ಯನ ಸ್ವಭಾವವು ಅವನು ಕೊಡುವ ಒಂದು ಉಪನ್ಯಾಸದಿಂದ ಹೇಗೋ ಹಾಗೆಯೇ ಅವನು ಹಠಾತ್ತಾಗಿ ಹೇಳುವ ಒಂದು ಮಾತಿನಲ್ಲಿಯೂ ಗೊತ್ತಾಗುತ್ತದೆ. ಕತೆಯಲ್ಲಿ ಯಾರ ಚರಿತ್ರೆಯನ್ನು ಬರೆಯುವೆವೋ ಅವರ ಅಲ್ಪಾನಲ್ಪವಾದ ಚರ್ಯೆಗಳನ್ನು ವರ್ಣಿಸಿದರೆ ಹೊರತು ಅವರನ್ನು ನಿಜವಾಗಿ ವರ್ಣಿಸಿದಂತೆ ಅಲ್ಲ ; ಅವರ ಸ್ವಭಾವವನ್ನು ತಿಳಿಸಿದ ಹಾಗಲ್ಲ. ಹಾಗೆ ಮಾಡದೆ ಅವರಲ್ಲಿ ಮುಖ್ಯವಾಗಿರುವ ಒಂದೊಂದು ಗುಣವನ್ನು ಮುಂದಿಟ್ಟುಕೊಂಡು ಅದನ್ನು ನಾವು ವರ್ಣಿಸಿದರೆ ಅವರನ್ನು ಆಯಾ ಗುಣಗಳ ಮೂಟೆಯೆಂದು ಭಾವಿಸಿದಂತಾಯಿತೇ ಹೊರತು ಅವರ ಸ್ವಭಾವವನ್ನು ವರ್ಣಿಸಿದಂತಾಗದು ; ಕತೆ ನಿಜವಾಗಿ ತೋರದು.

"ಸುಶೀಲೆ" ಈ ದೋಷದಿಂದ ಕೆಟ್ಟುಹೋಗಿದೆ. ತಂತ್ರನಾಥನು ದುಷ್ಟನೆಂದೇ ಇಟ್ಟುಕೊಳ್ಳುವ. ಸುಶೀಲೆ ರೋಗದಿಂದ ಕಷ್ಟಪಡುತ್ತಾ ಬಿದ್ದಿದ್ದಾಗ* ಪಶುವೃತ್ತಿಯಲ್ಲಿಯೇ ನಿರತನಾದ ಮನುಷ್ಯನು ಸುಶೀಲೆಯಲ್ಲಿ ಅತ್ಯಾಚಾರವನ್ನು ನಡೆಯಿಸಲು ಹೋದನೆಂಬುದು ಸಂಭವವೆ? ಅಲ್ಲವೆಂದು ನಮಗೆ ತೋರುವುದು. ಹಾಗಾದರೆ ಈ ರೀತಿ ನಡೆಯಿತೆಂದು ಪುಸ್ತಕದಲ್ಲಿ ಬರೆದಿರುವುದಕ್ಕೆ ಕಾರಣವೇನು? ತಂತ್ರನಾಥನು ಪರಮದುಷ್ಟನೆಂದು ತೋರುವುದಕ್ಕೆ. ಆದರೆ ಯಾವುದು ನಡೆಯಿತೆಂದು ಉಕ್ತವಾಗಿರುವುದೋ ಅದು ನಡೆದಿರಲಾರದೆಂದು ಓದುವವರಿಗೆ ತೋರಿದರೆ ಲೇಖಕನ ಉದ್ದೇಶವೇ ಭಂಗವಾದ ಹಾಗಾಯಿತು. ಕೆಟ್ಟತನದ ತೌರುಮನೆಯಾಗಿರಬೇಕಾದ ತಂತ್ರನಾಥನು ಮನುಷ್ಯನಾಗಿ ತೋರದೆಯೇ ಇರುವುದರಿಂದ ಒಳ್ಳೆಯವನೂ ಅಲ್ಲ ಕೆಟ್ಟವನೂ ಅಲ್ಲ, ಎಂದೂ ಯಾರೂ ಕಾಣದ ವ್ಯಕ್ತಿವಿಶೇಷವಾಗುತ್ತಾನೆ.

ಹೀಗೆ ಅಸಂಭವವಾದ ಪಾತ್ರಗಳು, ಅಸಂಭವವಾದ ನಡೆನುಡಿಗಳು ವರ್ಣಿಸಲ್ಪಟ್ಟಿರುವುದರಿಂದ ಇವರ ಬೇರೆ ಪುಸ್ತಕಗಳಲ್ಲಿಯೂ ನಿಜವೆಂಬ ಭಾವವು ಕಡಮೆಯಾಗುತ್ತದೆ. ಸಭಾ ಪುಸ್ತಕದ ಕಡೆಯ ಸನ್ನಿವೇಶವನ್ನು ಓದಿದರೆ ಈ ಅಂಶವು ವಿಶದವಾಗುವುದು. ತಹಸೀಲುದಾರರ ಮನೆಯಲ್ಲಿ ಆಳುಕಾಳುಗಳು ಯಾರೂ ಇರಲಿಲ್ಲವೆ? ಸಾಯಂಕಾಲ ರಮಾನಂದ ಭಗವಾನಂದರು ಫುಟ್‌ಬಾಲನ್ನಾಡುವುದಕ್ಕೆ ಹೋದಾಗಲಿಂದ ಕಗ್ಗತ್ತಲೆಯಾಗುವವರೆಗೂ ಸಭೆ ತೋಟದಲ್ಲಿ ಏಕೆ ಕುಳಿತಿದ್ದಳು? ಮನೆಯಲ್ಲಿ ದೀಪ ಹಚ್ಚಿದವರು ಯಾರು? ಎಲೆಕ್ಟ್ರಿಕ್ ಲ್ಯಾಂಪುಗಳಿದ್ದುವೋ? ಸಭೆಯ ಸಹವಾಸವನ್ನು ಅಪೇಕ್ಷಿಸಿಬಂದ ರಾಜಶೇಖರನು ಅವಳ ಜುಟ್ಟನ್ನು ಏಕೆ ಹಿಡಿದನು? ಹಾಗೆ ಹಿಡಿದಾಗ ಸಭೆ ಗಟ್ಟಿಯಾಗಿ ಕೂಗಿಕೊಳ್ಳಲಿಲ್ಲವೇಕೆ? ಯಾರೂ ಹತ್ತಿರದಲ್ಲಿಯೇ ಇರಲಿಲ್ಲವೇನೋ? ರಾಜಶೇಖರನು ಎಂಟು ಗಂಟೆಗೆ ಬರುವುದಾಗಿ ಹೇಳಿ ಅವಕಾಶಕೊಟ್ಟು ಹೋದನೆ? ಹೋದನೆಂದು ಹೇಳಿಕೊಳ್ಳುವ! ರಮಾನಂದ ಭಗವಾನಂದರು ಎಂಟಲ್ಲದಿದ್ದರೆ ಒಂಬತ್ತು ಗಂಟೆಗಾದರೂ ಮನೆಗೆ ಬರುವರೆಂದು ಸಭೆಗೆ ತಿಳಿದಿತ್ತಷ್ಟೆ? ಊರೊಳಕ್ಕೆ ಹೋಗಿ ಅವರು ಬರುವವರೆಗೂ ಯಾರನ್ನಾದರೂ ಸಹಾಯಕ್ಕೆ ಕರೆದುಕೊಂಡು ಬರಬಹುದಾಗಿತ್ತಲ್ಲವೆ? ಅಯ್ಯೋ, ಪಾಪ! ಊರೊಳಗೆ ಹೆಂಗಸು ಒಬ್ಬಳೇ ಹೋಗುವುದುಂಟೇ ಎಂದು ಹೇಳುವಹಾಗಿಲ್ಲ. ಸಭೆ ಅತಿ ಧೈರ್ಯಶಾಲಿನಿ; ಅದೇ ರಾತ್ರಿ ಆ ಊರನ್ನೇ ಬಿಟ್ಟು ಒಂಟಿಯಾಗಿ ದಾರಿಯನ್ನು ನಡೆಯುವಷ್ಟು ಧೈರ್ಯವುಳ್ಳವಳು! ಸಭೆ ಊರೊಳಕ್ಕೆ ಹೋಗುವ ಯೋಚನೆಯನ್ನು ಮಾಡಲಿಲ್ಲವಾದುದರಿಂದ ತಹಸೀಲುದಾರರ ಮನೆ ಊರಲ್ಲಿತ್ತೋ ಕಾಡಿನಲ್ಲಿತ್ತೋ? ಮನೆಯನ್ನು ಬಿಟ್ಟು ಓಡಿಹೋಗುವುದೇ ಉತ್ತಮವೆಂದು ಅವಳಿಗೆ ತೋರಿದ್ದರೆ ರಾಜಶೇಖರನು ಒಂದು ಕಡೆ ಹೊರಡುತ್ತಲೇ ತಾನು ಇನ್ನೊಂದು ಕಡೆ ಏತಕ್ಕೆ ಹೊರಡಬಾರದಾಗಿತ್ತು?—ಇವೇ ಮೊದಲಾದ ಅನೇಕ ಪ್ರಶ್ನೆಗಳು ಈ ಪುಸ್ತಕವನ್ನು ಓದುವವರೆಲ್ಲರ ಮನಸ್ಸಿಗೂ ಬಂದಾವು. ಸಭಾ ಪುಸ್ತಕದ ಎರಡನೆಯ ಭಾಗದಲ್ಲಿ ಅಸಂಭವವೆನ್ನುವ ವಿಚಾರಗಳು ಅಷ್ಟು

ಇಲ್ಲವಾದರೂ ಒಂದು ಪಾತ್ರ ಬಹಳ ಅಸಂಭವನೆಂದು ಕಂಡುಬರುತ್ತದೆ. ಕೃಷ್ಣವೇಣಿ ತನ್ನ ಶಯ್ಯಾಗೃಹದಲ್ಲಿ ಹಾಸಿಗೆಯಲ್ಲಿ ಮಲಗಿರುವಾಗ ಅದೇ ಕೋಣೆಯಲ್ಲಿ, ಆ ಹಾಸಿಗೆಯ ಪಕ್ಕದಲ್ಲಿ, ತುಂಗೆ ಮಕರಂದನನ್ನು ತನ್ನನ್ನು ಬಿಟ್ಟುದಕ್ಕಾಗಿ ನಿಂದಿಸಿ ತನ್ನನ್ನು ಪುನಃ ಸ್ವೀಕರಿಸಬೇಕೆಂದು ಕೇಳಿಕೊಂಡಳೆಂದೂ, ಅದನ್ನು ಕೇಳಿದುದರಿಂದ ಕೃಷ್ಣವೇಣಿಗೆ ತನ್ನ ಪತಿಯಲ್ಲಿದ್ದ ಸಂದೇಹವು ನಿವೃತ್ತವಾಯಿತೆಂದೂ ಕತೆಯಲ್ಲಿದೆ. ತುಂಗೆಯೂ ಮಕರಂದನೂ ಗಂಡಹೆಂಡಿರಲ್ಲ; ತುಂಗೆ ಜಾರೆ; ಮಕರಂದನು ಜಾರ. ಇಂತಹ ಸಮಾಚಾರವನ್ನು ಜನರು ನೋಡಿ ಕೇಳಿ ಅರಿತಿರಲಾರರು. ಅಸಂಭವವಲ್ಲವೆಂದು ಸೂಚಿಸುವ ಉದ್ದೇಶದಿಂದ ಕತೆಯಲ್ಲಿ ಕೃಷ್ಣವೇಣಿ ನಿದ್ರೆಯಲ್ಲಿದ್ದಾಳೆಂದು ತುಂಗೆ ಭಾವಿಸಿದಳೆಂದು ಸೂಚಿಸಿದೆ. ಕೃಷ್ಣವೇಣಿ ಎಷ್ಟೇ ನಿದ್ರೆಯಲ್ಲಿ ಇರುವಳೆಂದು ತಿಳಿದಿದ್ದರೂ ತುಂಗೆ ಈ ವಿಷಯವಾಗಿ ಅವಳ ಹಾಸಿಗೆಯ ಪಕ್ಕದಲ್ಲಿ ಅವಳ ಗಂಡನನ್ನು ಹೀಗೆ ಬೇಡಿದಳೆಂದು ನಾವು ನಂಬಲಾರೆವು. ಹೀಗೆ ನಭೆಯ ಕತೆಯಲ್ಲಿ ಉಕ್ತವಾಗಿರುವ ಅಸಂಭವವೆಂದು ತೋರುವ ನಡೆವಳಿಕೆಗಳು ಕತೆಯ ನೈಜಭಾವವನ್ನು ಕೆಡಿಸುತ್ತವೆ.

ನಾವು ಒಂದು ವಿಷಯವನ್ನು ಕುರಿತು ಹೇಳಲು ಸಂಕೋಚಪಡುತ್ತೇವೆ. ಗ್ರಂಥಕರ್ತೃಗಳಿಗೆ ಇರುವ ಸ್ವಾತಂತ್ರ್ಯವು ನಮಗಿಲ್ಲ. ಅವರು ಯಾವ ಯಾವ ವಿಷಯವನ್ನು ಕುರಿತು ಬರೆಯಬಹುದೋ ಅದನ್ನೆಲ್ಲಾ ಕುರಿತು ನಾವೂ ಬರೆಯಲಾಗದು; ಆದರೆ ಕೆಲವು ವಿಷಯಗಳನ್ನು ಕುರಿತು ಗ್ರಂಥಕರ್ತೃಗಳೂ ಬರೆಯಕೂಡದೆಂದು ನಮ್ಮ ಅಭಿಪ್ರಾಯ. ವಿರಾಗಿಣೀ ಕತೆಯಲ್ಲಿ ನವಮಪರಿಚ್ಛೇದದಲ್ಲಿರುವ ಸನ್ನಿವೇಶವು ಅಂಥದು. ಅದರಲ್ಲಿ ಉಪಯೋಗಿಸಿರುವ ಒಂದೆರಡು ಮಾತುಗಳೂ ದ್ವಂದ್ವಾರ್ಥಯುಕ್ತಗಳಾಗಿ ಹೇಯವಾಗಿವೆ. ಸುಶೀಲೆಯ ಪೀಠಿಕೆಯಲ್ಲಿ "ದೂಷ್ಯವಚನಗಳು ಕೆಲವು ಅಲ್ಲಲ್ಲಿ ಇವೆ. ಅವು ದೂಷ್ಯಪಾತ್ರಗಳಿಗೆ ಸೇರಿದುವು" ಎಂದು ಗ್ರಂಥಕರ್ತ್ರಿಯವರು ಸೂಚಿಸಿದ್ದಾರೆ. ಇಲ್ಲಿ ನಾವು ಮಾಡಿರುವ ಆಕ್ಷೇಪಕ್ಕೂ ಪ್ರಾಯಶಃ ಅದೇ ಸಮಾಧಾನವಿರಬಹುದು. ಆದರೆ ಇಲ್ಲಿ ಮಾತನಾಡುವವರು ಚಂದ್ರಭಾಗೆ-ವಿರಾ

ಗಿಣಿಯರು; ದೂಷ್ಯವಚನಗಳನ್ನು ಉಪಯೋಗಿಸುವ ಪಾತ್ರಗಳಲ್ಲ. ಕತೆಗಳಲ್ಲಿ ಕೆಲವರು ಕೇವಲ ಒಂದು ಕ್ಷಣಮಾತ್ರದ ಉತ್ಸಾಹಕ್ಕೋಸ್ಕರ ದೂಷ್ಯವಾದ ಸನ್ನಿವೇಶಗಳನ್ನು ಅಪೇಕ್ಷಿಸುತ್ತಾರೆ. ಇಂಗ್ಲಿಷಿನಲ್ಲಿ ರೆಯಿನಾಲ್ಡ್ಸ್ ಎಂಬ ಲೇಖಕನೊಬ್ಬನು ಈ ರೀತಿಯ ಆಸೆಗೆ ತಕ್ಕಂತಹ ಪುಸ್ತಗಳನ್ನು ಅನೇಕ ಬರೆದಿದ್ದಾನೆ. ತಮಿಳು ಭಾಷೆಯಲ್ಲಿ ಈಗ ಪ್ರಚುರವಾಗುತ್ತಿರುವ ಅನೇಕ ಕತೆಗಳಲ್ಲಿ ಇಂತಹ ಕಥಾಸಂಧಿಗಳು ಬಹಳವಾಗಿವೆ ಎಂದು ನಾವು ಕೇಳಿದ್ದೇವೆ. ಇಂತಹ ಸನ್ನಿವೇಶಗಳ ಜಾತಿಗೆ ಸೇರಿದುದು ಇದೂ ಒಂದು ಎಂದು ಈ ವಿರಾಗಿಣೀ ಕತೆಯ ನವಮಪರಿಚ್ಛೇದದ ಸಂಧಿಯನ್ನು ಹೇಳಬೇಕಾಗುತ್ತದೆ. ಇದರಿಂದ ಕತೆಗೆ ಯಾವ ಪ್ರಯೋಜನವೂ ಇಲ್ಲ. ಪ್ರಯೋಜನವಿದ್ದರೂ ವಿಷಯವು ಕೇವಲ ಸೂಚನೆಗೆ ಅರ್ಹವೇ ಹೊರತು ಬಾಯಿಮಾತಿನಿಂದ ವರ್ಣಿಸಲ್ಪಡಲು ಅರ್ಹವಲ್ಲ; ಹಾಗೂ ಸತೀಮಣಿಯೊಬ್ಬಳಿಂದ ತನ್ನ ಭಗಿನಿಯರಿಗೆಂದು ಬರೆಯಲ್ಪಟ್ಟ ನೀತಿಬೋಧಕ ಗ್ರಂಥದಲ್ಲಿರುವುದಕ್ಕೆ ಅದಕ್ಕೆ ಅಧಿಕಾರ ಸ್ವಲ್ಪವೂ ಇಲ್ಲ.

ಮೂರನೆಯದಾದ ವಿದ್ಯುಲ್ಲತಾ ಕತೆಯಲ್ಲಿಯೂ ಕೆಲವು ಅಸಂಭವವೆಂದು ತೋರುವ ಸಂಗತಿಗಳು ಇವೆ. ಅಮರನಾಥನು ದುಷ್ಟನೇ ಆಗಿರುವಲ್ಲಿ ಅವನು ವಿದ್ಯುಲ್ಲತೆಯನ್ನು ಅಪಹರಿಸಿ ಶಚೀಕಾಂತನು ಯಾವ ಊರಲ್ಲಿ ಕಲೆಕ್ಟರೋ ಅದೇ ಊರಲ್ಲಿ ಪ್ರಸಿದ್ಧನಾದ ಕಾಮಪಾಲನ ಅನಾಥಾಶ್ರಮದಲ್ಲಿ ತಂದಿಟ್ಟನೆಂದು ನಂಬುವುದು ಸುಲಭವಲ್ಲ. ನಾಲದುದಕ್ಕೆ ಅವನೇ ಕರೆತಂದು ಬಿಟ್ಟಿರುವ ಬೇರೊಬ್ಬ ಸ್ತ್ರೀ ಅಲ್ಲಿಯೇ ಇದ್ದಾಳೆ. ಬಹಳ ಮಾಟದ ಹೂಟಗಳನ್ನು ಅರಿತ ಅಮರನಾಥನಿಗೆ ಈ ಹೂಟವು ಸರಿಯಲ್ಲವೆಂದು ತೋರದೆಹೋಯಿತೆ? ವಿದ್ಯುಲ್ಲತೆ ಕಾಮಪಾಲನ ಅನಾಥಾಶ್ರಮದಿಂದ ವರ್ತಮಾನಪತ್ರಿಕೆಯಲ್ಲಿ ಹಾಕಿಸುವ "ಅಡ್ವರ್ಟೈಸ್‌ಮೆಂಟ್", ಅದರ ಜವಾಬು, ಇವೇ ಮೊದಲಾದ ಬಹು ವಿಚಿತ್ರವಾದ ನಡೆವಳಿಕೆಗಳೆಲ್ಲಾ ಈ ಕತೆಯಲ್ಲಿ ಬಂದಿವೆ. ಆದರೆ ಗ್ರಂಥಕರ್ತ್ರಿಯವರ ಉದ್ದೇಶದಲ್ಲಿ ಈ ಪುಸ್ತಕದ ಕತೆ ಹೇಗೆ ಜರುಗುವುದೋ ಅದು ತಿಳಿಯದಿರುವುದರಿಂದ ಈ ಕತೆಯ ಕಥಾಸಂಧಿಗಳನ್ನು ಕುರಿತು

ಚರ್ಚಿಸಿ ಪ್ರಯೋಜನವಿಲ್ಲ. "ಮಾತೃನಂದಿನಿ"ಯ ವಿಚಾರದಲ್ಲೂ ನಾವು ಹೇಳತಕ್ಕುದು ಬಹಳವಿಲ್ಲ. ಮಠಗಳ ಮತ್ತೂ ಮಠಾಧಿಪತಿಗಳ ಈಗಳಿನ ದುರವಸ್ಥೆಯನ್ನು ವರ್ಣಿಸಿರುವುದರಿಂದಲೂ ಸಮಾಜ ಸಂಸ್ಕರಣದಲ್ಲಿ ಉದ್ಯುಕ್ತರಾಗಿರುವ ಕೆಲವು ಜನರ ಕೆಲವು ಅಭಿಪ್ರಾಯಗಳನ್ನು ಉತ್ಕರ್ಷಿಸಿರುವುದರಿಂದಲೂ ಈ ಪುಸ್ತಕದಲ್ಲಿ ಉಕ್ತವಾಗಿರುವ ವಿಚಾರಗಳು ಈ ಕಾಲದುವೆಂದು ತೋರಿಬರುವುವು. ಸಮಾಜ ಸಂಸ್ಕರಣದ ಜನರೂ ಮನೆಗಳಲ್ಲಿಯೇ ಮದುವೆಮಾಡುತ್ತಾರೆ. ಈ ಪುಸ್ತಕದಲ್ಲಿಯ ನಾಯಕನಾಯಿಕೆಯರಾದರೆ ಯಾವುದೋ ಒಂದು ವನದಲ್ಲಿ ಎಂತದೋ ಒಂದು ಋಷ್ಯಾಶ್ರಮದಲ್ಲಿ ಮದುವೆಮಾಡಿಕೊಳ್ಳುತ್ತಾರೆ. ನವೀನನಾಗರಿಕತೆಯಲ್ಲಿ ಮುಂದಕ್ಕೆ ಬರಬಹುದಾದ ವಿಚಾರವಿರಬಹುದು ಇದು. ಮೊದಲಿಂದ ಕೊನೆಯವರೆಗೂ ಹೊಸಹೊಸ ರೀತಿಯಲ್ಲಿ ನಡೆಯುವ ಪಾತ್ರಗಳೇ ಪುಸ್ತಕದಲ್ಲಿ ಮುಖ್ಯವಾಗಿರುವುದರಿಂದ ಯಾವುದೂ ಅಸಂಭವವೆಂದು ಮನಸ್ಸಿಗೆ ತೋರುವುದಿಲ್ಲ. ಅಭ್ಯಾಸಬಲದಿಂದ ಮನಸ್ಸು ಸ್ವಸ್ಥವಾಗಿರುತ್ತದೆ.

ರಮಾನಂದ ಎಂಬ ನಾಟಕದಲ್ಲಿ ಓದುವವರಿಗೆ ಕೌತುಕವನ್ನುಂಟುಮಾಡುವ ಅಂಶಗಳು ಕೆಲವು ಇವೆ. ಶ್ರೀಮಂತನೂ ತಪಸ್ವಿನಿಯಾದ ಅವನ ಪತ್ನಿಯೂ ಮಕ್ಕಳನ್ನು ಗುರುಕುಲವಾಸಕ್ಕೆ ಕಳುಹುವ ವಿಷಯವನ್ನು ನೋಡಿ ಓದುವವರು ಯಾವುದೋ ಪೂರ್ವಕಾಲದ ಸಮಾಜ ಸ್ಥಿತಿಯನ್ನು ವರ್ಣಿಸುವ ಕತೆಯಿದೆಂದು ಭಾವಿಸುವರು. ವಿದ್ಯಾವಾಗೀಶ ಎಂಬ ಹೆಸರೂ ಬಹಳ ಭಾವಯುಕ್ತವಾದುದು. ಆದರೆ ಈ ಮಹಾಶಯನು ಹುಡುಗರಿಗೆ ಪಾಠಹೇಳುವಾಗ ಹಾಗಿರಲಿ;—ಶ್ರೀಮಂತನ ಬಳಿಗೆ ಬಂದು ಶಿಷ್ಯರನ್ನು ಸ್ವೀಕರಿಸುವಾಗಲೂ ಕೇವಲ ಸಾಮಾನ್ಯವಾದ ಪದ್ಯಸಾರದ ಪದ್ಯಗಳನ್ನು 'ಕೋಟ್' ಮಾಡುತ್ತಾನೆ. ಅದನ್ನು ನೋಡಿದೊಡನೆ ಪೂರ್ವಕಾಲವೆಂಬ ಭಾವವು ಮಾಯವಾಗಿ ವಿದ್ಯಾವಾಗೀಶನು ಸುಜನೋತ್ತಂಸನಿಗೂ ಅಥವಾ ರೈಸ್‌ಸಾಹೇಬರಿಗೂ ಈಚೆಯವನೆಂದು ವ್ಯಕ್ತವಾಗುತ್ತದೆ. ಅಲ್ಲದೆ ಈ ವಿದ್ಯಾವಾಗೀಶನು ಬನೀನನ್ನೋ ಕೋಟನ್ನೋ ಧರಿಸತಕ್ಕವನು; ಕೇವಲ ಆಧುನಿಕ.

ಆದರೆ ಈ ಭಾವವೂ ಸ್ಥಿರವಾಗಿ ನಿಲ್ಲುವಹಾಗಿಲ್ಲ. ಏಕೆಂದರೆ, ಗುರುಕುಲ ವಲ್ಲಿ ಸೇರಿರುವ ಬಾಲಕರು ಕೇವಲ ಶಕ್ತರು. ರಮಾನಂದನಿಗೆ ಸಾಟಿಯಾದವರು ಈ ಕಾಲದಲ್ಲಿರುವರೋ ಇಲ್ಲವೋ ನಾವರಿಯೆವು; ಪುರಾಣೋಕ್ತರಾದ ಮಹಾಪುರುಷರಲ್ಲಿ ಇವನಿಗೆ ಎಣೆಯಾಗಬೇಕಾದರೆ ಪ್ರಹ್ಲಾದನೊಬ್ಬನೇ. ಆದರೂ ಈಗಳಿನ ಕನಿಷ್ಠರೀತಿಯ ಬಾಲಕರಲ್ಲೂ ಇಂತಹ ರತ್ನವೊಂದು ಇರಬಹುದೆಂದು ನಂಬಿದರೆ ವಿಷಯಲಾಲಸೆಗಳೇನೆಂಬುದನ್ನು ತಿಳಿದು ಜಯಿಸುವಷ್ಟು ವಯಸ್ಸಾದ ಯುವಕನನ್ನು ಚಿತ್ರಕನು ಕಾಡಿಗೆ ಹೇಗೆ ಒಯ್ಯಲಾಯಿತೋ ತೋರುವುದಿಲ್ಲ.

ಇದುವರೆಗೆ ನಾವು ಚರ್ಚಿಸಿರುವ ಪುಸ್ತಕಗಳೆಲ್ಲಕ್ಕಿಂತ ಐದನೆಯದಾದ ದಕ್ಷಕನ್ಯಾ ಕತೆ ಇದ್ದುದರಲ್ಲಿ ಮೇಲಾದುದೆಂದು ನಮಗೆ ತೋರುತ್ತದೆ. ಎಂದರೆ ಅದರಲ್ಲಿ ಹೇಳಿರುವುದೆಲ್ಲಾ ಈಗ ಸಾಧ್ಯವೆಂದಲ್ಲ; ಕತೆಯಲ್ಲಿಯೇ ಉಕ್ತವಾಗಿರುವ ಅಂಶಗಳು ಪರಸ್ಪರ ವಿರೋಧವಾಗಿಲ್ಲ. ಕತೆಯೂ ಚೆನ್ನಾಗಿ ಕಟ್ಟಿರುವ ಪತ್ತೇದಾರೀ ಕತೆಯಾಗಿದೆ. ಹೆಂಡತಿಯನ್ನು ತಾಯ ಮನೆಗೆ ಕಳುಹಿ ಅವಳು ಅಲ್ಲಿ ಗತಿಸಿದಳೆಂದು ಹೇಗೋ ವಾರ್ತೆ ಬಂದ ಮಾತ್ರಕ್ಕೇ ಅಲ್ಲಿಗೆ ಹೋಗದೆಯೂ ಅಲ್ಲಿಂದ ತನ್ನ ಮಕ್ಕಳನ್ನು ಕರೆಯಿಸಿಕೊಳ್ಳದೆಯೂ ಕರೆಯಿಸಿಕೊಳ್ಳಲು ಪ್ರಯತ್ನಪಡದೆಯೂ ತಾರಾಪತಿರಾಯನು ವರ್ಷಾಂತರ ಸುಮ್ಮನಿದ್ದನೆಂಬುದು ಅಸಂಭವವೆಂದು ಮನಸ್ಸಿಗೆ ತೋರುವುದೇನೋ ನಿಜ. ಶಕುಂತಲೆಯನ್ನು ದುಷ್ಯಂತನು ಮರೆಯುವುದಕ್ಕೆ ದೂರ್ವಾಸನ ಶಾಪವು ಕಾರಣವಾದ ಹಾಗೆ, ಪಾಶ್ಚಿಮಾತ್ಯರ ಪತ್ತೇದಾರೀ ಕತೆಗಳಲ್ಲಿ ಅಲ್ಲಲ್ಲಿ ಉಪಯೋಗಿಸಲ್ಪಡುವ ಮೆಸ್ಮರಿಸಂ, ಹಿಪ್ನಾಟಿಸಂ ಇವುಗಳನ್ನು ನವೀನ ಪತ್ತೇದಾರೀ ಕತೆಯಾದ ಈ ಕತೆಯಲ್ಲೂ ಉಪಯೋಗಿಸಬಹುದಾಗಿತ್ತು. ಕತೆ ಇದ್ದುದರಲ್ಲಿ ಚೆನ್ನಾಗಿದೆ.

ನಾವು ಇದುವರೆಗೆ ಹೇಳಿರುವುದೆಲ್ಲವೂ ಕತೆಗಳ ಬಂಧನಾಕ್ರಮವನ್ನು ಕುರಿತು ಮಾತ್ರ. ಈಗ ಗ್ರಂಥಕರ್ತ್ರಿಯವರ ಉದ್ದೇಶಗಳನ್ನೂ ಕತೆಯಲ್ಲಿ ತೋರಿಬರುವ ಭಾವಗಳನ್ನೂ ಸ್ವಲ್ಪ ವಿಚಾರ ಮಾಡುವೆವು. ದೇಶಹಿತೈಷಿತೆಯಿಂದ ಪ್ರೇರಿತರಾಗಿ ಈ ಗ್ರಂಥಕರ್ತ್ರಿಯವರು ಪುಸ್ತಕ

ರಚನೆಯಲ್ಲಿ ಉದ್ಯುಕ್ತರಾಗಿರುವುದು ನಮ್ಮ ನಾಡಿನ ಜನರ ಅಸಾಧಾರಣ ಪುಣ್ಯೋದಯವೆಂದು ನಾವು ಮೊದಲೇ ಸೂಚಿಸಿದ್ದೇವೆ. ಇವರು ತಮ್ಮ ಪುಸ್ತಕಗಳ ಆರಂಭದಲ್ಲಿ ಬರೆದಿರುವ ಉಪನ್ಯಾಸ, ಉಪೋದ್ಘಾತ, ಪೀಠಿಕೆ, ಅವತಾರಿಕೆ, ಮೊದಲಾದುವುಗಳಿಂದ ಇವರ ಸದುದ್ದೇಶವು ಎಂತಹುದೆಂದು ವ್ಯಕ್ತವಾಗುತ್ತಿದೆ. ನಮ್ಮ ನಾಡಿನ ಸ್ತ್ರೀಮಂಡಲಿಯನ್ನು ಉದ್ಧಾರಮಾಡುವುದಕ್ಕೇ ಇವರು ಈ ಕಾರ್ಯದಲ್ಲಿ ತೊಡಗಿರುವರು. ಅಲ್ಲಲ್ಲಿ ನಮ್ಮ ನಾಡಿನ ಪುರುಷರಿಗೂ ಕೆಲವು ಮಾತುಗಳನ್ನು ನಿರ್ದೇಶಮಾಡಿರುವುದರಿಂದ ಈ ಪುಸ್ತಕಗಳನ್ನು ನಮ್ಮ ನಾಡಿನ ಪುರುಷರೂ ಓದಿ ಸನ್ಮಾರ್ಗವನ್ನವಲಂಬಿಸಿದವರಾಗಬೇಕೆಂದು ಕೂಡ ಇವರ ಅಭಿಪ್ರಾಯವೆಂದು ತೋರುತ್ತದೆ. ಆದುದರಿಂದ ಇವರು ತಮ್ಮ ಪುಸ್ತಕಗಳಲ್ಲಿ ಶ್ಲಾಘನೀಯವಾದುವೆಂದು ತೋರಿರುವ ಅಂಶಗಳನ್ನೂ ಇಲ್ಲಿ ವಿಚಾರಮಾಡುವುದು ಆವಶ್ಯಕ.

ಸ್ತ್ರೀಯರು ವಿದ್ಯಾವತಿಯರಾಗುವುದು ದೇಶದ ಏಳಿಗೆಗೆ ಅತ್ಯಾವಶ್ಯಕವೆಂದು ಎಲ್ಲರೂ ಒಪ್ಪುವರು. ಈ ವಿಷಯವನ್ನು ಈ ಪುಸ್ತಕಗಳಲ್ಲಿ ಗ್ರಂಥಕರ್ತ್ರಿಯವರು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ ವಿದ್ಯೆ ಎಂದರೆ ಓದುಬರಹ ಬರುವುದು ಎಂದು ಸಾಮಾನ್ಯವಾಗಿ ಜನರೆಲ್ಲರೂ ತಿಳಿದಿರುವ ಹಾಗೆಯೇ ಇವರೂ ಎಣಿಸುತ್ತಾರೆಂದು ತೋರುತ್ತದೆ. ಓದುಬರಹ ಬಂದ ಮಾತ್ರಕ್ಕೇ ಸುಶೀಲೆಯು ಹಾಗಾಗಲೀ, ಓದುಬರಹ ಬಾರದ ಮಾತ್ರಕ್ಕೇ ಗಿರಿಯಮ್ಮನಂತಾಗಲೀ, ಸ್ತ್ರೀಯರು ಆಗುವರೆಂದು ಹೇಳುವುದು ತಪ್ಪು ಎಂದು ತೋರುತ್ತದೆ. ನಾವು ಓದುಬರಹವನ್ನೇ ಅರಿಯದ ನಮ್ಮ ಕೆಲವು ಸಂಸಾರಗಳ ಯಜಮಾನಿಯರನ್ನು ನೋಡಿದ್ದೇವೆ. ಮನೆಗೆಲಸವನ್ನು ಸರಿಯಾಗಿ ನೋಡಿಕೊಳ್ಳುವುದು; ಸಂಸಾರಕ್ಕೆ ಸೇರಿದ ಎಲ್ಲರ ಸುಖಕ್ಕೂ ಮುಖ್ಯಕಾರಣರಾಗಿರುವುದು; ಮನೆಗೆ ಬಂದವರನ್ನು ಸರಿಯಾಗಿ ಆದರಿಸುವುದು; ನೆರೆಹೊರೆಯವರ ಕಷ್ಟಸುಖಗಳಲ್ಲಿ ಸ್ತ್ರೀಹೃದಯಕ್ಕೆ ಲಕ್ಷಣವಾದ ಲಾಲಿತ್ಯದಿಂದ ಸಹಾಯಕರೂ ಭಾಗಿಗಳೂ ಆಗಿರುವುದು; ಎಂದರೆ ಸಾಮಾನ್ಯವಾಗಿ ತಾವು ಇರುವ ಸ್ಥಳದಲ್ಲಿ ಸ್ವಲ್ಪಮಟ್ಟಿಗೋ ಅಥವಾ

ಹೆಚ್ಚಾಗಿಯೇ ಜನರ ಸುಖಕ್ಕೆ ಅಂತಹವರು ಕಾರಣಭೂತರಾಗಿರುವುದು; ಇದನ್ನು ಎಷ್ಟೋ ಕಡೆ ನಾವು ನೋಡಿದ್ದೇವೆ; ಪ್ರಾಯಶಃ ಅನೇಕರು ನೋಡಿರುವರು. ಅಂತಹ ಸ್ತ್ರೀಯರು ಓದುಬರಹವನ್ನು ತಿಳಿಯದವರಾದರೂ ಮಹಾವಿದ್ಯಾವತಿಯರೆಂದೂ, ತಮ್ಮ ಆ ವಿದ್ಯೆದಿಂದ ಅತಿಮಾನ್ಯರೂ ಪೂಜ್ಯರೂ ಆದವರೆಂದೂ ನಮ್ಮ ಭಾವನೆ; ಇದು ಎಲ್ಲರ ಭಾವನೆಯೂ ಆಗಬೇಕೆಂದು ನಮಗೆ ತೋರುತ್ತದೆ. ಗ್ರಂಥಕರ್ತ್ರಿಯವರ ಪುಸ್ತಕಗಳಲ್ಲಿ ಓದುಬರಹವನ್ನರಿಯದೆ ಒಳ್ಳೆಯವಳೆಂದರೆ ಸುಶೀಲೆಯ ಚೇಟಿಯೊಬ್ಬಳೇ; ಆದರೆ ಅವಳು ಸ್ತ್ರೀರತ್ನವಲ್ಲ. ಓದುಬರಹವನ್ನರಿಯದವರಲ್ಲಿಯೂ ಸ್ತ್ರೀಜಾತಿಗೆ ಶಿರೋಮಣಿಗಳಾಗಿರಲು ಅರ್ಹರಿರುವರೆಂದು ನಮ್ಮ ಅಭಿಪ್ರಾಯವು. ಇಂತಹರನೇಕರು ಈಗಲೂ ಇರುವರು.

ಬರಿಯ ಯಾವುದೊಂದು ತೆರನಾದ "ವಿದ್ಯಾಭ್ಯಾಸ"ದಿಂದ ಮಾತ್ರ ಯಾರೂ ಒಳ್ಳೆಯವರಾಗಲಿ ಕೆಟ್ಟವರಾಗಲಿ ಆಗುವುದಿಲ್ಲ. ನವೀನ ವಿದ್ಯಾಭ್ಯಾಸವನ್ನು ಪಡೆದ ಸ್ತ್ರೀಯರಲ್ಲೂ ಕೆಟ್ಟವರಿರುವರೆಂದು ಗ್ರಂಥಕರ್ತ್ರಿಯವರು ಅಭಿಪ್ರಾಯಪಟ್ಟಿರುವುದು ಸರಿಯೇ. ಆದರೆ ನವೀನ ವಿದ್ಯಾಭ್ಯಾಸವನ್ನು ಪಡೆದವರಲ್ಲಿ ಎಂತಹರು ಒಳ್ಳೆಯವರೆಂಬುದಕ್ಕೆ ಈ ಪುಸ್ತಕಗಳಲ್ಲಿ ಸೂಚಿತವಾಗಿರುವ ಕೆಲವು ಅಂಶಗಳು ಸರಿಯಲ್ಲವೆಂದು ನಮಗೆ ತೋರುತ್ತದೆ. ಮೂರನೆಯ ಪುಸ್ತಕದಲ್ಲಿ ಹರಿಣಿ ಮೋದಿನಿಗೆ ಕೊಡುವ ಲೆಕ್ಚರಿನಲ್ಲಿ ತಾನು ವಿದ್ಯಾವ್ಯಾಸಂಗಕಾಲದಲ್ಲಿ ತನ್ನ "ಸಹಾಧ್ಯಾಯಿನಿಯರ ಸ್ಥಿತಿ ಹೇಗಿದ್ದುದೆಂಬುದನ್ನೂ, ಅವರ ಸ್ಥಿತಿಯೂ ಪ್ರಕೃತಿಧರ್ಮವೂ ಆವ ಬಗೆಯಲ್ಲಿದ್ದುವೆಂಬುದನ್ನೂ, ಅವಿಚಾರಿಗಳಾದವರ ಸಹವಾಸಬಲವು ಆವಾವ ಹಾನಿಯನ್ನು ಉಂಟುಮಾಡುವುದೆಂಬುದನ್ನೂ" ಪರಿಶೀಲಿಸಿದುದಾಗಿಯೂ, ತಾನು ಬಹಳ ಸರಿಯಾಗಿಲ್ಲದೆ "ದುಸ್ಸಹವಾಸದಲ್ಲಿ ಬಿದ್ದು ವಿಷಯವಾಸನಾವೇಗಗಳಿಗೆ ಗಮನಿಸಿದ್ದ ಪಕ್ಷದಲ್ಲಿ ತನ್ನ ಸಹಾಧ್ಯಾಯಿನಿಯರಂತೆಯೇ ಮದಾಂಧತೆಯಿಂದ ವಿದ್ಯಾಭ್ಯಾಸವೇ ಹೇಯವೆಂದೆನಿಸಿ ವಿದ್ಯಾವತಿಯರೆಲ್ಲರೂ ಅವಿಚಾರಾಂಧರೆಂಬ ಅಪಕೀರ್ತಿಗೂ ಪಕ್ಕಾಗಿ ಸ್ತ್ರೀಜನ್ಮವನ್ನೇ ಹಾಳು

ಮಾಡಿಕೊಳ್ಳುತ್ತಿದ್ದೆನು" ಎಂದೂ ಹೇಳುತ್ತಾಳೆ. ಹರಿಣಿ ಸೇರಿದ್ದ ಪಾಠಶಾಲೆಯಲ್ಲಿ ಅವಳ ಸಹಾಧ್ಯಾಯಿನಿಯರು ಎಷ್ಟು ಕೆಟ್ಟವರಾಗಿದ್ದರೋ ನಾವರಿಯೆವು. ಪ್ರಾಯಶಃ ಅವಿಚಾರಿಗಳಾಗಿ ಧರ್ಮವನ್ನು ಬಿಟ್ಟಿರುವವರು ಎಲ್ಲಿಯೂ ಕೆಲಕೆಲವರು ಇರುವರು. ಅಪವಾದವನ್ನು ಹುಡುಕುವುದರಲ್ಲಿ ಆಸಕ್ತರಾದವರಿಗೆ ವಿದ್ಯಾಭ್ಯಾಸವನ್ನೇ ದೂಷಿಸುವುದಕ್ಕೆ ಇದರಿಂದ ಅವಕಾಶವುಂಟು ಎಂಬುದೂ ನಿಜ. ಆದರೆ ಹರಿಣಿಯಂತಹ ಒಬ್ಬಳು ತಾನು ಆತ್ಮಪ್ರಶಂಸೆಯಲ್ಲಿ ಹೇಳಿಕೊಂಡಿರುವಂತೆ ನಡೆದಮಾತ್ರಕ್ಕೆ ಜನದ ಬಾಯಿ ಮುಚ್ಚುವುದೇ? ಅಲ್ಲದೆ ಹರಿಣಿ ತನ್ನ ಸಹಾಧ್ಯಾಯಿನಿಯರನ್ನೆಲ್ಲಾ ಅಲ್ಲಗಳೆದಿರುವುದು ಸರಿಯಲ್ಲವೆಂದು ನಮಗೆ ತೋರುತ್ತದೆ. ಹರಿಣಿ ಮುಂದಕ್ಕೆ ಯಾರಾಗಿ ಪರಿಣಮಿಸುವಳೋ ನಮಗೆ ತಿಳಿಯದು. ಅವಳು ಶಚೀಕಾಂತನ ಪತ್ನಿಯೇ ಆಗಿದ್ದಲ್ಲಿ ಅವಳು ತನ್ನ ಸ್ವಾಮಿಯಲ್ಲಿ ಸರಿಯಾದ ಪತ್ನಿಯಂತೆ ನಡೆದಿಲ್ಲವೆಂದು ನಾವು ಧಾರಾಳವಾಗಿ ಹೇಳಬಹುದು. ಹೀಗಾದಲ್ಲಿ ಅವಳ ವಿದ್ಯಾವ್ಯಾಸಂಗವೆಲ್ಲವೂ ವ್ಯರ್ಥವೇ ಸರಿ. ಆದರೆ ಜಗತ್ತನ್ನು ಉದ್ಧಾರಮಾಡುವುದಕ್ಕೆಂದು ಅವಳು ಈ ಸಾಹಸಕಾರ್ಯಗಳನ್ನು ಕೈಗೊಂಡಿರಬಹುದು. ಆಗಾಗ ಜಗತ್ತನ್ನು ಉದ್ಧಾರಮಾಡುವುದಕ್ಕೆಂದು ತಾನು ಏನೇನನ್ನೋ ಮಾಡುವುದಾಗಿ ಹೇಳುತ್ತಾಳೆ. ಅದು ಎಂತಹ ಉದ್ಧಾರವೋ ನಮಗೆ ಇನ್ನೂ ತಿಳಿದಿಲ್ಲ. ಅಮರ ಗಂಗಾಧರರ ಕೆಟ್ಟತನವು ಇತರ ಸ್ತ್ರೀಯರನ್ನು ಕೆಡಿಸುವುದರಲ್ಲಿ ಉಪಯೋಗಿಸಲ್ಪಡದೆ ಇರಲಿ ಎಂಬ ಉದ್ದೇಶದಿಂದಲೇ ತಾನು ಅಮರನನ್ನು ಮೂರು-ನಾಲ್ಕು ತಿಂಗಳ ಅವಧಿಯನ್ನು ಕೊಟ್ಟು ಬಾ ಎಂದು ಹೇಳಿದುದಾಗಿ ಹರಿಣಿ ಮೇದಿನಿಗೆ ತಿಳಿಸುತ್ತಾಳೆ. ಇದು ನಮಗೆ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಆಶ್ಚರ್ಯವೇಕೆಂದರೆ—ತನ್ನಲ್ಲಿರುವ ಸತೀತ್ವವು ಇತರರಲ್ಲಿ ಇರಲಾರದೇ ಎಂದು ಹರಿಣಿಗೆ ತೋರದುದಕ್ಕೆ; ದುಷ್ಟನಾದ ಅಮರನಾಥನು ತನ್ನೊಬ್ಬಳಲ್ಲಿಯೇ ಅನುರಕ್ತನಾಗಿರುವನೆಂದು ಅವಳು ಎಣಿಸಿದುದಕ್ಕೆ; ಅಮರನಾಥನೊಬ್ಬನನ್ನು ತಾನು ಕಟ್ಟಿಹಾಕಿದರೂ ಅವನಂತೆ ಎಷ್ಟು ಜನರಿಲ್ಲ ಎಂಬ ಯೋಚನೆ ಹರಿಣಿಗೆ ಬಾರದುದಕ್ಕೆ; ಇದೆಲ್ಲ

ಹಾಗಿರಲಿ, ತನ್ನ ಧರ್ಮವಾವುದೋ ಅದನ್ನು ಆಚರಿಸದೆ ಕಪಟದಲ್ಲಿಯಾದರೂ ನರಾಧಮನಿಗೆ ಸ್ನೇಹವನ್ನು ತೋರಿಸುದಕ್ಕೆ. ವಿದ್ಯೆಯಾವುದೇ ಆಗಲಿ; ಅದನ್ನು ಕಲಿತ ನಮ್ಮ ದೇಶದ ಸ್ತ್ರೀಯರು ಹರಿಣಿಯ. ಈ ಸಾಹಸಪ್ರವರ್ತನವನ್ನು ಅನುಸರಿಸದಿರಲೆಂದು ನಾವು ನಿರಂತರ ಪ್ರಾರ್ಥಿಸುತ್ತೇವೆ. ಹರಿಣಿಗೂ ಬುದ್ಧಿ ಬಂದೀತೆಂದು ನಮ್ಮ ಕೋರಿಕೆ.

ಇದಲ್ಲದೆ ಈ ಪುಸ್ತಕಗಳಲ್ಲಿ ನಾಯಿಕೆಯರಾಗಿರುವ ವಿದ್ಯಾವತಿಯರನೇಕರಲ್ಲಿ ಸ್ವಲ್ಪವೂ ಇಂಗಿತಜ್ಞಾನವಿಲ್ಲದೆ ಲೆಕ್ಚರನ್ನು ಕೊಡುವ ಅಭ್ಯಾಸವು ಪ್ರಬಲವಾಗಿರುವುದನ್ನು ಕಂಡು ನಮಗೆ ಬಹಳ ವಿಷಾದ ಉಂಟಾಗಿದೆ. ಹರಿಣೀ ವೇದಿನಿಯರಲ್ಲಿ ವೇದಿನಿ ಉತ್ತಮಳೆಂದು ನಾವು ಮೊದಲೇ ಹೇಳಿದ್ದೇವೆ; ಹೀಗಿರುವಲ್ಲಿ ಹರಿಣಿ ವೇದಿನಿಗೆ ಲೆಕ್ಚರನ್ನು ಕೊಡುವುದು ಸರಿಯಲ್ಲ. ನಂದಿನಿ ಭೋಜನಸಮಯದಲ್ಲಿ ತನ್ನ ಜ್ಞಾನವನ್ನೆಲ್ಲಾ ಪ್ರಕಾಶಪಡಿಸುದೇಕೆ? ಅಲ್ಲಿ ನೆರೆದಿದ್ದ ಶಾಸ್ತ್ರಿ ಮೊದಲಾದವರು ವಯಸ್ಸಿನಲ್ಲಿ ವೃದ್ಧರೇ ಹೊರತು ಬುದ್ಧಿಯಲ್ಲಿ ಗೃಧ್ರರೆಂದೇ ಇಟ್ಟುಕೊಳ್ಳೋಣ. ಊಟಕ್ಕೆ ಬಂದಿದ್ದವರಿಗೆ ಎಲೆಯಲ್ಲಿ ಮಾತ್ರ ಪಾಯಸವನ್ನು ಬಡಿಸಿ ಅವರ ಮುಖ ಮುರಿಯುವಂತೆ ಬೇಕಾದ ಮಾತನಾಡುವುದೇ? ಇದು ನಂದಿನಿಯಲ್ಲಿ ಸರಿಯಾದ ನಡತೆಯಲ್ಲ. ಅವಳ ಪೋಷಕನಾದ ನಗೇಂದ್ರನಲ್ಲೂ ಸರಿಯಾದ ನಡತೆಯಲ್ಲ. ಅದು ಹೇಗಾದರೂ ಇರಲಿ; ಪುನಃ ನಮ್ಮ ಪ್ರಾರ್ಥನೆಯೊಂದು; ನಂದಿನಿಯಂತೆ ನಮ್ಮ ಹುಡುಗಿಯರು ಇಂಗಿತವರಿಯದೆ ದೊಡ್ಡವರಿಗೂ ಚಿಕ್ಕವರಿಗೂ ಉಪನ್ಯಾಸವನ್ನು ಕೊಡಕೂಡದು; ತಾವು ಸಂಪಾದಿಸಿರುವ ಜ್ಞಾನವನ್ನು ಅನುಷ್ಠಾನದಲ್ಲಿ ತಂದು ಇತರರಿಗೆ ಆದರ್ಶರಾಗಿರಲಿ!

ಸ್ವರ್ಣಕುಮಾರಿ ಒಡವೆಗಳಲ್ಲಿ ಆಸಕ್ತಳಾಗಿರುವುದು ತಪ್ಪೆಂದೂ, ನಂದಿನಿಯಂತೆ ತಪಸ್ವಿನಿಯು ಹಾಗೆಯಿರಬೇಕೆಂದೂ, ಜಮೀನುದಾರನ ಮಗನು ತನ್ನ ಹೆಂಡತಿ ಒಳ್ಳೆಯ ಉಡಿಗೆತೊಡವುಗಳನ್ನು ಧರಿಸಬೇಕೆಂದು ಬಲವಂತಪಡಿಸಿದುದೂ ತಾನು ಗಂಧಪುಷ್ಪಗಳಲ್ಲಿ ಆಸೆಯು

ಳ್ಳವನಾಗಿದ್ದುದೂ ತಪ್ಪೆಂದೂ ಗ್ರಂಥಕರ್ತ್ರಿಯರ ಅಭಿಪ್ರಾಯವೆಂದು ಆರನೆಯ ಪುಸ್ತಕದಲ್ಲಿ ತೋರಿಬರುತ್ತದೆ. ಈ ವಿಷಯವನ್ನು ಅನೇಕರು ಅನುಮೋದಿಸಲಾರರು. ವಿದ್ಯೆಯೇ ಸಿರಿಯೂ ರೂಪೂ ಆದರೂ, ವಿದ್ಯಾವಂತನಾದವನಿಗೆ ಯಾವುವನ್ನು ಸಾಮಾನ್ಯವಾಗಿ ಸಿರಿ, ರೂಪು ಎಂದು ಹೇಳುತ್ತೇವೋ ಅವೂ ಇರಕೂಡದೇಕೆ? ಸ್ತ್ರೀಯರಿಗೆ ಗುಣವೇ ಭೂಷಣವು; ಕೈಯಲ್ಲಿ ತೊಡುವ ಕಡಗವೂ ಭೂಷಣವು. ಉಡುಗೆ ತೊಡವುಗಳಲ್ಲಿ ಇಷ್ಟವಾದುವನ್ನು ಪಡೆಯಲು ಶಕ್ತಿಯುಳ್ಳವರು ತಮಗೆ ಅರ್ಹವಾದುವುಗಳನ್ನು ಧರಿಸುವುದು ತಪ್ಪೇನೂ ಅಲ್ಲ. ಸ್ವರ್ಣಕುಮಾರಿ ಐಶ್ವರ್ಯವಂತನ ಮಗಳು; ಒಡವೆಗಳನ್ನು ಹಾಕಿಕೊಳ್ಳುವುದರಲ್ಲಿ ಸಂತೋಷವುಳ್ಳವಳಾಗಿದ್ದುದು ಅವಳಲ್ಲಿ ತಪ್ಪಲ್ಲ. ಇನ್ನೂ ಮದುವೆ ಇಲ್ಲದೆ ಮುಂದಕ್ಕೆ ಮದುವಣಗಿತ್ತಿಯರಾಗುವ ಸಂದಿಸಿಯೂ ಸ್ವರ್ಣಕುಮಾರಿಯೂ ವಿರಾಗಿಣಿಯಂತೆ ಇರಬೇಕೆ?

ಸ್ತ್ರೀಸಾಮಾನ್ಯದ ಇನ್ನೊಂದು ಕರ್ತವ್ಯವು ವಿರಾಗಿಣೀ ಪುಸ್ತಕದಲ್ಲಿ ನಿರೂಪಿಸಲ್ಪಟ್ಟಿದೆ.—"ತುಂಗ:—ನೀನು ಕೆರೆ, ಕೊಳ, ಕಟ್ಟೆಗಳಿಗೆಂದೂ ಹೋಗುವುದಿಲ್ಲವೇಕೆ? ವಿರಾಗಿಣಿ:—ಹೋಗಬೇಕೆಂದು ನಿರ್ಬಂಧವೇನು? ತುಂಗ:—ಆಹಾ! ಹೋಗಬೇಡವೆ? ವಿರಾ:—ನಾನು ಹೋಗಬಾರದೆನ್ನುವೆನು. ತುಂಗ:—ಏಕೆ? ವಿರಾ:—ಅವು ಅತೃಪ್ತಿಕರವಾದುದರಿಂದ. ತುಂಗ:—ಅತೃಪ್ತಿಯೋ? ಏತರಿಂದ? ವಿರಾ:—ಏತರಿಂದ ತುಂಗೆ? ಆಧುನಿಕತರುಣಮಹಾಜನರ ಅವ್ಯವಸ್ಥಿತವಾದ ವ್ಯಾಪಾರದಿಂದ. ಕೆರೆ, ಕೊಳ, ಕಟ್ಟೆ, ದೇವಾಲಯ ಸಂಸ್ಥೆ ಮೊದಲಾದೆಡೆಗಳಲ್ಲಿ ಎಂತೆಂತಹ ಅವಿಚಾರದ ಕಾರ್ಯಗಳು ಅಡಗಿರುವುವೆಂಬುದನ್ನು ತಿಳಿದು ಹೇಳಬಲ್ಲೆಯಾ? ಹೋಗಲಿ, ಅವುಗಳಲ್ಲಿ ಒಂದೊಂದು ವಿಚಾರಗಳೇ ಆತ್ಮನಾಶಕ್ಕೆ ಸಾಕಾಗಿರುವುವೆಂದರೆ ಗ್ರಹಿಸಲಾರೆಯೋ?"....—ಇತ್ಯಾದಿ ತರ್ಕವು ಆ ಪುಸ್ತಕದಲ್ಲಿ ಸಪ್ತಮಪರಿಚ್ಛೇದವಾಗಿ ಬರೆಯಲ್ಪಟ್ಟಿದೆ. ಈ ಪರಿಚ್ಛೇದವನ್ನು ಓದುವವರು ಪ್ರಾಯಶಃ ವಿಸ್ಮಿತರಾಗುವರೆಂದು ನಾವು ಎಣಿಸುತ್ತೇವೆ. ವಿರಾಗಿಣಿ ಆಧುನಿಕ ತರುಣಮಹಾಜನರ ವಿಷಯದಲ್ಲಿ ಬಹು ದುರಭಿಪ್ರಾಯವನ್ನು ಇಟ್ಟು

ಕೊಂಡಿರುವಂತೆ ತೋರುತ್ತದೆ. ಸಮೂಹದ ವಿಷಯದಲ್ಲಿಯೇ ದುರಭಿಪ್ರಾಯಕ್ಕೆ ಕಾರಣವೇನೋ ಗ್ರಂಥದಿಂದ ತಿಳಿದುಬರುವುದಿಲ್ಲ. ಪಾಠಕರೂ ತಮಗಿರುವ ಪ್ರಪಂಚಜ್ಞಾನದಿಂದ ಈ ಮಾತು ಸರಿಯಾದುದೆಂದು ಹೇಳಲಾಗುವುದಿಲ್ಲ. ಇದು ವಿರಾಗಿಣಿಯ ಅಭಿಪ್ರಾಯ ಮಾತ್ರವೇ ಆಗಿದ್ದರೆ ಇದನ್ನು ಚರ್ಚಿಸಬೇಕಾದ ಆವಶ್ಯಕವಿರಲಿಲ್ಲ. ಆದರೆ ಹರಿಣಿಯೂ ನಂದಿನಿಯೂ ಅಲ್ಲಲ್ಲಿ "ಈಗಿನ ಕಾಲದ ಸೊಕ್ಕಿನ ಮಕ್ಕಳು" ಎಂದು ಪರುಷವಾಕ್ಯವನ್ನು ಪ್ರಯೋಗಿಸಿರುವುದರಿಂದಲೂ, ಈ ಮೂವರೂ ವಿದ್ಯಾವತಿಯರಾಗಿ ಗ್ರಂಥಕರ್ತ್ರಿಯವರಿಂದ ಅನುಮೋದಿತರಾದ ಸತ್ಪಾತ್ರಗಳಾದುದರಿಂದಲೂ ಈ ಅಭಿಪ್ರಾಯವು ಗ್ರಂಥಕರ್ತ್ರಿಯವರಿಗೆ ಸಮರ್ಪಕವಾದುದೆಂದು ತೋರುವುದು. ಆದ್ದರಿಂದ ಇದನ್ನು ಕುರಿತು ಎರಡು ಮಾತನ್ನು ಹೇಳುತ್ತೇವೆ. ತರುಣಮಂಡಲಿ ಎಷ್ಟೇ ದುಷ್ಟವಾದರೂ ತರುಣೀಮಂಡಲಿ ದೇವಾಲಯವನ್ನು ತೊರೆಯಬಹುದೆ? ತರುಣರ ದುರ್ವ್ಯಾಪಾರದಿಂದ ದೇವಾಲಯವು ಕಲುಷಿತವಾಗುವುದಾದರೆ ನೀಚ ಜನರಿಗೆ ಏನೂ ಕಡಮೆ ಇಲ್ಲದ ಈ ಪೃಥ್ವಿಯೇ ಕಲುಷಿತವಲ್ಲವೆ? ನೀಚ ಜನವಿರುವುದೆಂದು ಸಜ್ಜನರು ಪ್ರಪಂಚವನ್ನು ಹೇಗೆ ತೊರೆಯುವುದಿಲ್ಲವೋ ಹಾಗೆಯೇ ದೇವಾಲಯವನ್ನೂ ತೊರೆಯುವುದಿಲ್ಲ. ನಮ್ಮ ಸೌಜನ್ಯಕ್ಕೆ ಇತರರು ಕಾರಣರಲ್ಲ.

ಇದೂ ಅಲ್ಲದೆ "ದೇವಸ್ಥಾನದಲ್ಲಿಯೇ ಇಂತಹ ವಿಷಮಗುಣವು ಅಡಗಿರುವುದೆಂದರೆ ಮತ್ತಿನ ಹರಿಕಥೆ ಪುರಾಣ ಮೊದಲಾದ ಧಾರ್ಮಿಕ ಸಂಘಗಳಲ್ಲಿ ಇನ್ನೆಷ್ಟು ಅಡಗಿರುವುದೋ ಹೇಳಲಾದೀತೆ? ಇದನ್ನು ತಿಳಿದಮೇಲೆ ಇನ್ನಾದರೂ ನಮ್ಮ ಸೋದರಿಯರು ತಮಗೆ ಪತಿಸೇವೆಯೊಂದಲ್ಲದೆ ಮನೋವಿಕಾರಕ್ಕೆ ಕಾರಣವೂ ದೈವಭಕ್ತಿ ಸ್ವಕರ್ತವ್ಯ ನಿಷ್ಠೆಗಳಿಗೆ ಕುಠಾರಸ್ವರೂಪವೂ ಆದ ಇತರ ಗುಷ್ಠಿಂತೆಗಳಿಗೆ ಮನಗೊಡಬಾರದೆಂದು ಸ್ಥಿರಸಂಕಲ್ಪರೂ ಆದರೆ ಆನಂದಕ್ಕೆ ಮೇರೆಯುಂಟೆ?" ಎಂದೂ ವಿರಾಗಿಣಿ ಹೇಳುತ್ತಾಳೆ. ಹರಿಕಥೆ ಪುರಾಣಗಳಿಂದ ಒಳ್ಳೆಯದೇ ಉಂಟಾಗುತ್ತದೆಂದೂ ಅವು ಮನೋವಿಕಾರಕ್ಕೆ ಕಾರಣವಾಗಬೇಕಾದರೆ ಮೊದಲೇ ಮನಸ್ಸಿನಲ್ಲಿ ವಿಷದ ಬೀಜವಿರಬೇಕೆಂದೂ ಅನೇಕರಿಗೆ ತೋರ

ಒಹುದು; ಅದೇ ಸಿಜವಲ್ಲವೇನು? ಯಾವುದೊಂದೇ ಸ್ತ್ರೀಯರಿಗೆ ಸದ್ಗತಿಯ ಮಾರ್ಗವೆಂದು ವಿರಾಗಿಣಿ ಹೇಳುವಳೋ ಆ ಪತಿಸೇವೆ ಎಂಬು ದರಲ್ಲಿ ನಿರತರಾಗುವಂತೆ ಹರಿಕಥೆ ಮಾಡುವುದಲ್ಲವೆ? ಅನಸೂಯೆಯ ಉಪಾಖ್ಯಾನವನ್ನು ಹರಿಕಥೆಯಲ್ಲಿ ಕೇಳಿರುವವರು ಈ ಮಾತನ್ನು ಅನುಮೋದಿಸುವರು. ಚಂದ್ರಹಾಸ, ಪ್ರಹ್ಲಾದ, ತಾಮ್ರಧ್ವಜ ಮೊದ ಲಾದ ದೈವಭಕ್ತರ ಕತೆಗಳನ್ನು ಕೇಳಿದವರು ಹರಿಕಥೆ ದೈವಭಕ್ತಿಗೆ ಕುಠಾರಸ್ವರೂಪವೆಂದು ಹೇಗೆ ಒಪ್ಪುವರು?

ನಮ್ಮ ಪೂರ್ವಿಕರು ನಮ್ಮ ಶ್ರೇಯಸ್ಸಿಗಾಗಿ ನಿರ್ಮಿಸಿದ ಕೆಲವು ಸಾಮಾಜಿಕ ಕರ್ಮಗಳು ಅನೇಕ ಕಾರಣಗಳಿಂದ ಖಿಲವಾಗುತ್ತಿರುವು ವಲ್ಲಾ ಎಂಬ ವ್ಯಸನವು ನಾವು ಈ ವಿಷಯದಲ್ಲಿ ಇಷ್ಟು ಮಾತನ್ನು ಆಡುವುದಕ್ಕೆ ಕಾರಣ. ಹರಿಕಥೆ, ಪುರಾಣ ಇವುಗಳನ್ನು ಅಲ್ಲಿಗೆ ದುಷ್ಟರೂ ಒರುವರಲ್ಲಾ ಎಂದು ಬಿಟ್ಟುಬಿಡುವುದಕ್ಕಿಂತ ಹಿರಿಯರು ಯಾವ ಅಭಿಪ್ರಾಯಗಳಿಂದ ಅವನ್ನು ಏರ್ಪಡಿಸಿದರೋ ಆ ಸದಭಿಪ್ರಾಯ ಗಳನ್ನು ಅವುಗಳಿಂದ ನೆರವೇರಿಸಲು ತಕ್ಕ ಪ್ರಯತ್ನ ಮಾಡುವುದು ಉತ್ತಮಕಾರ್ಯ. ಪಾಶ್ಚಾತ್ಯರ ನಾಗರಿಕತೆಯ ಹೊರಗಣ ಥಳಕಿನಿಂದ ಮುಗ್ಧರಾಗಿರುವ ನಮಗೆ ಇವುಗಳ ಖಿಲತೆ ಎಷ್ಟು ನಷ್ಟಕ್ಕೆ ಮೂಲವಾಗಿ ರುವುದೆಂಬುದು ತೋರುವುದಿಲ್ಲ. ಭಾರತೀಯರ ಪ್ರಾಚೀನ ನಾಗರಿ ಕತೆಯ ಶ್ರೇಷ್ಠತೆಯಲ್ಲಿ ಮುಖ್ಯಾಂಶವಾಗಿದ್ದ ಜನಸಾಮಾನ್ಯದ ಧರ್ಮ ಜ್ಞಾನವೂ ಆ ಧರ್ಮಜ್ಞಾನಕ್ಕೆ ಕಾರಣವಾಗಿದ್ದ ಪುರಾಣ ಇತಿಹಾಸಗಳ ಪ್ರಸಾರವೂ ಈಗ ನಾವು ತೀರ ತೊರೆಯಬೇಕೆಂದಿರುವ ಪುರಾಣ, ಹರಿ ಕಥೆ, ಪ್ರಸಂಗ, ಇವುಗಳಿಂದ ಉಂಟಾದುವೆಂಬುದು ಯೋಚಿಸಿದವರಿಗೆ ತಿಳಿದುಬರುವುದು. ಆ ಧರ್ಮಜ್ಞಾನವು ಹೋದರೆ ಬೇರೆಯ ಜ್ಞಾನ ವೆಲ್ಲಿ? ದೇವಾಲಯದಲ್ಲಿರುವ ವಿಗ್ರಹವು ಶಿಲಾಮೂರ್ತಿಯೆಂದು ಹೇಳುವುದರಿಂದ, ವಿರಾಗಿಣಿಯಂತೆ ಸಂಸ್ಕೃತರಾದ ಮಹನೀಯ ಜನಕ್ಕೆ ತೊಂದರೆ ಇರಲಾರದು. ಸಾಮಾನ್ಯನಿಗಾದರೋ ದೇವಾಲಯವೇ ದಿಕ್ಕು; ಅದರಲ್ಲಿರುವ ಶಿಲಾಮೂರ್ತಿಯೇ ಊರೆ. ಬರಿಯ ದೇವಾಲಯದ ವಿಷಯದಲ್ಲಿ ಮಾತ್ರವೇ ಅಲ್ಲ. ಸಂಸಾರದಲ್ಲೂ ಜ್ಞಾನಿಯಾದವನಿಗೆ

ಶಿಲಾವಿಗ್ರಹವೆಂದು ಮಾತ್ರ ತೋರಿಬರುವ ಅನೇಕ ವಿಗ್ರಹಗಳನ್ನು ಸಾಮಾನ್ಯರಾದ ನಾವು ಪೂಜಿಸುತ್ತೇವೆ. ನಾನು ಯಾರು? ನನ್ನ ದೇನು? ಎಂಬುದು ಶಂಕರಾಚಾರ್ಯರಿಗೆ ಸರಿಯಾದ ಮಾತಾದರೂ ಸಾಮಾನ್ಯನಾದವನು "ನಾನು, ನನ್ನದು" ಎಂಬುದನ್ನು ನಂಬುತ್ತಾನೆ. ಇಂತಹ ಸಾಮಾನ್ಯನಿಗೆ, ಪದಾರ್ಥಗಳ ಸ್ವರೂಪವನ್ನು ತಿಳಿಸುವುದಕ್ಕೋಸ್ಕರ "ನೀನು ನಂಬಿರುವುದು ಶಿಲಾವಿಗ್ರಹ" ಎಂದು ಹೇಳಬೇಕಾದರೂ "ಆ ಶಿಲಾವಿಗ್ರಹವನ್ನು ಬಿಡು" ಎಂದು ಹೇಳುವುದು ತಪ್ಪು. ಆ ಶಿಲಾವಿಗ್ರಹವೇ ಅವನಿಗೆ ಊರೆ.

ಹೀಗೆಯೇ ಇನ್ನೂ ಇವರ ಪುಸ್ತಕಗಳಲ್ಲಿ ಅಲ್ಲಲ್ಲಿ ಸೂಚಿತವಾಗಿ ರುವ ಅನೇಕ ವಿಷಯಗಳನ್ನು ವಿಚಾರಮಾಡಬಹುದು. ನಮ್ಮ ನೀವೆ ಯಲ್ಲಿ ಈಗ ಪ್ರಾಚೀನ ನಾಗರಿಕತೆಯೂ ನವೀನ ನಾಗರಿಕತೆಯೂ ಸಂಧಿಸಿ ಲೆಕ್ಕವಿಲ್ಲದಷ್ಟು ಸಾಮಾಜಿಕ ಸಮಸ್ಯೆಗಳು ಹುಟ್ಟಿವೆ. ಆದರೆ ಅವನ್ನು ಪೂರ್ತಿಮಾಡಲು ಸಾಮಾಜಿಕ ಕಾಳಿದಾಸರಿಲ್ಲ. ಸಿಕ್ಕಿದವರೆಲ್ಲಾ ಒಂದೊಂದು ಒಗೆಯಾಗಿ ಪೂರಣಮಾಡುವೆವೆನ್ನುವರು. ಪೂರಣಗಳಲ್ಲಿ ಒಬ್ಬರು ಹೇಳಿದುದು ಇನ್ನೊಬ್ಬರಿಗೆ ಸಮಾಧಾನವಿಲ್ಲ. ಬಹುಕಾಲ ಆಲೋಚಿಸಿ ಬಹುವಿಧವಾದ ಗ್ರಂಥಗಳನ್ನು ಓದಿ, ಧರ್ಮಾಧರ್ಮ ಕರ್ತವ್ಯಾಕರ್ತವ್ಯಗಳನ್ನು ದೃಢಪಡಿಸಿ ತಿಳಿಸಲು ಅನೇಕ ಮಹನೀಯರು ತಮಗೆ ತಿಳಿದುದನ್ನು ಮಹಾಗ್ರಂಥಗಳಲ್ಲಿ ಬರೆದಿಡಲು ಯತ್ನಿಸಿದ್ದಾರೆ. ಆ ಗ್ರಂಥಗಳಲ್ಲೂ ನಿಜವಾಗಿ ಪೂರ್ಣವಾಗದಂತಹ ಸಮಸ್ಯೆಗಳು ಅವಕಾಶ ಸಮಯದಲ್ಲಿ ಓದುವುದಕ್ಕೆಂದು ಬರೆದಿರುವ ಕತೆಗಳಲ್ಲಿ ಪೂರ್ಣ ವಾಗುವುವೆಂದು ನಿರೀಕ್ಷಿಸುವುದು ಸರಿಯಲ್ಲ. ಆದರೆ ಸೂಚಿತವಾದ ಅಂಶವು ತಕ್ಕಮಟ್ಟಿಗೆ ಜನರ ಹಿತಾಹಿತದ ಪರ್ಯಾಲೋಚನೆಯಿಂದ ಸೂಚಿಸಲ್ಪಟ್ಟಿದೆ ಎಂಬ ಭಾವವಾದರೂ ಉಂಟಾಗಬೇಕು. ಈ ಗ್ರಂಥ ಕರ್ತ್ರಿಯವರ ಅಭಿಪ್ರಾಯಗಳನ್ನು ಪರೀಕ್ಷಿಸಿದುದರಲ್ಲಿ ಬಹುವೇಳೆ ಈ ಭಾವವು ತೋರಿಬಂದಿಲ್ಲ.

ಪುಸ್ತಕಗಳ ಭಾಷೆಯನ್ನು ಕುರಿತು ಒಂದೆರಡು ಮಾತನ್ನು ಹೇಳು ವುದು ಆವಶ್ಯಕ. ಗ್ರಂಥಕರ್ತ್ರಿಯವರು ಭಾಷೆಯಲ್ಲಿ ಒಳ್ಳೆಯ

ಪರಿಚಯವುಳ್ಳವರೆಂದು ಈ ಪುಸ್ತಕಗಳನ್ನು ಓದಿದವರಿಗೆಲ್ಲಾ ವ್ಯಕ್ತಪಡುವುದು. ಆದರೆ ಹೆಚ್ಚಾಗಿ ತಿಳಿದವರು ಎಲ್ಲರಿಗೂ ಹೆಚ್ಚಾಗಿ ತಿಳಿದಿರುವುದೆಂದು ಎಣಿಸುವಂತೆ, ಇವರೂ ಅಲ್ಲಲ್ಲಿ ಬಹಳ ಕಠಿನಪದಗಳನ್ನು ಉಪಯೋಗಿಸಿ ಭಾಷೆಯನ್ನು ಕ್ಲಿಷ್ಟವಾಗಿ ಮಾಡಿದ್ದಾರೆ. ಕತೆಗಳಲ್ಲಿ ಭಾಷೆ ಹೇಗಿರಬೇಕೆಂದು ಇಲ್ಲಿ ಒಂದು ಉಪನ್ಯಾಸವನ್ನು ಬರೆಯುವುದು ನಮ್ಮ ಅಭಿಪ್ರಾಯವಲ್ಲ. ಒಂದು ಉತ್ತಮ ಗ್ರಂಥವನ್ನು ಉತ್ತಮ ಶೈಲಿಗೆ ಆದರ್ಶವೆಂದು ತೋರಿಸಿದರೆ ಸಾಕು. ಕೆಂಪುನಾರಾಯಣನ ಮುದ್ರಾಮಂಜೂಷದ ಶೈಲಿಯನ್ನು ಹೋಲುವಂತೆ ಬರೆದರೆ ಕತೆಗಳು ಓದುವುದಕ್ಕೆ ಬಹಳ ಚೆನ್ನಾಗಿರುವುವೆಂದು ನಮಗೆ ತೋರುತ್ತದೆ. ಇವರಿಂದಲೇ ರಚಿತವಾಗಿರುವ ದಕ್ಷಕನ್ಯಾ ಪುಸ್ತಕವನ್ನು ವಿದ್ಯುಲ್ಲತಾ ಪುಸ್ತಕದೊಡನೆ ಹೋಲಿಸಿ ನೋಡಿದರೆ ವಿದ್ಯುಲ್ಲತಾ ಪುಸ್ತಕದ ಶೈಲಿ ಅಷ್ಟೇನೂ ಸಾಧುವಲ್ಲವೆಂದು ತೋರುವುದು. ಕನ್ನಡದಲ್ಲಿ ಪುಸ್ತಕಗಳನ್ನು ಬರೆಯುವವರು ಸಂಸ್ಕೃತವನ್ನೂ ಬಲ್ಲವರಾದರೆ ರೂಢವಾದ ಅಥವಾ ರೂಢವಲ್ಲದ ಸಂಸ್ಕೃತ ಪದಗಳನ್ನು ವಿಶೇಷವಾಗಿ ಉಪಯೋಗಿಸಿ ಶೈಲಿಯನ್ನು ತೊಡಕು ತೊಡಕಾಗಿ ಮಾಡುವರು. ಪದಗಳು ವಾಡಿಕೆಯಲ್ಲಿರುವುವಾದರೆ ತೊಂದರೆಯಿಲ್ಲ ; ಭಾಷೆ ಯಾವ ಪದಗಳನ್ನು ಮೊದಲೇ ಸ್ವೀಕಾರಮಾಡಿರುವುದೋ ಆ ಪದಗಳು ಭಾಷೆಗೆ ಸೇರಿದುವು. ವಾಡಿಕೆಯಲ್ಲಿಲ್ಲದ ಪದಗಳನ್ನು ಉಪಯೋಗಿಸಿದರೆ ಬರೆವಣಿಗೆ ಅನೇಕರಿಗೆ ಅರ್ಥವಾಗುವುದಿಲ್ಲ; ಕೆಲವರಿಗೆ ಅರ್ಥವಾದರೂ ಚೆನ್ನಾಗಿದೆಯೆಂದು ತೋರುವುದಿಲ್ಲ. ದಕ್ಷಕನ್ಯಾ ಪುಸ್ತಕದಲ್ಲಿ ಸರಿಯಾದ ಶೈಲಿಯನ್ನು ಉಪಯೋಗಿಸಿದ್ದಾರೆ ಎಂದು ಹೇಳಿದೆಯಷ್ಟೆ. ಇವರು ಇನ್ನೂ ಬರೆಯಬೇಕೆಂದು ಉದ್ದೇಶಮಾಡಿರುವ ಪುಸ್ತಕಗಳಲ್ಲಿ ಇದೇ ಶೈಲಿಯನ್ನು ಉಪಯೋಗಿಸಬಹುದೆಂದು ನಾವು ಸೂಚಿಸಲು ಅಪೇಕ್ಷಿಸುತ್ತೇವೆ.

ಶೈಲಿಯ ಸ್ವಭಾವವಾದ ದೋಷವಲ್ಲದಿದ್ದರೂ ಅಲ್ಲಲ್ಲಿ ತಲೆದೋರುವ ಒಂದೆರಡು ಪದಗಳನ್ನು ಕುರಿತು ಇಲ್ಲಿ ಎರಡು ಮಾತನ್ನು ಹೇಳುವೆವು. ವಿದ್ಯುಲ್ಲತಾ ಪುಸ್ತಕದಲ್ಲಿ ಪಾತ್ರಗಳೆಲ್ಲರೂ ಅಡಿಗಡಿಗೆ "ಕಿರುನಗೆ

ಯಿಂದ ತಲೆದೂಗಿ'' ಮಾತನಾಡುತ್ತಾರೆ. ಒಂದೊಂದು ಕಡೆ, ಕಿರುನಗೆ ಯನ್ನು ಕೆಲವರು, ತಲೆದೂಗುವುದನ್ನು ಕೆಲವರು ಹಂಚಿಕೊಳ್ಳುತ್ತಾರೆ. ''ಕಿರುನಗೆಯಿಂದ ತಲೆದೂಗಿ'' ಎಂಬುದರ ಪ್ರಯೋಜನವೇನೊ ಕಾಣ ಬರುವುದಿಲ್ಲ. ಒಂದೆರಡು ಬಾರಿ ಮಾತ್ರ ಉಪಯೋಗಿಸಿದ್ದರೆ ನಾಟಕದಲ್ಲಿ ಚರ್ಯೆಯನ್ನು ನಿರೂಪಿಸುವುದಕ್ಕೆ ಹೇಗೋ ಹಾಗೆ ಉಪಯೋಗಿಸಿದೆ ಎಂದಾದರೂ ತಿಳಿಯಬಹುದಾಗಿತ್ತು. ಇಲ್ಲಿ ಸಿಕ್ಕಿಸಿಕ್ಕಿದವರು ಬೇಕು ಬೇಕಾದಾಗಲೆಲ್ಲಾ ''ಕಿರುನಗೆಯಿಂದ ತಲೆದೂಗು''ವುದರಿಂದ ಹಾಗೆ ತಿಳಿಯಲು ಸಾಧ್ಯವಿಲ್ಲ. ಇನ್ನೊಂದು ವಿಷಯ. ಇಂಗ್ಲಿಷ್ ಭಾಷೆಯಿಂದ ನಮ್ಮ ಭಾಷೆಗೆ ವಾಕ್ಯಗಳಲ್ಲಿ ಉಪಯೋಗಿಸುವ ಪೂರ್ಣವಿರಾಮವೇ ಮೊದಲಾದ ಸಂಜ್ಞೆಗಳು ಈಗ ಬಂದಿವೆ. ಹೊಸತಾಗಿ ಬಂದಿರುವುವಲ್ಲಾ ಎಂದು ನಮ್ಮ ಪುಸ್ತಕಕಾರರು ಇವನ್ನು ವಿಶೇಷ ಆದರದಿಂದ ಕಾಣು ತ್ತಿದ್ದಾರೆ. ಈ ಪುಸ್ತಕಗಳಲ್ಲಿ ಈ ಸಂಜ್ಞೆಗಳು ಬಹಳ ಹುಲುಸಾಗಿವೆ. ಆಶ್ಚರ್ಯಸೂಚಕಚಿಹ್ನೆ ಎಲ್ಲೆಲ್ಲಿಯೂ ತಾನೆ: ಒಂದೊಂದು, ಎರಡೆರಡು, ಮೂರುಮೂರು, ಒಂದು, ಎರಡು, ಮೂರು. ಆಮೇಲೆ ಹೆಂಗಸರು ಒಬ್ಬರನ್ನೊಬ್ಬರು ಬೆನ್ನುತಟ್ಟಿ ''ಭಲೆ ಭಲೆ'' ಎಂದು ಮಾತನಾಡುವು ದಾಗಿ ಅಲ್ಲಲ್ಲಿದೆ. ಇದು ನಮಗೆ ಸರಿಯೆಂದು ತೋರಲಿಲ್ಲ. ''ಆತ್ಮ ರಾಜ, ಪತಿರಾಜ'' ಎಂಬ ಪದಗಳು ಓದುವವರಿಗೆ ಒಗ್ಗುವುದಿಲ್ಲ. ಪತ್ನಿ ಪತಿಯನ್ನು ಸಂಬೋಧಿಸುವಲ್ಲಿ ''ಹೇ ಸ್ವಾಮಿನ್'' ಎಂದು ಹೇಳಿದಂತೆ ಕೆಲವು ಕಡೆ ಇದೆ. ''ಹೇ ಸ್ವಾಮಿನ್'' ಎನ್ನುವುದು ಸರಿ ಯಾದ ಮಾತೇ ಆದರೂ ಸಾಮಾನ್ಯವಾಗಿ ಉಪಯೋಗದಲ್ಲಿರುವ ಮಾತಲ್ಲದುದರಿಂದ ಹೇಗೆ ಹೇಗೋ ಇದೆ. ಒಬ್ಬರ ಸಂಗಡ ಒಬ್ಬರು ಮಾತನಾಡುವಾಗ ವಾಡಿಕೆಯಲ್ಲಿಲ್ಲದ ವಾಕ್ಯರೂಪಗಳನ್ನು ಉಪಯೋಗಿ ಸುವುದೂ ಉಂಟು. ''ಹೀಗೆಂದು ದೃಢವಾಗಿ ನಂಬು''—''ಮಿದುಳೇ ಹಾರಿಹೋಗುವಂತಿದೆ''—ಇವು ಇದಕ್ಕೆ ಉದಾಹರಣೆಗಳು. ವಿದ್ಯುಲ್ಲತೆ ಯಲ್ಲಿ ಅಲ್ಲಲ್ಲಿರುವ ಪತ್ರಗಳೂ ನಭೆಯ ಗಂಡನು ಅವಳಿಗೆ ಬರೆದುದಾಗಿ ಕತೆಯಲ್ಲಿರುವ ಪತ್ರವೂ ಬಹು ವಿಚಿತ್ರಪತ್ರಗಳು. ಮೊತ್ತದಲ್ಲಿ ಶೈಲಿಯ ವಿಚಾರವಾಗಿ ನಾವು ಹೇಳುವುದು ಒಂದು ಮಾತು. ಭಾಷೆಯನ್ನು

ಗ್ರಾಂಥಿಕ ಭಾಷೆಯನ್ನಾಗಿ ಮಾಡಲು ಪ್ರಯತ್ನಪಟ್ಟು ಕರ್ಕೋಟಕನಿಂದ ಕಡಿಯಲ್ಪಟ್ಟ ನಳನಂತೆ ಗಂಟುಗಂಟಾಗಿ ಮಾಡದೆ ಸಾಮಾನ್ಯ ಭಾಷೆಯ ಗ್ರಾಮ್ಯಾಂಶವನ್ನು ಮಾತ್ರ ಬಿಟ್ಟು ಗೌರವಕ್ಕೆ ಎಷ್ಟೋ ಅಷ್ಟು ಅದನ್ನು ಬಲಪಡಿಸಿ ಸರಳವಾಗಿ ಬರೆದರೆ ಪುಸ್ತಕವು ಕೇಳುವುದಕ್ಕೂ ಓದುವುದಕ್ಕೂ ಇಂಪಾಗಿರುವುದು; ಶೈಲಿ ಪೂರ್ಣರ ಮಹನೀಯರ ಶೈಲಿಯನ್ನು ಅನುಸರಿಸುವುದು.

ಈ ಉಪನ್ಯಾಸವು ಈಗಲೇ ಬಹಳ ವಿಸ್ತಾರವಾಗಿದೆ. ಇನ್ನೂ ಹೇಳಬಹುದಾದ ಅಂಶಗಳನ್ನು ಹೇಳಲು ಅವಕಾಶವಿಲ್ಲ. ಆದರೆ ನಾವು ಹೇಳಿರುವಷ್ಟರಿಂದ ನಮ್ಮ ಆಶಯವು ಗ್ರಂಥಕರ್ತ್ರಿಯವರಿಗೂ ಇದನ್ನು ಓದುವವರಿಗೂ ತಿಳಿದರೆ ಸಾಕು. ದೇಶಹಿತೈಷಿತೆಯಿಂದ ಪುಸ್ತಕರಚನೆಯಲ್ಲಿ ಉದ್ಯುಕ್ತರಾಗಿರುವ ಇವರು ತಮ್ಮ ಪುಸ್ತಕಗಳನ್ನು ಮತ್ತಷ್ಟು ಚೆನ್ನಾಗಿ ಬರೆದು ಓದುವವರಿಗೆ ಮತ್ತಷ್ಟು ಒಳ್ಳೆಯದನ್ನು ಮಾಡಲಿ ಎಂಬುದು ಆ ನಮ್ಮ ಆಶಯ. ಇಲ್ಲಿ ಗುಣವನ್ನು ಹೇಳದೆ ದೋಷವನ್ನು ವಿಸ್ತಾರವಾಗಿ ಹೇಳಿರುವುದನ್ನು ಗುಣವಿಲ್ಲದುದಕ್ಕಾಗಿ ಎಂದು ಭಾವಿಸಬಾರದು. ಗ್ರಂಥಕರ್ತ್ರಿಯವರ ಅನುಭವದಲ್ಲಿರುವ ಸಂಗತಿಗಳು ಚೆನ್ನಾಗಿಯೇ ಬರೆಯಲ್ಪಟ್ಟಿವೆ. ಶರಾವತಿಯ ದುಸ್ಸ್ವಭಾವ, ತಿಳಿವಿಲ್ಲದ ಹೆಂಗಸರ ಪಾರ್ಲಿಮೆಂಟಿನಲ್ಲಿ ನಡೆವ ಮಾತು, ಮನೆಯಲ್ಲಿ ಗಂಡಸರಿಗೆ ಕಿರುಕುಳವನ್ನುಂಟುಮಾಡುವ ಹೆಂಗಸರ ನಡೆನುಡಿ, ಮಠಾಧಿಪತಿಗಳ ಪ್ರಕೃತಕಾಲದ ಸ್ಥಿತಿ,—ಇವುಗಳನ್ನು ಇವರು ಬಹು ಕೌಶಲ್ಯದಿಂದ ತಮ್ಮ ಪುಸ್ತಕಗಳಲ್ಲಿ ವರ್ಣನೆಮಾಡಿದ್ದಾರೆ. ಯಾವುದು ಸರಿಯಾಗಿಲ್ಲವೋ ಅದು ಅನುಭವವಿಲ್ಲದುದರಿಂದ ಹಾಗೆ ಸರಿಯಾಗಿಲ್ಲವೆಂದು ನಾವು ಮೊದಲೇ ಸೂಚನೆಮಾಡಿದ್ದೇವೆ. ಗ್ರಂಥಕರ್ತ್ರಿಯವರು ತಾವು ಸರಿಯಾಗಿ ಬರೆಯಬಲ್ಲ ತಮ್ಮ ಅನುಭವದಲ್ಲಿ ಬಂದಿರುವ ವಿಷಯಗಳನ್ನು ಮಾತ್ರ ಕುರಿತು ತಮ್ಮ ಪುಸ್ತಕಗಳನ್ನು ಬರೆಯುವುದಾದರೆ ಅವರ ಪುಸ್ತಕಗಳು ಈಗ ಇರುವುದಕ್ಕೂ ಅತಿಶಯವಾಗಿ ಉಪಯೋಗವುಳ್ಳವಾಗುವುವು. ಹೀಗೆ ಬರೆಯುವುದು ಸರಿ, ಹಾಗೆ ಬರೆಯುವುದು ಸರಿಯಲ್ಲ ಎಂದು ಶಾಸನಮಾಡುವುದು ಯಾರಿಂದಲೂ ಯಾರ ವಿಷಯ

ದಲ್ಲೂ ಸಲ್ಲದು. ಪುಸ್ತಕಗಳನ್ನು ವಿಮರ್ಶಿಸುವವರು ಪುಸ್ತಕಗಳನ್ನು ಬರೆಯುವವರಿಗೆ ಹೇಳುವುದು ಒಂದೇ ಮಾತು ಎಂದು ಲೆಸ್‌ಲೀ-ಸ್ಟೀವನ್ ಎಂಬ ವಿಮರ್ಶಕ ಶ್ರೇಷ್ಠನು ಹೇಳಿದ್ದಾನೆ. ಪ್ರಾಯಶಃ ಎಲ್ಲ ವಿಮರ್ಶಕರೂ ಆಯಾ ಪುಸ್ತಕಕಾರರಿಗೆ ಅದೇ ಮಾತನ್ನು ಹೇಳಬೇಕು: "ನಿಮ್ಮ ಬರೆವಣಿಗೆ ನಿಮ್ಮನ್ನನುಸರಿಸಲಿ." ನಾವು ಈ ಕತೆಗಳನ್ನು ಬರೆದಿರುವ ಗ್ರಂಥಕರ್ತ್ರಿಯರಿಗೆ ಹೇಳುವುದೂ ಅದೇ ಮಾತು. ಈ ಮಾತು ಗ್ರಂಥಕರ್ತ್ರಿಯವರಿಗೆ ಉಚಿತವಾಗಿ ತೋರಿ ಇದುವರೆಗೆ ಬರೆದಿರುವ ಪುಸ್ತಕಗಳಿಗೂ ಉತ್ತಮವಾದ ಪುಸ್ತಕಗಳನ್ನು ಅವರು ರಚಿಸಿ ತಾವು ಕೈಗೊಂಡಿರುವ ದೇಶಸೇವೆಯಲ್ಲೂ ಮಾತೃಭಾಷಾ ಸೇವೆಯಲ್ಲೂ ಕೃತಕೃತ್ಯರಾಗಲೆಂದು ನಾವು ಮನಃಪೂರ್ವಕವಾಗಿ ಹಾರೈಸುತ್ತೇವೆ.

# ಕನ್ನಡ ನಾಡಿನ ಲಾವಣಿ ಸಾಂಗತ್ಯಗಳು.

ಈಗ ಹದಿನಾಲ್ಕು ವರ್ಷಗಳ ಹಿಂದೆ ನಾನು ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಒಂದು ಬೇಸಿಗೆಯ ರಜ ಬಂದಾಗ ನಮ್ಮ ಊರಿಗೆ ಹೋಗಿದ್ದ ಸಂದರ್ಭದಲ್ಲಿ ಒಂದುದಿನ ನಾನೂ ನನ್ನ ಸ್ನೇಹಿತರು ಕೆಲವರೂ ಊರ ಕೊಳದ ಬಳಿ ಸ್ನಾನಕ್ಕೆಂದು ಹೋಗಿ ಕುಳಿತಿರಲು, ಆ ದಾರಿಯಲ್ಲಿ ಗಂಡಸೊಬ್ಬನೂ ಹೆಂಗಸೊಬ್ಬಳೂ ಇಬ್ಬರು ಜೋಗಿಗಳು ಬಂದರು. ಹೆಂಗಸು ಒಂದು ಜೋಳಿಗೆಯನ್ನು ಹೆಗಲಮೇಲೆ ತೂಗು ಹಾಕಿಕೊಂಡಿದ್ದಳು; ಗಂಡಸು ಒಂದು ಜೇನೀಬುರುಡೆಯನ್ನು ಹಿಡಿದುಕೊಂಡಿದ್ದನು. ಇಂಗ್ಲಿಷರ 'ಬ್ಯಾಲಡ್' ಗಳನ್ನು ಓದಿ ಅವರ ಸಾಹಿತ್ಯದಲ್ಲಿ ಅದಕ್ಕೆ ಇರುವ ಪ್ರಾಶಸ್ತ್ಯವನ್ನು ಆಂಗ್ಲೇಯ ಸಾಹಿತ್ಯ ಚರಿತ್ರೆಯಲ್ಲಿ ಆಗ ತಾನೆ ಓದಿ ತಿಳಿದಿದ್ದುದರಿಂದ, ನನಗೆ ನಮ್ಮ ಸೀಮೆಯ ಗೀತೆಗಳನ್ನು ಸಂಗ್ರಹಿಸಬೇಕೆಂದು ಒಂದು ಆಸೆ ಆ ಕಾಲದಲ್ಲಿ ತಲೆದೋರಿತ್ತು. ನವೀನವಾದ ಆ ಉತ್ಸಾಹದಿಂದ ನಾನು ಜೋಗಿಯನ್ನು ಕರೆದು ಹಾಡುತ್ತೀಯಾ ಎಂದು ಕೇಳಿದೆನು. ಅವನು ಹಾಡುವವನಲ್ಲ; ಆ ಹೆಂಗಸು ಹಾಡುವವಳು. ಕೊನೆಗೆ ಅವರು ಕುಳಿತು, ಇವನು ಜೇನೀ ಬುರುಡೆಯನ್ನು ನುಡಿಸಲು, ಅವಳು ಅದರ ಜೊತೆಗೆ ಹಾಡಿದಳು. ಜೇನೀ ಬುರುಡೆಯ ಸ್ವರದಲ್ಲಿ ಹಾಡಿನ ಮಾತು ತಿಳಿಯಲಿಲ್ಲ. ಬುರುಡೆಯನ್ನು ನುಡಿಸದೆ ಬರಿಯ ಹಾಡನ್ನು ಹೇಳೆಂದು ಕೇಳಿದೆನು. ಹೆಂಗಸು ಕೊಂಚಕ್ಕೆ ಒಪ್ಪಲಿಲ್ಲ; ಬಹಳ ಒತ್ತಾಯಮಾಡಿ ಕೇಳಿದಮೇಲೆ ಬಹು ಅಸಮ್ಮತಿಯಿಂದ ಒಂದು ನುಡಿಯನ್ನು ನುಡಿದಳು. ಅದರ ಮಾತು ಇದು:—

ಗುಡ್ಡವಿಹಾದ ದಾಸಿಲ್ಲೂ
ಗುಡ್ಯೋಡು ದಾನಿ ಮಗುಡೂ
ಗುಡ್ಯೋನಿ ಕಾನಕಾ
ಗುಡ್ಡಾಮು ದಾಟುದಾಮು
ರಾರಾ ಮುದ್ದುಲ ಗುಮ್ಮಾ

ರಾಗ ಒಂದು ದೇಶೀ ಮಟ್ಟು. "ಬ್ಯಾಟರಾಯ ಸಾಮಿ ದೇವುಡಾ" ಎಂಬ ಹಾಡಿನ ರಾಗದಂತೆಯೇ ಇದೆ. ತಾಳ ಆದಿತಾಳ; ಎಂದರೆ, ನಾಲ್ಕಕ್ಷರಕ್ಕೆ ಒಂದು ಪೆಟ್ಟು ಬಿದ್ದರೆ ಸರಿಹೋಗುವುದು. ಹೇಳುವು ದರಲ್ಲಿ ಒತ್ತಕ್ಷರಗಳನ್ನೂ ದೀರ್ಘಾಕ್ಷರಗಳನ್ನೂ ಸವರಿಸಿಕೊಂಡು ತಾಳಕ್ಕೆ ಸರಿಯಾಗುವಂತೆ ಹೇಳಬೇಕು. ಮೂರು ನಾಲ್ಕನೆಯ ಪಾದ ಗಳು ಎರಡೂ ಸೇರಿ ಒಂದು ಪಾದಕ್ಕೆ ಸಮವಾಗುವಂತೆ ಹೇಳಬೇಕು. ಹಾಡಿನ ಮಾತು ತೆಲುಗು ಎಂಬುದನ್ನು ಹೇಳಬೇಕಾಗಿಲ್ಲ. ಪ್ರಾಯಶಃ ಯಾರಿಗಾದರೂ ಮಾತು ಅರ್ಥವಾಗಬಹುದು. ಗುಡ್ಡದ ಮೇಲೆ ಅವಳ ಮನೆ; ಕುರುಡನು ಅವಳ ಗಂಡ; ಕುರುಡನನ್ನು ಕಾಣದ ಹಾಗೆ ಗುಡ್ಡವನ್ನ ದಾಟೋಣ, ಬಾರೊ ಮುದ್ದಿನ ಗುಮ್ಮಾ. ಕುರು ಡನ ಹೆಂಡತಿ ಮುದ್ದುಲ ಗುಮ್ಮನನ್ನು ಹೋಗೋಣ ಬಾ ಎಂದು ಕರೆಯುತ್ತಾಳೆ. ವಿಷಯ ಇಂಥಾದ್ದಾದ್ದರಿಂದಲೇ ಆ ಹೆಂಗಸು ಒರಿಯ ಮಾತನ್ನೇ ಹಾಡುವುದಕ್ಕೆ ಹಿಂದೆಗೆದಳು. ಇಂಥ ಹಾಡು ನಮಗೆ ಹೊಸದಾದರೂ ಜನರಲ್ಲಿ ವಾಡಿಕೆಯಾಗಿ ತಿಳಿದಿದೆ ಎಂದು ತೋರುತ್ತದೆ. ಈಚೆಗೆ ಇಂಥದೇ ಬೇರೆ ನುಡಿಯನ್ನು ಇನ್ನೊಂದು ಕಡೆ ನಾನು ಕೇಳಿದೆನು :—

ಕಟ್ಟೆ ಪಿನಾದ ಕದಿರಿಗಾಡೂ  
ಕದಲಲೇಡು ಮೆದಲಲೇಡೂ  
ಕದಿರಿಗಾನಿ ಕಾನಕಾ  
ಕನಮು ಕಿಂದ ಪೋದಾಮು  
ರಾರಾ ಮುದ್ದುಲ ಗುಮ್ಮಾ

ಇದು ಕದಿರಿಗನ ಹೆಂಡತಿ ಮುದ್ದುಲ ಗುಮ್ಮನಿಗೆ ಹೇಳುವ ಮಾತು. ಈ ಗೀತೆಗಳಲ್ಲೆಲ್ಲ ಮುದ್ದುಲ ಗುಮ್ಮನು ಗೋಪೀ ಸ್ತ್ರೀಯರಲ್ಲಿ ಕೃಷ್ಣ ನಂತೆ ಸರ್ವವ್ಯಾಪಿಯಾಗಿದ್ದಾನೆ. ಹಾಡಿನ ಮಾತು ಬಹಳ ಸುಲಭ. ಮಾತಿನ ಜೋಡಣೆಯಲ್ಲಿ ಒಂದು ಮಾದರಿಯ ಯತಿ ಇದೆ; ರಾಗವೂ ಒಂದು ಮಾದರಿಯ ಸರಳತೆಯಿಂದ ವಿಲಕ್ಷಣವಾಗಿದೆ. ಇಂತಹ ನುಡಿ

ಗಳನ್ನು ಆ ಜೋಗಿಯೂ ಅವನ ಜೊತೆಯ ಹೆಂಗಸೂ ಹತ್ತಾರನ್ನು ಹೇಳಿದರು.

೨

ಇಂಥ ಲಾವಣಿಗಳು ಕನ್ನಡದಲ್ಲಿಯೂ ಅನೇಕವಾಗಿ ಇವೆ. ಮೈಸೂರಿನ ಕಡೆ ರಸ್ತೆಗಳಲ್ಲಿ ಸಾಲು ಸಾಲಾಗಿ ಗಾಡಿಗಳನ್ನು ಹೊಡೆದು ಕೊಂಡು ಹೋಗುವ ಜನರು ರಾತ್ರಿಯನ್ನು ಸುಲಭವಾಗಿ ಕಳೆಯು ವುದಕ್ಕೂ ಎಚ್ಚರಿಕೆಯಾಗಿರುವುದಕ್ಕೂ ಸಹಾಯವಾಗಿ ಲಾವಣಿ ಗಳನ್ನು ಹೇಳಿಕೊಂಡು ಹೋಗುವುದುಂಟು. ರಾತ್ರಿಯ ಪ್ರಯಾಣ ಗಳಲ್ಲಿ, ಇವರಲ್ಲಿ ಒಂದು ಗಾಡಿಯವನು ಮೊದಲರ್ಧವನ್ನು ಹೇಳುವುದು ಇನ್ನೊಂದು ಗಾಡಿಯವನು ಉಳಿದರ್ಧವನ್ನು ಹೇಳುವುದು, ಹೀಗೆ ಸವಾಲ್ ಜವಾಬಿನಲ್ಲಿ ಇವರು ಹಾಡುವ ಧ್ವನಿಯನ್ನು ಮೈಸೂರ ಕಡೆಯ ಜನರು ಅನೇಕರು ಕೇಳಿರಬೇಕು. ಇವುಗಳಲ್ಲಿ ಬಹಳವೆಲ್ಲ ಶ್ರೀರಂಗಪಟ್ಟಣ ಗಂಜಾಂ ಊರುಗಳ ಉಚ್ಛ್ರಾಯ ಸ್ಥಿತಿಯ ದಿನದ ಚರಿತ್ರೆಯನ್ನು ಕುರಿತವು. ಇದರಲ್ಲಿ ಒಂದರ ಮೊದಲೆರಡು ಮಾತನ್ನು ಮಾತ್ರ ನನ್ನ ಸ್ನೇಹಿತರೊಬ್ಬರಿಂದ ಕೇಳಿದ್ದನ್ನು ಇಲ್ಲಿ ಬರೆದಿದೆ:—

ಷಹರುಗಂಜಾಂ ಪೇಟೆಯೊಳಗೆ ಹೋದರು ಮುಸಾಫಿರರೂ<br>
ನಿಮ್ಮ ಬೊಜ್ಜಿನ ಹೊಟ್ಟೆಯಮೇಲೆ......ಮುಸಾಫಿರರೂ

ಹೊಟ್ಟೆಯ ಮೇಲೆ ಹೊಡೆದರು ಎಂತಲೋ ಬಡಿದರು ಎಂತಲೋ ಮಾತು. ಲಾವಣಿಯ ಪದ್ಧತಿಯನ್ನು ನೋಡಿರಿ. ಗಂಜಾಂ ಪೇಟೆಯ ಷಹರಿನಲ್ಲಿ ಮುಸಾಫಿರರು ಹೊರಟಿದ್ದಾರೆ. ಅಗಲವಾದ ಎದೆ, ತುಂಬಿದ ಮುಖ, ಮಸ್ಲಿನ್ ಬಟ್ಟೆಯ ನಿಲುವು ಷರಟು, ದಟ್ಟಿಯ ಪಂಚೆ, ಕೈಯಲ್ಲಿ ವಸ್ತ್ರ, ಕುತ್ತಿಗೆಯಲ್ಲಿ ಒಂದು ಕಂಬಳಿಯದಾರ, ಮುಖದಲ್ಲಿ ಕರಿಯ ಬಟ್ಟು. ಮುಸಾಫಿರರನ್ನು ನಿಮಗೆ ತೋರಿಸಿದ್ದಾಯಿತು. ಒಡನೆಯೇ ಮುಸಾಫಿರರು ನಿಮ್ಮ ಬೊಜ್ಜಿನ ಹೊಟ್ಟೆಯಮೇಲೆ ಹೊಡೆದರು; ಎಂದರೆ, ಮೊದಲ ನೆಯ ಪಙ್ಕ್ತಿಯಲ್ಲಿ ಒಂದು ಸ್ಫುಟವಾದ ಚಿತ್ರ, ಎರಡನೆಯ ಪಙ್ಕ್ತಿಯಲ್ಲಿ ಒಂದು ಉದ್ಯಮದ ವರ್ಣನೆ. ಹೀಗೆ ಒಂದೊಂದು

ಪಙ್ಕ್ತಿಯೂ ಒಂದು ಸಂಪೂರ್ಣ ಭಾವನೆಯನ್ನು ಕೊಡುತ್ತದೆ. ಕೇಳುವುದಕ್ಕೆ ತಮಾಷೆಯಾಗಿಯೂ ಇರುತ್ತದೆ.

೩

ಮಲೆನಾಡಿನಲ್ಲಿ ದೀಪಾವಳಿ ಹಬ್ಬದ ದಿವಸದಲ್ಲಿ ಅನೇಕ ಜನರು ಕೈಗಳಲ್ಲಿ ಕೋಲುಗಳನ್ನು ಹಿಡಿದುಕೊಂಡು ಹಾಡುತ್ತ ನಾಟ್ಯವಾಡುತ್ತ ಕೋಲುಗಳಿಂದ ಹಾಡಿಗೆ ತಾಳ ಹೊಡೆಯುತ್ತ, ನಮ್ಮಲ್ಲಿ ಹುಡುಗಿಯರು ಕೋಲಾಟ ಆಡುವಂತೆ, ಆಡುವರು. ನಾನು ಒಂದು ರಾತ್ರಿ ಆಲದೂರಿನಲ್ಲಿ ಮುಸಾಫರ ಬಂಗಲೆಯಲ್ಲಿ ಇಳಿದಿದ್ದಾಗ ದೂರದ ಗುಡ್ಡ ಒಂದರಿಂದ ಈ ನಾಟ್ಯದ ವಿಚಿತ್ರ ಗಾನವು ಕೋಲಾಟದ ಶಬ್ದದೊಂದಿಗೆ ಸುಮಾರು ಹತ್ತು ಗಂಟೆಯ ಹೊತ್ತಿನಲ್ಲಿ ಕೇಳಬಂದಿತು. ಮಲೆನಾಡಿನಲ್ಲಿ ಧ್ವನಿಯು ಗುಡ್ಡದಿಂದ ಗುಡ್ಡಕ್ಕೆ ಬಹು ದೂರ ಕೇಳಿಸುವುದು. ಆ ರಾತ್ರಿ ಆ ಬೆಳದಿಂಗಳಲ್ಲಿ ಆ ಮಲೆನಾಡಿನ ಕಾಡಿನಲ್ಲಿ ಹಾಯ್ದು ಗುಡ್ಡಗಳಲ್ಲಿ ಪ್ರತಿಧ್ವನಿತವಾಗುತ್ತ ಬಂದ ಆ ನಾಟ್ಯ ಗಾನದ ವಿಲಕ್ಷಣ ರಸವನ್ನು ವರ್ಣಿಸುವುದು ಸಾಧ್ಯವಲ್ಲ. ಸ್ವಲ್ಪದರಲ್ಲಿಯೇ ಆಲದೂರಿನ ಬಳಿ ಒಂದು ಹಳ್ಳಿಯಲ್ಲಿ ಇನ್ನೊಂದು ಗುಂಪಿನವರ ಗಾನವು ಆರಂಭವಾಯಿತು. ಅವರನ್ನು ಕರೆಯಿಸಿ ಆ ನಾಟ್ಯವನ್ನು ಸ್ವಲ್ಪ ಹೊತ್ತು ನೋಡಿದೆನು. ಇದರಲ್ಲಿ ಆರರಿಂದ ಎಂಟು, ಹತ್ತು, ಹನ್ನೆರಡು ಹೀಗೆ ಸಮ ಸಂಖ್ಯೆಯ ಎಷ್ಟು ಜನರಾದರೂ ಸೇರಿ ಆಡಬಹುದು. ಎರಡು ಸಾಲಾಗಿ ಎದುರುಬದುರಾಗಿ ನಿಂತುಕೊಂಡು ಆಡಿದರೂ ಆಡಬಹುದು; ಒಂದರೊಳಗೊಂದು ಎರಡು ಚಕ್ರವಾಗಿ ನಿಂತುಕೊಂಡು ಆಡಿದರೂ ಆಡಬಹುದು. ಚಕ್ರವಾಗಿ ನಿಂತುಕೊಂಡು ಆಡುವುದರಲ್ಲಿ ಒಳಗಿನ ಚಕ್ರದವರು ಹೊರಕ್ಕೂ ಹೊರಗಿನ ಚಕ್ರದವರು ಒಳಕ್ಕೂ, ಒಂದೊಂದು ತಾಳಕ್ಕೂ ಸ್ಥಳ ಬದಲಾಯಿಸುತ್ತ, ಕುಣಿಯುವರು. ನಾನು ಕರೆಯಿಸಿದ ದಿನ ಇವರು ಹಾಡಿದ ಹಾಡುಗಳಲ್ಲಿ ಬೇರೆ ಬೇರೆ ತಾಳಗಳು ಬಂದವು. ಒಂದೊಂದಕ್ಕೂ ಸರಿಯಾದ ನ್ಯಾಸವನ್ನು ಇವರ ಗುರುವು ಏರ್ಪಡಿಸಿದ್ದನು. ಒಂದು ಹಾಡು ಚರಿತ್ರೆಗೆ ಸಂಬಂಧಪಟ್ಟದ್ದು. ಅದರ ಆರಂಭ ಇದು :—

ರಂಗಪ್ಪ ನಾಯಕ ನೀನೇ ಬಾರೋ ರಂಗ ಬಾರೋ ಈ।
ಸಂದರ್ಭದಾಗೆ ಏನು ಹೇಳುತೀಯೆ ರಂಗ ಬಾರೋ ॥

ಈ ಹಾಡುಗಳನ್ನು ಬರೆದಿಟ್ಟ ಕಾಗದವು ಎಲ್ಲಿಯೋ ಕಳೆದುಹೋದದ್ದ ರಿಂದ ಮುಂದಣ ಮಾತುಗಳನ್ನು ಕೊಡಲು ಅವಕಾಶವಿಲ್ಲವಾಗಿದೆ. ಹಾಡಿನ ವಿಷಯವೇನೆಂದರೆ:—ಪರದೇಶೀಯರು ಒಂದು ರಾಜ್ಯದಲ್ಲಿ ನೆಲೆಸಿ, ಸುಲಿಗೆ ಮಾಡುತ್ತ ಜನಗಳಿಗೆ ಹಿಂಸೆ ಕೊಡುತ್ತಿದ್ದಾರೆ. "ನಾಡನೆಲ್ಲಾ ಬಾಚುತಾರೆ, ನಾಡನೆಲ್ಲಾ ದೋಚುತಾರೆ" ಈ ಸಂದರ್ಭದಲ್ಲಿ ಬೇರೆ ಬೇರೆ ಊರಿನ ಗೌಡರುಗಳು—ಹಾವಳ್ಳಿ ವೀರೇ ಗೌಡರು, ದ್ರೋಣನಕೊಡಿಗೆ ದೊಡ್ಡೇಗೌಡರು, ವಸ್ತಾರೇ ಹಲಿಗೇ ಗೌಡರು, ಹೀಗೆ ದೊಡ್ಡ ದೊಡ್ಡ ಊರುಗಳ ದೊಡ್ಡ ದೊಡ್ಡ ಗೌಡ ರನೇಕರು—ಒಂದು ಕಡೆ ಸೇರಿ ಇದಕ್ಕೆ ಏನು ಮಾಡಬೇಕೆಂದು ಯೋಚನೆ ಮಾಡುತ್ತಾರೆ. ಆದರೆ ಇಷ್ಟು ಜನ ಸೇರಿದರೂ ಎಲ್ಲರಿಗಿಂತ ಮುಖ್ಯನಾದ ರಂಗಪ್ಪನಾಯಕ ಬಾರದೆ ಇದ್ದದ್ದರಿಂದ ಅವನನ್ನು ಕರೆಯಿಸುವರು. ಬಾ ಎಂದು ಕರೆಯುವುದೇ ಹಾಡಿನ ಮೊದಲು. ಈ ಸಂದರ್ಭದಲ್ಲಿ ಏನು ಮಾಡುವುದು ಎಂದು ರಂಗಪ್ಪನಾಯಕನನ್ನು ಕೇಳುವರು. ಹೀಗೆ ಇವರು ಹಾಡುತ್ತಿರುವುದರಲ್ಲಿ ಮಧ್ಯೆ ಒಂದೆರಡು ಮಾತು ಸ್ವಲ್ಪ ವಿಚಿತ್ರವಾಗಿದ್ದುವು. "ನೀ ಮೈಸೂರಿಗೆ ಹೋಗ ಬೇಡ; ಕಂದಾಯಾನಾ ಕೊಡಲೂ ಬೇಡಾ." ಹೀಗೆಂದು ನಿರ್ಧರವಾಗು ವುದು. ಆದರೆ ನಾಡನ್ನು ಬಾಚಿ ದೋಚುವ ಅಧಿಕಾರಿಯು ಇನ್ನೂ ನಾಡಿನಲ್ಲೇ ಇರುವನಷ್ಟೆ. ಅವನನ್ನು ಹಿಡಿಯುವುದಕ್ಕೆ ಒಂದು ತಂತ್ರ ವನ್ನು ಹೂಡುವರು. ಒಬ್ಬ ವೇಶ್ಯೆಯನ್ನು ಅವನ ಬಳಿಗೆ ಕಳುಹಿಸಿ, ಅವಳ ಮೂಲಕ ಅವನ ಬಳಿಗೆ ಹೋಗಿಬರುವುದಕ್ಕೆ ದಾರಿಮಾಡಿ ಕೊಂಡು, ಒಂದು ಸಲ ಅವನು ಅವಳ ಮನೆಗೆ ಬಂದಿರುವಾಗ ದಾರಿ ಯಲ್ಲಿ ಹಿಡಿದುಹಾಕುವರು. ಹಾಡನ್ನು ಕೇಳಿದ ಕೆಲವು ದಿನದ ಮೇಲೆ ಈ ಸಂದರ್ಭದ ಚರಿತ್ರೆಯನ್ನು ಕುರಿತು ಮೈಸೂರು ಗೆಜೆಟಿಯರಲ್ಲಿ ನೋಡಿದೆನು. ಅದರಲ್ಲಿ ಶ್ರೀಮನ್ಮಹಾರಾಜ ಶ್ರೀ ಮುಮ್ಮಡಿ ಕೃಷ್ಣ ರಾಜ ಒಡೆಯರವರಿಗೆ ಆಗದವರು ಅವರ ದಿನದಲ್ಲಿ ದಂಗೆಯೆಬ್ಬಿಸಿದ

ಸಂದರ್ಭದಲ್ಲಿ ತರೀಕೆರೆಯ ಪಾಳೆಯಗಾರರ ಮನೆತನದ ರಂಗಪ್ಪನಾಯಕನು ಒಬ್ಬನೆಂದು ಕಂಡುಬಂದಿತು. ಈ ಹಾಡು ಅವನನ್ನು ಕುರಿತದ್ದಾಗಿ ಆ ಸಂದರ್ಭದ ಚರಿತ್ರೆಯನ್ನು ಒಳಗೊಂಡದ್ದು ಎಂಬುದರಲ್ಲಿ ಸಂದೇಹವಿಲ್ಲ. ಆಲದೂರಿನಲ್ಲಿ ಆ ದಿನ ಆ ಕೋಲಾಟದವರು ಇನ್ನೂ ಅನೇಕ ಹಾಡುಗಳನ್ನು ಹಾಡಿದರು. "ಚಂದೇನೊ ರಾಯ ನಿನಗೇ" ಎಂಬುದೊಂದು. ಒಬ್ಬ ಸುಂದರಿಯು ಮನೆಯಲ್ಲಿ ಒಬ್ಬಳೇ ಇರುವಾಗ ಒಬ್ಬ ದೊಡ್ಡ ಮನುಷ್ಯನು ದುರಭಿಪ್ರಾಯದಿಂದ ಅವಳ ಒಳಗೆ ಬರುವನು. ಸುಂದರಿಯು ಅವನಿಗೆ ಇದು ತಕ್ಕುದಲ್ಲವೆಂದು ಹೇಳುವಳು. "ಮುದುಕಾ ನಿನ್ನ ಕೂಡಾ ನಾನು ಬಾಳಲಾರೆ, ಹುಡುಗೀ ನಿನ್ನ ಆಟ ನಾನು ನೋಡಲಾರೆ" ಎಂಬುದೊಂದು. ಹುಡುಗಿಯಾದ ಒಬ್ಬಳನ್ನು ಅವಳ ತಾತನಾಗಲು ತಕ್ಕವನಾದ ಒಬ್ಬ ಮುದುಕನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಅವಳಿಗೆ ತಕ್ಕ ಉತ್ಸಾಹ ಅವನಲ್ಲಿಲ್ಲ; ನಾನು ನಿನ್ನ ಕೂಡ ಬಾಳಲಾರೆ ಎಂದು ಅವಳು ಹೇಳುತ್ತಾಳೆ. ಅವನಿಗೆ ಇವಳ ವಯಸ್ಸಿಗೆ ಅನುಗುಣವಾದ ವಿಲಾಸವೆಲ್ಲ ಅಸಹ್ಯವಾಗಿದೆ; ಅವನು ನಾನು ನಿನ್ನ ಆಟವನ್ನು ನೋಡಲಾರೆ ಎನ್ನುತ್ತಾನೆ. ಇನ್ನೊಂದು ಹಾಡು ಯಾರೋ ಇಬ್ಬರು ಶೂರರು ಒಂದು ಕದನದಲ್ಲಿ ಮಡಿದ ವಿಷಯವನ್ನು ಕುರಿತದ್ದಾಗಿದೆ. "ಹೋದೆಲ್ಲೋ ನೀ ರಂಗ, ಹೋದೆಲ್ಲೋ ನೀ ಸಗುನ". ಸಗುನ ಎನ್ನುವುದು ಆ ಕಡೆ ಬಹು ಸಾಮಾನ್ಯವಾದ ಒಂದು ಹೆಸರು. ಶಕುನ ಎಂಬ ಹೆಸರು ಸಗುನ ಎಂದಾಗಿದೆಯೆಂದು ಕೆಲವರ ಅಭಿಪ್ರಾಯ. ಈ ಹೆಸರಿನ ಒಂದು ಗಿರಿಯು ಸಖರಾಯಪಟ್ಟಣದ ಬಳಿ ಇದೆ. ಶ್ರೀ ರಾಮಚಂದ್ರನ ಪ್ರಿಯ ಸಹೋದರನು ಅಷ್ಟಘಂಟಾ ಶಕ್ತಿಯ ದೆಸೆಯಿಂದ ಯುದ್ಧರಂಗದಲ್ಲೊರಗಿರಲು, ಸಂಜೀವಿನಿಯನ್ನು ತರುವುದಕ್ಕಾಗಿ ಹೊರಟ ಹನುಮಂತನು ಚಂದ್ರದ್ರೋಣ ಪರ್ವತಾಭಿಮುಖವಾಗಿ ಬರುತ್ತ ಈ ಗಿರಿ ಇರುವ ಸ್ಥಳವನ್ನು ಸೇರುವಲ್ಲಿ ಅವನ ಬಲ ಭುಜ ನಡುಗಿತಂತೆ. ಒಳ್ಳೆಯ ಶಕುನವಾಯಿತೆಂದು ಉತ್ಸಾಹದಿಂದ ಆತನು ಮುಂದು ವರಿದನು. ಅದರಿಂದ ಈ ಗಿರಿಗೆ ಶಕುನಗಿರಿಯೆಂದು ಹೆಸರು. ಈ

ಕಥೆಯಿಂದ ಶಕುನ ಎಂಬುದು ಜನಗಳಿಗೂ ಒಂದು ಹೆಸರಾಗಿದೆ. ಈ ಹಾಡಿನ ರಂಗನೂ ಸಗುನನೂ ಯಾವುದೋ ಒಂದು ಊರಿನಲ್ಲಿ ಶೂರರೆಂದು ಹೆಸರು ಪಡೆದಿದ್ದವರಿರಬೇಕು. ಅವರ ಜ್ಞಾಪಕಾರ್ಥವಾಗಿ ಕವಿಯು ಈ ಚರಮ ಗೀತವನ್ನು ಬರೆದಿರುವನು. ಇನ್ನೊಂದು ಹಾಡು ಹೀಗೆ ಆರಂಭವಾಗುವುದು:—"ಸಂಪಿಗೆ ಮಲ್ಲಿಗೆ ಮರದವ್ವಾ." ಈ ಹಾಡನ್ನೂ ಮೇಲೆ ಹೇಳಿದ ಒಂದು ಹಾಡನ್ನು ಬರೆದ ಕಾಗದದಲ್ಲೇ ಬರೆದಿಟ್ಟಿದ್ದಿತು. ಇದು ಕೂಡ ಕಳೆದುಹೋಗಿದೆ. ಅದರ ಮಾತು ಜ್ಞಾಪಕವಿಲ್ಲ. ಆದರೆ ಕೇಳಿದ ರಾತ್ರಿಯಿಂದ ಈ ವರೆಗೂ ಆಗಾಗ ಈ ಹಾಡು ನನ್ನ ಮನಸ್ಸಿನಲ್ಲಿ ತಾನೇ ಹಾಡಿಕೊಳ್ಳುತ್ತದೆ. ಬರಿಯ 'ನನ್ನನ್ನ ನಾನಾ' ಎನ್ನುವುದಕ್ಕೆ ಬದಲಾಗಿ ಆ ಮೃದುವಾದ ಗಾನ ಗತಿಯನ್ನನುಸರಿಸಿ ಆಗಾಗ ಎರಡು ಮಾತುಗಳನ್ನು ನಾನು ಸೇರಿಸಿಕೊಂಡಿದ್ದೇನೆ. ಅವುಗಳನ್ನು ಹೇಳಿದರೆ ಹಾಡಿನ ರೀತಿಯು ತಿಳಿದುಬರಬಹುದು.—

ಸಂಪೀಗೆ ಮಲ್ಲೀಗೆ ಮರದವ್ವಾ
ಚೆನ್ನಾದ ಹೂಗಳ ಬಿಡಿ ತಾಯಿ
ಚೆನ್ನಾದ ಹೂಗಳ ಮುಂಚಾನೆ ಬಿಡಿ ತಾಯಿ
ಸೀತಾಳೇಶ್ವರ ಬರುತಾನೇ
ಸೀತಾಳೇಶ್ವರ ಬರುತಾನೇ

ಈ ಹಾಡಿನಲ್ಲಿ ಒಂದೊಂದು ಪಾದವನ್ನು ಇಪ್ಪತ್ತು ಮಾತ್ರೆಗಳಾಗಿ ನುಡಿಯಬೇಕು: ಹೀಗೆ—

ಸಂಪೀಗೆ | ಮಲ್ಲೀಗೆ | ಮರದವ್ವ | ಅಅಅ
ಸೀತಾಅ | ಳೇಶ್ವಾರ | ಬತಾ೯ಅ | ನೇಎಏ

ಹುಡುಗರೆಲ್ಲರೂ ಹೀಗೆ ಸುತ್ತಾಡುತ್ತ ಹಾಡುತ್ತ ಇರುವಲ್ಲಿ ಮಧ್ಯೆ ಒಬ್ಬ ಮುದುಕನು ಒಂದು ಒಣ ಅಡಿಕೆ ಪಟ್ಟೆಯನ್ನು ಕತ್ತಿಯಂತೆ ಎತ್ತಿ ಹಿಡಿದುಕೊಂಡು ನಿಂತಲ್ಲಿಯೇ ಹಾರಿ ಹಾರಿ ಬೀಳುತ್ತ ಎರಡು ನಿಮಿಷಕ್ಕೆ ಒಂದು ಸಲ ಧೀಂ-ಧೀಂ-ಹ-ಹ ಎಂಬು ತಾಳಕ್ಕೆ ಸರಿಯಾಗಿ

ಕೂಗುತ್ತ ಇದ್ದನು. ಇದು ಏನು ಎಂದು ನಾಟ್ಯದ ಕೊನೆಯಲ್ಲಿ ವಿಚಾರಿಸಲು ಅವನು ಹುಡುಗರಿಗೆ ಹುಮ್ಮಸು ಬರುವುದಕ್ಕೆ ತಾನು ಹೀಗೆ ಕೂಗುವುದಾಗಿ ಹೇಳಿದನು. ಹುಡುಗರೆಲ್ಲ ನಕ್ಕರು. ಹಿಂದೆ ನಾಟ್ಯವು ವೀರನಾಟ್ಯವಾಗಿದ್ದಾಗ ಮಧ್ಯೆ ಕುಣಿಯುವವನು ಕತ್ತಿಯನ್ನೇ ಹಿಡಿದು ಕುಣಿಯುತ್ತಿದ್ದನೆಂದು ತೋರುತ್ತದೆ. ನಾಟ್ಯವು ಈಗ ಆಟದ ನಾಟ್ಯವಾಗಿರುವುದರಿಂದಲೂ ಕತ್ತಿಯಿಲ್ಲದೆ ಇರುವುದರಿಂದ ಅಥವಾ ಹಿಡಿಯುವುದಕ್ಕೆ ಭಯವಾದ್ದರಿಂದಲೂ ಈಗ ಅಡಿಕೆಪಟ್ಟೆಯನ್ನು ಹಿಡಿಯುವನೆಂದು ಊಹಿಸಬಹುದು. ಮಲೆನಾಡಿನ ಸಾಂಗತ್ಯವೂ ಸೌಖ್ಯವೂ ಕೆಡುತ್ತ ಬಂದುವೆಂದು ಈ ಮುದುಕನು ಬಹಳ ಪರಿತಾಪ ಪಟ್ಟನು. ವನ್ನಾತ್ರೆಯ ಬಳಿಗೆ ರಸ್ತೆ ಬರುವವೇಳೆಗೆ ಈ ಮುದುಕನು ಪ್ರಾಯದ ಮನುಷ್ಯನಾಗಿದ್ದನಂತೆ. ಇವನು ರಸ್ತೆಯ ಕೆಲಸಕ್ಕೆ ಹೋಗಿ ಕೂಲಿ ಸಂಪಾದಿಸಿದನಂತೆ. ಆ ಕಾಲದ ಸೊಗಸು ಈಗ ಎಲ್ಲಿ ಬರಬೇಕು? ಆಲದೂರು ಆಗ ಇರಲಿಲ್ಲ. ಆಗ ಹಾನ ಹಳ್ಳಿಗೆ ಗಾಡಿ ಬರುವುದೆಂದರೆ ಏನು ಕೊಂಚದ ಮಾತೆ! ಆಗಿನ ಗೌಡರುಗಳು ಎಂತಹವರು! ಹಬ್ಬದ ದಿನಕ್ಕೆ ಕೋಲಾಟದ ಗುಂಪಿನ ಒಬ್ಬೊಬ್ಬನಿಗೂ ಕೊಳಗ ಕೊಳಗ ದವಸ ಕೊಡುತ್ತಿದ್ದರು. ಈಚೆಗೆ ಊರುಗಳೆಲ್ಲ ಕೆಟ್ಟುಹೋದುವು. ಎಲ್ಲರೂ ಈಗ ನಾವು ಗೌಡರು ನಾವು ಗೌಡರು ಎಂದುಕೊಳ್ಳುತ್ತಾರೆ. ಮಾಮೂಲು ಬಿಟ್ಟು ನಮ್ಮ ಮನೆ ಮುಂದೆ ಮೊದಲು ಆಡಬೇಕು ಎನ್ನುತ್ತಾರೆ. ಹಿಂದಿನ ಗೌಡರು ಈಗ ದೊಡ್ಡಸ್ತಿಕೆ ಇಲ್ಲದವರಾಗಿರಬಹುದು, ಬಡವರಾಗಿರಬಹುದು; ತಲೆವಾಸಿ ಕಾಳು ತೆಗೆದುಕೊಂಡು ಈ ಹೊಸಬರು ದೊಡ್ಡವರಾಗಿರಬಹುದು. ಹಿಂದಿನವರನ್ನು ಬಿಟ್ಟು ಈಗ ಇವರ ಹತ್ತಿರ ಒಂದು ಮೊದಲು ಆಡಬೇಕಂತೆ! ಆಮೇಲೆ ಆಡುತ್ತೇವೆಂದರೆ ಒಪ್ಪುವುದಿಲ್ಲ. ನಮ್ಮ ಮನೆ ಮುಂದೆ ನೀವು ಮೊದಲು ಆಡದಿದ್ದರೆ ಹಾಗೆ ಆಡುವವರನ್ನೇ ಕರೆಯಿಸುತ್ತೇವೆ ಎನ್ನುವರು. ತಮ್ಮ ರೈತರನ್ನು ಕರೆದು ಅವರಿಗೆ ಒಬ್ಬ ಮೇಷ್ಟರನ್ನು ಕೊಟ್ಟು ಒಂದು ಊರಿಗೆ ನಾಲ್ಕು ಕೋಲಾಟದ ಗುಂಪನ್ನು ಮಾಡುವರು. ಹೀಗೆ ಎಲ್ಲಿಯಾದರೂ ಉಂಟೆ!

ಕೋಲು ಹಿಡಿಯುವುದು ಎಂದರೆ ಅಷ್ಟು ಸುಲಭವಾಯಿತೆ! ಹಿಂದಕ್ಕೆ ಕೋಲಾಟವಾಡಬೇಕಾದರೆ ಆಸಾಮಿಯನ್ನು ಚೆನ್ನಾಗಿ ನೋಡಿ ಚುನಾಯಿಸುತ್ತಿದ್ದರು; ಕೆಟ್ಟ ಹುಡುಗರನ್ನು ಚುನಾಯಿಸುತ್ತಿರಲಿಲ್ಲ. ಚುನಾವಣೆಯಾದವರು ಕೋಲಾಟ ಆಡುವಷ್ಟು ದಿನವೂ ಶುಚಿಯಾಗಿರಬೇಕು. ದೇವರಿಗೆ ನಮಸ್ಕಾರಮಾಡಿ ಕೋಲುಹಿಡಿದು ಕುಣಿಯುವುದಕ್ಕೆ ನಿಂತರೆ ದೇವರ ಆವೇಶಬಂದಂತೆ ಕುಣಿಯುತ್ತಿದ್ದರು. ಕೈಯಿಂದ ಕೋಲು ಬೀಳಕೂಡದು. ಹಾಗೇನಾದರೂ ಬಿದ್ದರೆ ಅವನು ಅಲ್ಲಿಗೆ ಕೆಟ್ಟ. ಅದಕ್ಕೂ ಹಿಂದೆ ಇವನ ತಂದೆ ತಾತನ ಕಾಲಕ್ಕೆ ಕೆಳಕ್ಕೆ ಬಿದ್ದ ಕೋಲಿಗೆ ಭಕ್ತಿಯಿಂದ ಪೂಜೆಮಾಡಿ ದೇವರನ್ನು ಬೇಡಿಕೊಂಡರೆ ಕೋಲು ತಾನೆ ಕೈಗೆ ಹಾರಿಬರುತ್ತಿದ್ದಿತಂತೆ. ಈಚೆಗೆ ಅಂತಹ ಮಹಿಮೆ ಎಲ್ಲಾ ಮರೆಯಾಯಿತು. ಹೀಗೆಂದು ಮೊದಲಾಗಿ ಮುದುಕನು ಕೋಲಾಟದ ವಿಷಯವಾಗಿ ತನಗೆ ತಿಳಿದ ಒಂದೆರಡು ಮಾತನ್ನು ಹೇಳಿದನು. ಪ್ರಪಂಚದ ಎಲ್ಲ ಕಥೆಗಳಲ್ಲಿಯೂ ಜೀವನದ ಎಲ್ಲ ವಿಷಯಗಳಲ್ಲಿಯೂ ಯಾವುದೋ ಒಂದು ವಿಷ ರೇಣುವು ಪ್ರವೇಶಮಾಡಿ ಹಿಂದಣ ವ್ಯವಸ್ಥೆಯನ್ನು ಕೆಡಿಸಿ ಸರಿಯಾದ ಹೊಸ ವ್ಯವಸ್ಥೆಯೊಂದನ್ನು ಬರದಂತೆ ಮಾಡಿದೆ ಎಂದು ಇದರಿಂದ ನಮ್ಮ ಮನಸ್ಸಿಗೆ ತೋರಬಹುದು. ಈ ಹಾಡುಗಳು ಬಹು ಪುಟ್ಟಿಗೆ ಹಿಂದಿನ ಕಾಲದವು. ಈಗಲೂ ಅವುಗಳಲ್ಲಿ ಅಲ್ಲಲ್ಲಿ ಮಾತುಗಳನ್ನು ಉಪಾಧ್ಯಾಯರುಗಳು ಸೇರಿಸಿ ಕೊಡುವರು. ಆಲದೂರಲ್ಲಿ ಇವರಿಗೆ ಪಾಠಹೇಳುತ್ತಿದ್ದವನು ರಂಗಪ್ಪನಾಯಕನ ಹಾಡನ್ನು ಹೇಳಬೇಕಾದರೆ ನಾಟ್ಯದಲ್ಲಿ ಹೇಳುವುದಕ್ಕೂ ನಾವು ಬರೆದುಕೊಳ್ಳುವುದಕ್ಕೆ ಹೇಳುವುದಕ್ಕೂ ವ್ಯತ್ಯಾಸವಾಯಿತು. ಇದು ಏಕೆ ಎಂದು ಕೇಳಿದ್ದಕ್ಕೆ, ಆಡುವಾಗ ಅದನ್ನು ಮಾತುಬಂದ ಹಾಗೆ ಹೇಳುತ್ತೇನೆ; ಅವರಲ್ಲಿ ಬುದ್ಧಿವಂತನಾದವನಿಗೂ ಹೀಗೆಯೇ ಬರುತ್ತದೆ; ಉಳಿದವರು ಅವನು ಹೇಳಿದಂತೆ ಹೇಳುತ್ತಾರೆ ಎಂದನು. ಇದರಿಂದ ನಟರಲ್ಲಿ ಪ್ರಮುಖನಾದವನು ಆಡುವ ಸಮಯದಲ್ಲಿ ಅವನ ಉತ್ಸಾಹಕ್ಕೆ ತಕ್ಕಹಾಗೆ ಮಾತುಗಳನ್ನು ಸೇರಿಸುತ್ತ ಹಾಡುವನೆಂದು ತಿಳಿಯಬಹುದು. ಉಪಾಧ್ಯಾಯನು ಹಾಕಿಕೊಟ್ಟಿರುವ ಚೌಕಟ್ಟಿನಲ್ಲಿ

ಅವನು ಆಡುತ್ತ ಆಡುತ್ತ ತನ್ನ ಇಷ್ಟದಂತೆ ಕವನವಮಾಡುತ್ತಿರುವನು. ಈ ಶಕ್ತಿಯು ಜನರಲ್ಲಿ ಈಗಲೂ ಇದೆ. ಈ ಕವನದಲ್ಲಿ ವರ್ಣನೆ ಇದೆ; ಸ್ವಭಾವ ನಿರೂಪಣೆ ಇದೆ; ಕಥಾ ಪ್ರಸಂಗವಿದೆ; ಮಾತುಗಳಲ್ಲಿಯೂ ಸೊಗಸಿದೆ; ಪ್ರಾಸವಿಲ್ಲದಿದ್ದರೂ ರಂಗಪ, ಸಂದರ್ಪ (‘ರ್ಪ’ ಇಲ್ಲಿ ಶಿಥಿಲ) ಎಂಬಂತೆ ಒಂದು ರೀತಿಯ ನಿಸರ್ಗವಾದ ಸ್ವರ ಸಾಮರಸ್ಯವೂ ಇದೆ; ಒಟ್ಟಿನಲ್ಲಿ ಕವಿತೆಯು ಸುಂದರವಾಗಿದೆ.

೬

ಇನ್ನೊಂದು ಸಲ ಕೊಟಿಗೇಹರದಲ್ಲಿ ಮಲೆನಾಡಿನ ಇನ್ನೂ ಕೆಲವು ಹಾಡುಗಳನ್ನು ಕೇಳಿದೆನು. ಈ ಕಡೆ ಚರಿತ್ರೆಗೆ ಸಂಬಂಧಪಟ್ಟ ಹಾಡುಗಳು ಬಹಳವಾಗಿ ಇವೆಯೆಂದು ಕೇಳಿದ್ದೆನು. ಆದರೆ ಅವು ಯಾವುವೂ ದೊರೆಯಲಿಲ್ಲ. ಒಂದು ಮಾತ್ರ ಸುಲ್ತಾನರ ಹಾಡು ಎಂದು ಹೇಳಿದರು. ಕೊಟಿಗೇಹರದಿಂದ ಬಲ್ಲಾಳರಾಯನ ದುರ್ಗಕ್ಕೆ ನೇರವಾಗಿ ಏಳು ಮೈಲಿ ಇರಬಹುದು. ನಗರದ ರಾಣಿ ವೀರಮ್ಮಾಜಿಯು ಬಲ್ಲಾಳರಾಯನ ದುರ್ಗದಲ್ಲಿ ಹೋಗಿ ಸೇರಿಕೊಂಡಾಗ ಹೈದರಲ್ಲಿಯ ಕಡೆಯ ಸೈನ್ಯವು ದುರ್ಗದ ಹಳ್ಳಿಯಲ್ಲಿ ಬಂದು ನಿಂತು ಕಡೆಯಲ್ಲಿ ಅವಳನ್ನು ಸೆರೆಹಿಡಿದ ವಿಷಯ ಅನೇಕರಿಗೆ ತಿಳಿದಿರಬಹುದು. ಆ ಸಂದರ್ಭದ ಮಾತು ಏನಾದರೂ ಇರುವುದೋ ಎಂದು ಆ ಹಾಡನ್ನು ಹೇಳಿಸಿ ಕೇಳಿದೆನು. ಅದರಲ್ಲಿ ಅದೇನೂ ಇರಲಿಲ್ಲ. ಮುಸಲ್ಮಾನ ಸೈನ್ಯಾಧಿಕಾರಿಯೊಬ್ಬನು ಒಬ್ಬ ದೊಡ್ಡಮನುಷ್ಯನ ಮಗಳನ್ನು ಅವಳು ಸ್ನಾನಮಾಡಿ ಹಿಂದಕ್ಕೆ ಬರುವಾಗ ಹೊಂಚುಕಾದಿದ್ದು ಹೊತ್ತುಕೊಂಡು ಹೋಗಿ ಕೆಡಿಸಿದನೆಂದೂ, ಅವಳನ್ನು ಅವಳ ತಂದೆಯು ಮತ್ತೆ ಮನೆಗೆ ಕರೆದುಕೊಳ್ಳದೆ ತ್ಯಜಿಸಿದನೆಂದೂ ಆ ಸೈನ್ಯಾಧಿಕಾರಿಯು ಅವಳನ್ನು ಇಟ್ಟುಕೊಂಡನೆಂದೂ, ತಂದೆಯೂ ಬಳಗದವರೂ ಸೈನ್ಯವೊಂದನ್ನು ಕರೆದುಕೊಂಡು ಹೋಗಿ ಛಲವನ್ನು ತೀರಿಸಿಕೊಳ್ಳುವುದಕ್ಕೆ ಸುಲ್ತಾನನ ಊರನ್ನು ಮುತ್ತಿದರೆಂದೂ ಕತೆ. ಯುದ್ಧದ ವರ್ಣನೆಯು ಎಷ್ಟಕ್ಕೂ ಮುಗಿಯಲಿಲ್ಲ. ಕೊನೆಗೆ ಯಾವ ಕಡೆಯವರು ಗೆದ್ದರೆನ್ನುವುದು ಕೂಡ ತಿಳಿಯುವಂತಿರಲಿಲ್ಲ. ಸಾಕಾಗಿ ಅದನ್ನು ನಿಲ್ಲಿಸಿದೆನು. ಇನ್ನೊಂದು

ಯಲ್ಲಮ್ಮದೇವರ ಕತೆ. ಐಶ್ವರ್ಯವಂತನಾದ ಒಬ್ಬ ಅಣ್ಣನೂ ಬಡತನ ಬಂದಿದ್ದ ಸಂಸಾರಿಯಾದ ಅವನ ತಂಗಿಯೊಬ್ಬಳೂ ಒಂದೂರಿನಲ್ಲಿ ಬೇರೆ ಮನೆಗಳಲ್ಲಿ ವಾಸವಾಗಿರುತ್ತಾರೆ. ಅಣ್ಣ ಕೃಪಣ; ಬಡವೆಯು ಉದಾರಿ. ಅವನು ಅಕ್ಕನಿಗೆ ಒಂದು ಕಾಳನ್ನೂ ಕೊಡುವುದಿಲ್ಲ. ಯಲ್ಲಮ್ಮ ದೇವರು ಒಂದು ಸಲ ಪರೀಕ್ಷೆಮಾಡಬೇಕೆಂದು ಹೊರಡುತ್ತಾಳೆ. ಯಲ್ಲಮ್ಮನು ಭಿಕ್ಷುಕಳಂತೆ ವೇಷ ಹಾಕಿಕೊಂಡು ಮೈಯೆಲ್ಲಾ ನಾರುವ ಹುಣ್ಣಿನಿಂದ ನೋಡುವುದಕ್ಕೆ ಅಸಹ್ಯವಾಗುವಂತೆ ಪ್ರಯಾಣಕ್ಕೆ ಸಿದ್ಧಳಾಗಿ ನಿಲ್ಲಲು, ಅವಳ ಮಗ ಪರಶುರಾಮನು ಇದೇನು ಎಂದು ಕೇಳುತ್ತಾನೆ. ಯಲ್ಲಮ್ಮನ ಮಗನು ಪರಶುರಾಮನೆಂದಾಗಲಿ ಪರಶುರಾಮನ ತಾಯಿಗೆ ಯಲ್ಲಮ್ಮ ಎಂದು ಇನ್ನೊಂದು ಹೆಸರಿತ್ತೆಂದಾಗಲಿ ನಾನು ಕೇಳಿದ್ದು ಇದೇ ಮೊದಲು. ಜನಸಾಮಾನ್ಯದ ಕವಿಯು ಇರತಕ್ಕಷ್ಟೇ ದೇವತೆಗಳಲ್ಲಿ ಒಬ್ಬರೊಬ್ಬರಿಗೆ ಸುಲಭವಾಗಿ ಸಂಬಂಧಗಳನ್ನು ಕಲ್ಪಿಸಿಕೊಳ್ಳುವನೆಂಬುದು ಇದರಿಂದ ವ್ಯಕ್ತವಾಗುವುದು. ಯಲ್ಲಮ್ಮದೇವರ ಮೈಮೇಲೆ ಇದ್ದ ಹುಣ್ಣುಗಳ ವರ್ಣನೆಯು ಬೀಭತ್ಸರಸವನ್ನು ಇಷ್ಟೆಂದು ಹೇಳುವುದಕ್ಕಾಗದು. ಯಲ್ಲಮ್ಮ ದೇವರು ಬಂದು ಹಣವಂತನಾದ ಅಣ್ಣನನ್ನು ಭಿಕ್ಷೆ ಬೇಡುವಳು. ನಿನಗೆ ಕೊಟ್ಟರೆ ನನಗೇನಿದೆ ಎಂದು ಅವನು ಅವಳನ್ನು ಧಿಕ್ಕರಿಸಿ ಕಳುಹಿಸುವನು. ಅಕ್ಕನಿಗೆ ಒಂದು ಕಾಳನ್ನು ಕೊಡದ ಪಾಪಿ ಭಿಕ್ಷುಕಳಿಗೆ ಕೊಡುವನೆ? ಅಕ್ಕನ ಮನೆಯಲ್ಲಿ ಅಂದು ಒಂದು ಕಾಳೂ ಇರಲಿಲ್ಲ. ಬೆಳಗಾಗೆದ್ದು ಅವಳು ಏನು ಮಾಡುವುದೆಂದು ಯೋಚಿಸುತ್ತಿರುವಲ್ಲಿ ಅಣ್ಣನ ಮನೆಯಲ್ಲಿದ್ದ ಮದುವೆಯಾಗದ ತಂಗಿಯೊಬ್ಬಳು ನೀರಿಗೆಂದು ಕೊಡವನ್ನು ತೆಗೆದುಕೊಂಡು ಹೊರಟಂತೆ ಹೊರಟು ಅದರಲ್ಲಿ ಅಷ್ಟು ಕಾಳನ್ನು ತೆಗೆದುಕೊಂಡು ಬಂದು ಅಕ್ಕನಿಗೆ ಕೊಟ್ಟಳು. ಅಕ್ಕ ಅದನ್ನು ಅಡಿಗೆಮಾಡಿ ಮಕ್ಕಳಿಗೆ ಹಾಕುತ್ತಿರುವಳು. ಅವರು ಊಟ ಮಾಡುತ್ತಿರುವಾಗ ಭಿಕ್ಷುಕಳು ಅಣ್ಣನ ಮನೆಯಲ್ಲಿ ಧಿಕ್ಕಾರಹೊಂದಿ ಇವಳ ಮನೆಗೆ ಬಂದು ಭಿಕ್ಷೆ ಬೇಡುವಳು. ಇವಳು ಭಿಕ್ಷುಕಳನ್ನು ಆದರದಿಂದ ಮಾತಾಡಿಸಿ ಕುಳ್ಳಿರಿಸಿ ಮಕ್ಕಳಿಗೆ ಇನ್ನೂ ಹಾಕಬೇಕಾ

ಗಿದ್ದ ಅನ್ನವನ್ನೂ ತನಗಾಗಿ ಇಟ್ಟಿದ್ದ ಅನ್ನವನ್ನೂ ಅವಳಿಗೆ ಬಡಿಸಿ ಉಪಚರಿಸಿ ಎಲ್ಲ ಅನ್ನವನ್ನೂ ಮುಗಿಯಿಸಿ ಸುಮ್ಮನೆ ಕುಳಿತುಕೊಳ್ಳು ವಳು. ಭಿಕ್ಷುಕಳು ನೀನು ಊಟಮಾಡು ಎಂದು ಹೇಳಲು, ಇವಳು ಎಲ್ಲ ಆಗಿಹೋಯಿತು, ಮತ್ತೆ ಮಾಡಬೇಕು ಎನ್ನುವಳು. ಭಿಕ್ಷುಕಳು ಆಗಿಹೋಗಿಲ್ಲ, ಪಾತ್ರೆಗಳಲ್ಲಿ ನೋಡು ಎನ್ನುವಳು. ಪಾತ್ರೆಗಳನ್ನು ನೋಡಿದರೆ ಪಂಚ ಭಕ್ಷ್ಯ ಪರಮಾನ್ನ ತುಂಬಿದೆ. ಆಗ ಯಲ್ಲಮ್ಮ ದೇವರು ತನ್ನ ರೂಪದಿಂದ ಕಂಡುಬಂದು ಇವಳನ್ನು ಹರಸಿ ನೀನು ಸೌಖ್ಯವಾಗಿರು ಎಂದು ಹೇಳಿ ಹೋಗುವಳು. ಅತ್ತ ಅಣ್ಣನ ಮನೆ ಯಲ್ಲಿ ಆಗಲೆ ಹೆಂಡತಿ ಮಕ್ಕಳು ಎಲ್ಲರೂ ಸತ್ತರು. ಆನೆಯ ಮನೆ ಯಲ್ಲಿ ಆನೆ, ಕುದುರೆಯ ಮನೆಯಲ್ಲಿ ಕುದುರೆಗಳು, ದನ ಕರು ಎಮ್ಮೆ ಎಲ್ಲ ಸತ್ತುಹೋದುವು. ಅವನಿಗೆ ಒರಬಾರದ ದುಃಖವೆಲ್ಲ ಬಂದಿತು. ಇದೇ ಕಾವ್ಯ. ಕತೆಯು ನೀತಿಯನ್ನು ಕಲಿಸುವುದಕ್ಕಾಗಿ ಆಗಿರುವ ಕತೆ: ದಾನವು ಶ್ರೇಯಸ್ಸಿಗೆ ಕಾರಣ; ಕಾರ್ಪಣ್ಯವು ಐಶ್ವರ್ಯಕ್ಕೆ ಕುಠಾರ. ಕವಿಯು ಕತೆಯಲ್ಲಿ ಮತ್ತೆ ಮತ್ತೆ "ನಿನಗೆ ಭಿಕ್ಷಾ ಕೊಟ್ಟು ನಾನು ನಿನ್ನ ಹಾಂಗೆ ಆಗುತೇನಿ; ಕೊಟ್ಟವನಿಗೆ ಏನು ಉಂಟು? ಕೊಟ್ಟು ಒಡವನಾಗುತಾನೆ" ಎಂದು ಅಣ್ಣನ ಬಾಯಲ್ಲಿ ಹೇಳಿಸುವನು. ಅದಕ್ಕೆ ತಕ್ಕಂತೆ ಅಕ್ಕನ ಬಾಯಲ್ಲಿ ಉದಾರವಾದ ಮಾತುಗಳನ್ನು ಹೇಳಿಸುತ್ತಾನೆ. ಕಾಡುಗಳಲ್ಲಿ ಒಂದೊಂದು ಕಡೆ ಒಂದೊಂದು ಗುಡಿ ಸಲಿನಲ್ಲಿ ಜೊತೆಯ ಜನಗಳಿಂದ ದೂರದಲ್ಲಿರುತ್ತ ಮರ ಮರದಲ್ಲಿ ಭೂತ ವನ್ನೂ ನೆರಳಿನಲ್ಲೆಲ್ಲ ಜೀವವನ್ನೂ ಊಹಿಸಿ ಸದಾ ಭೀತಿಯಲ್ಲಿರುವ ಎಳೆಯ ಮಕ್ಕಳಂತಹ ಈ ಜನರಲ್ಲಿ ಇಂತಹ ಕತೆಯನ್ನು ಕೇಳಿ ಉಂಟಾಗುವ ಪರಿಣಾಮದ ಆಳವನ್ನು ಕಂಡವರಾರು? ಭಿಕ್ಷೆಗೆ ಬಂದ ಒಬ್ಬೊಬ್ಬ ಮುದುಕಿಯೂ ಯಲ್ಲಮ್ಮದೇವರೋ ಇಲ್ಲವೇ ಸಾಮಾನ್ಯ ಳಾದ ಮುದುಕಿಯೋ ಎಂಬ ಸಂದೇಹ ಚಿಕ್ಕಂದಿನಿಂದಲೂ ಹುಟ್ಟು ವುದಕ್ಕೆ ಇಂತ ಕತೆಯು ಕಾರಣವಾಗುತ್ತದೆ. ಹೀಗೆ ಭಯದ ಮೂಲಕ ದಾನಶೀಲತೆಯನ್ನುಂಟುಮಾಡುವುದು ನೀತಿಯ ಸ್ಥಿರವಾದ ಪ್ರಚಾರಕ್ಕೆ ಸಾಧನ ಅಹುದೋ ಅಲ್ಲವೋ ಚರ್ಚಿಸುವುದು ಇಲ್ಲಿ ಪ್ರಕೃತವಲ್ಲ.

ಕತೆ ಹೇಳುವಲ್ಲಿ, ಹಾಡುವವನು ಮಾತು ಮಾತನ್ನು ಮತ್ತೆ ಮತ್ತೆ ಹೇಳಿ ಕೇಳುವವರೆಲ್ಲರಿಗೂ ಕತೆಯು ಹೆಜ್ಜೆ ಹೆಜ್ಜೆಗೂ ತಿಳಿಯುವಂತೆ ಮಾಡುತ್ತಾನೆ. ಇದರಲ್ಲಿಯೂ ಅವನು ಪಾದ ಪಾದಕ್ಕೆ ಮಾತುಗಳನ್ನು ಸೇರಿಸಿಕೊಂಡು ತನ್ನ ಇಷ್ಟದಂತೆ ಕಟ್ಟಿಕೊಂಡು ಹೋಗುತ್ತಾನೆ. ಮಾತು ಸಾಲಾಗಿ ಹೊರಟುಹೋದರೆ ಗ್ರಾಮದ ಜನರಲ್ಲಿ ತಿಳಿದುಕೊಳ್ಳುವವರು ಕಡಿಮೆ. ಆದದ್ದರಿಂದ ಎರಡು ಪಾದಕ್ಕೆ ಒಂದು ಸಲ ಜೊತೆಯ ಹಿಮ್ಮೇಳದವನು ಒಂದು ಪಲ್ಲವಿಯ ಪಾದವನ್ನು ಉಚ್ಚರಿಸುತ್ತಲೇ ಇರುತ್ತಾನೆ. ಸಣ್ಣ ಪಾದದ ಹಾಡಾದರೆ; "ರಾಮಾ ದಾದಾ ದೀದೀ"; ಸ್ವಲ್ಪ ದೊಡ್ಡ ಪಾದದ್ದಾದರೆ "ಕಲಿ ರಾಮಾ ದಾದಾ ದೀದೀ"; ಈ ಮಾತುಗಳಿಗೆ ಅರ್ಥವೇನೂ ಇಲ್ಲ. ಈ ಹಾಡುಗಳು ಬರೆವಣಿಗೆಯಲ್ಲಿ ನಾಲ್ಕರಲ್ಲೊಂದು ಭಾಗಕ್ಕೆ ಇಳಿಯುತ್ತವೆಯೆಂದು ಹೇಳಬಹುದು. ಹಾಡುವವನಿಗೆ ಬಾಯಲ್ಲಿ ಹೇಳುತ್ತ ಮಾತುಗಳನ್ನು ಸೇರಿಸಿಕೊಳ್ಳುತ್ತ ಹೋಗುವಾಗ ಬರುವ ಧಾಟಿಯು ಬರೆಯುವುದಕ್ಕೆ ಹೇಳುವಾಗ ಇರುವುದಿಲ್ಲ. ಆಗ ರೆಕ್ಕೆಯನ್ನು ಹರಡಿ ಹಾರುತ್ತಿರುವ ಪಕ್ಷಿಯಂತೆ ಇರುವ ಕತೆಯು, ಬರೆಯುವಾಗ ಗರಿ ಮುದುರಿ ನೆಲದಲ್ಲಿ ನಿಂತ ಪಕ್ಷಿಯಂತೆ ಆಗುತ್ತದೆ.

ಕೊಟಿಗೇಹರದಲ್ಲಿ ಕೇಳಿದ ಕೋಲಾಟದ ಹಾಡುಗಳಲ್ಲಿ ಇನ್ನೊಂದು ಇದು :—

ಕಟ್ಟಣಿ ಕೋಲ ಕಟ್ಯವಳೇ ನಮ್ಮ
ಪಟ್ಟದ ರಾಣಿ ಬರ್ತವಳೇ
ಪಟ್ಟೆಯ ಸೀರೆಯ ಸುಟ್ಟವಳೇ
ದುಂಡು ಮಲ್ಲಿಗೆಯ ತೊಟ್ಟವಳೇ
ಕಟ್ಟಣಿ ಕೋಲ ಕಟ್ಯವಳೇ ನಮ್ಮ
ಪಟ್ಟದ ರಾಣಿ ಬರ್ತವಳೇ....

ಹೀಗೆ ಮಾತು ಇನ್ನೂ ಮುಂದಕ್ಕೆ ಹೋಗುತ್ತದೆ. ಕೋಲಾಟದವರು ತಮ್ಮ ರಾಣಿಯನ್ನು ವರ್ಣಿಸುವ ಈ ಹಾಡಿನ ಗತಿಯು ಕೇಳಿದವರ

ಮನಸ್ಸಿನಲ್ಲಿ ನಮ್ಮನೆ ಪ್ರತಿ ಧ್ವನಿಯಾಗುತ್ತಲಿರುವುದು. ಅದರ ಮಾತುಗಳನ್ನು ಕೂಡ ಅವರವರ ಇಷ್ಟದಂತೆ ಸೇರಿಸಿಕೊಳ್ಳಬಹುದು.

ಆ ದಿನ ನಾನು ಕೇಳಿದ ಹಾಡುಗಳಲ್ಲಿ ಒಂದೆರಡು ನೀತಿಯ ಹಾಡುಗಳು. "ಹಿಡಿಹಿಡಿ ಗುರುವಿನ ಪಾದವ ಎಂದೆಂದಿಗೂ ಬಿಡ ಬಾರದು" ಎಂಬುದೊಂದು. ಇನ್ನೊಂದು ಹೀಗೆ ನಡೆಯುವುದು:—

ಅಣ್ಣಾ ನೀನೊಂದಂದರೆ ನಾನೊಂದಂದರೆ
ಜಗಳ ಬಾರದೋ ಅಣ್ಣಾ
ಜಗಳ ಬಾರದೋ ಅಣ್ಣಯ್ಯ
ಜಗಳ ಬಾರದೋ
ತಾಯಿ ಮಾತನು ಎಂದಿಗಾದರೂ
ವಿಾರಬಾರದೋ
ತಾಯಿ ಮಾತನು ಎಂದಿಗಾದರೂ ವಿಾರಬಾರದೋ ಅಣ್ಣಾ
ವಿಾರಬಾರದೋ ಅಣ್ಣಯ್ಯ
ವಿಾರಬಾರದೋ
ಹಾಳು ಭಾವಿಯಲಿ ಹಣಕಿಯಾದರು
ನೋಡಬಾರದೋ....

ಹೀಗೆಯೇ ಇತರ ನೀತಿಯ ಮಾತುಗಳೂ ಈ ಹಾಡಿನಲ್ಲಿ ಬರುತ್ತವೆ. ಅಣ್ಣಾ ಎಂದು ಒಂದು ಸಲ; ಅಣ್ಣಯ್ಯ ಎಂದು ಇನ್ನೊಂದು ಸಲ; ನೀತಿಯ ಮಾತು ಎಷ್ಟು ಪ್ರೀತಿಯಿಂದ ಸೇರಿಬರುತ್ತದೆಂಬುದನ್ನು ಹೇಳ ತೀರದು. ಉಪದೇಶ ಮಾಡುವವನು ಇಲ್ಲಿ ಬರಿಯ ಶಾಸನವನ್ನು ಮಾತ್ರ ಮಾಡುತ್ತಿಲ್ಲ; ನಮ್ಮಲ್ಲಿ ವಿಶೇಷ ಮಮತೆಯನ್ನು ಪ್ರಕಾಶ ಪಡಿಸುತ್ತಾನೆ. ಇಂಥ ಸಾಂಗತ್ಯಗಳು ವೀರಶೈವ ಮತದ ಗುರುಗಳಿಂದ ರಚಿತವಾಗಿ ಜನರಲ್ಲಿ ಜಂಗಮರ ಮೂಲಕ ಹರಡಿದುವೆಂದು ತೋರು ತ್ತದೆ. ಸಾಮಾನ್ಯ ಜನರನ್ನು ಉದ್ಧಾರಮಾಡಬೇಕೆಂಬ ಉದಾರ ಬುದ್ಧಿಯಿಂದ ಕರ್ಣಾಟಕದಲ್ಲಿ ಈ ಮತವು ಮಾಡಿರುವ ಕಾರ್ಯವನ್ನು ನಾವು ಇನ್ನೂ ಸರಿಯಾಗಿ ನಿರ್ಧರಿಸಿಲ್ಲ. ಈ ಹಳೆಯ ಕೀರ್ತನೆಗಳು

ಈಗಣ ಕೆಲವು ಕೃತಿಗಳಂತೆ ಪಾಂಡಿತ್ಯ ಪ್ರದರ್ಶನದ ಒಲೆಗೆ ಸಿಕ್ಕಿ ಕೆಟ್ಟು ಹೋಗಿಲ್ಲ. ಈಗ ಕೆಲವು ದಿನಗಳ ಹಿಂದೆ ನಾನು ಒಂದು ಕೃತಿಯನ್ನು ಕೇಳಿದೆನು. ಅದರಲ್ಲಿ ಎರಡು ಮೂರು ಮಾತು ಜ್ಞಾಪಕ ಇದೆ:—

ಎಂತಾ ಗುರುನಾಥನೂ ಎಂತ
ಅಂತಃಕರುಳುಳ್ಳಾತನೂ ||
ಕಾಂತೇ ನೀ ಬಾರೆಂದೇಕಾಂತಕ್ಕೆ ಕರೆದು ಆ
ಕಾಂತೇಯೊಳಿಂತೆಂದನು ||

ಏನೆಂದನು?

ಅಷ್ಟಮದಗಳನು ಘಟ್ಟ್ಯಾಗಿ ಕಟ್ಟುತ್ತಿ
ಗಾಳೀಗೆ ತೂರೆಂದನು ||

ಮಾತು ಬಹಳ ಚೆನ್ನಾಗಿರುವಂತಿದೆ; ಅರ್ಥ ಚೆನ್ನಾಗಿಲ್ಲ. ಅಷ್ಟಮದಗಳನು ಘಟ್ಟ್ಯಾಗಿ ಕಟ್ಟಿ ಗಾಳಿಗೆ ತೂರುವುದು ಒಳ್ಳೆಯ ಕೆಲಸ. ಇದನ್ನು ಮಾಡುವ ಬಗೆ ಹೇಗೆ? ಇದನ್ನು ಕಾಂತೆಗೆ ಹೇಳತಕ್ಕದ್ದೇನು? ಅದಕ್ಕೆ ಅವಳನ್ನು ಏಕಾಂತಕ್ಕೆ ಏಕೆ ಕರೆದುಕೊಂಡು ಹೋಗಬೇಕು? ಇದನ್ನು ಹೀಗೆ ಹೇಳುವುದಕ್ಕೆ ಅಂತಃಕರುಳು ಎಂತಾದ್ದಾಗಿರಬೇಕು? ನಮ್ಮ ಉಪಾಧ್ಯಾಯರೊಬ್ಬರು ಒಂದು ಕತೆಯನ್ನು ತಮಾಷೆಗೆ ಹೇಳುತ್ತಿದ್ದರು. ಯಾರೋ ಒಬ್ಬನು ಒಂದು ಹಾಡನ್ನು ಬರೆದನಂತೆ. "ಘ್ರಣೀ ರಣೀ ಮಣೀ ಫಣಿವೇಣೀ ಕಮಲಾಕ್ಷಿ ಬಾರೆನ್ನಗಿಣಿಯೇ." 'ಘ್ರಣೀ ರಣೀ' ಎಂದರೇನಯ್ಯಾ ಎಂದರೆ ಪ್ರಾಸಕ್ಕಾಗಿ ಸೇರಿಸಿದೆ ಎಂದನಂತೆ. ಗುರು ಕಾಂತೆಯನ್ನು ಕರೆದದ್ದೂ, ಏಕಾಂತಕ್ಕೆ ಕರೆದದ್ದೂ ಕಾಂತ ಎಂಬ ಪ್ರಾಸಕ್ಕಾಗಿ ಹೊರತು ಮತ್ತೆ ಯಾವ ದುರುದ್ದೇಶದಿಂದಲೂ ಅಲ್ಲ. ಪಾಂಡಿತ್ಯದ ಕವಿತ್ವಕ್ಕೆ ಕೈಹಾಕಿದರೆ ಪಂಡಿತನಾದ ಕವಿಗೆ ಬರುವುದೂ ಅನೇಕ ವೇಳೆ ಇದೇ ಗತಿ. ಇನ್ನು ಪಂಡಿತನಲ್ಲದವನ ಮಾತೇನು? ಹಿಂದಣ ಕಾಲದ ಈ ಗೀತೆಗಳಲ್ಲಿ ಈ ರೀತಿಯ ವ್ಯಂಗ್ಯಾಭಾಸಗಳು ಕಾಣುವುದಿಲ್ಲ.

೫

ಬರಿಯ ಗಾಂಭೀರ್ಯದ ಹಾಡುಗಳನ್ನೇ ಹೇಳಿ ಸುಖವಿಲ್ಲವೆಂದು ಕೋಲಾಟದವರು ಒಂದೆರಡು ಹಾಸ್ಯದ ಹಾಡುಗಳನ್ನು ಹೇಳಿದರು. ಅದರಲ್ಲಿ ಒಂದು ಬಗಸೀ ಮರವನ್ನು ಕುರಿತದ್ದು. ಮಲೆನಾಡಿನಲ್ಲಿ ಬಹು ಜಾತಿಯ ಜನಕ್ಕೆ ಬಗಸೀ ಹೆಂಡದ ಮೇಲೆ ಬಹಳ ಪ್ರೀತಿ. ನಮ್ಮ ಕಡೆ ಈಚಲಮರದವ್ವನ ಮೇಲೆ ಅವಳ ಉಪಾಸಕರು ಕಟ್ಟಿರುವಂತೆ ಆ ಕಡೆಯವರು ಬಗನೀಮರದವ್ವನ ಮೇಲೆ ಹಾಡುಗಳನ್ನು ಕಟ್ಟಿದ್ದಾರೆ. ಕಾಸು ಕೊಟ್ಟರೆ ಕೈಲಾಸವ ತೋರುವಳು ಈಚಲಮರದವ್ವ ಮಾತ್ರವಲ್ಲ; ಬಗನೀಮರದವ್ವನೂ ಹಾಗೆಯೇ ಮಾಡುತ್ತಾಳೆ. ಬಗಸೀ ಮರದವ್ವನ ಬಗೆ ಬಗೆಯ ನಡೆ ನುಡಿಯನ್ನು ವರ್ಣಿಸುತ್ತ ಹಾಡು

ಹುಡುಗೀರನ್ನ ಬಾ ಅಂತಾಳೆ ಬಗಸೀಮರದವ್ವಾ
ಮುದುಕೀರನ್ನ ಹೋಗಂತಾಳೆ ಬಗಸೀಮರದವ್ವಾ

ಎಂದು ಹೇಳಿತು. ನಾನು ಅದೇಕೆ ಹಾಗೆ ಎಂದು ಕೇಳಿದೆ. ಎಲ್ಲರೂ ನಕ್ಕರು. ಒಬ್ಬನು "ನಮಗೇನು ಗೊತ್ತು" ಎಂದ. ಇನ್ನೊಬ್ಬನು "ನಮ್ಮ ಹಾಗೆಯೇ ಅವಳೂ" ಎಂದಹಾಗೆ ನನಗೆ ಜ್ಞಾಪಕ. ಇನ್ನೊಂದು ಹಾಡು ಹೀಗೆ ಆರಂಭವಾಗುತ್ತದೆ:—

ಗರಿ ಗರಿ ಗರಿ ಗರಿ ನಾರಯಣಾ ಹರಿ
ನಾರಯಣಾ ಹರಿ ನಾರಯಣಾ
ಗರಿ ಗರಿ ಗರಿ ಗರಿ........

ಹರಿ ಹರಿ ಎನ್ನುವುದನ್ನು ತಪ್ಪಾಗಿ ಗರಿ ಗರಿ ಎಂದು ಹೇಳುವನೇನೋ ಎಂದು ನಾನು ಹರಿ ಹರಿ ಎನ್ನು, ಗರಿ ಗರಿ ಅಲ್ಲ ಎಂದು ಹೇಳಿದೆ. ಹಾಡುವವನು ಇಲ್ಲ ಬುದ್ಧಿ ಎಂದು ಗರಿ ಗರಿ ಎಂತಲೇ ಹೇಳಿ ಮುಂದಕ್ಕೆ ಹಾಡಿದನು:—

ಎಲ್ಲಿಂದ ಬಂದರಿ ದಾಸಯ್ಯಾ ನಿಮ್ಮ
ಊರುಗಳ್ಯಾವುಂಟು ದಾಸಯ್ಯ

ಹೀಗೆ ಮೊದಲಾಗಿ ವಿಚಾರಮಾಡಿ—

ನಿಮ್ಮೂರುಗಳಾದುವು ದಾಸಯ್ಯ ನಿಮ್ಮ
ಕಾಫಿಗಳೆಲ್ಲುಂಟು ದಾಸಯ್ಯ

ಅದಕ್ಕೆ ಉತ್ತರ—

ಕಾಫಿಯ ಮಾಡುವ ಕೋಸ್ಯಮ್ಮ
ಕೋಸ್ಯಮ್ಮ ಕಾಸ್ಯಮ್ಮ ಕಾಪ್ಯಾಯುಸ್ತು

ಆಮೇಲೆ—

ನಿಮ್ಮ ಕಾಂಗಳಾಯಿತು ದಾಸಯ್ಯ ನಿಮ್ಮ
ಊಟಗಳೆಲ್ಲುಂಟು ದಾಸಯ್ಯ

ಉತ್ತರ—

ಊಟಾ ಹಾಕುವ ಪಾಟಮ್ಮ
ಪಾಟಮ ಗೀಟಮ ಊಟಾಯಿತು

ಹೀಗೆ ದಾಸಯ್ಯನನ್ನು ಏನು ಕೇಳಿದರೂ ಅವನು ಅದಕ್ಕೆ ಸರಿಯಾದ ಪ್ರಾಸಬದ್ಧವಾದ ಒಂದು ಜವಾಬು ಕೊಡುತ್ತಾನೆ. ದಾಸಯ್ಯನು ಆಶು ಕವಿ; ಅಲ್ಲದೆ ಕಾಫಿ ಊಟಗಳನ್ನು ಸುಲಭವಾಗಿ ಸಂಪಾದಿಸಿ ಕೊಳ್ಳಬಲ್ಲನು. ಹೇಳುವವನು ಸಂತೋಷವಾಗಿ ಹೇಳುವುದರಿಂದಲೂ ಕೇಳುವವರು ನಗುವುದಕ್ಕೆ ಸಿದ್ಧರಾಗಿರುವುದರಿಂದಲೂ ಇಂತಹ ಸಾಮಾನ್ಯವಾದ ಹಾಸ್ಯವೂ ಅಂತಹ ಸಭೆಯಲ್ಲಿ ರುಚಿಯಾಗಿಯೇ ಇರುವುದು.

೬

ಇನ್ನು ಮೈದಾನದ ಕಡೆಯ ಹಾಡು ಎರಡನ್ನು ಕುರಿತು ಒಂದೆರಡು ಮಾತು ಹೇಳುತ್ತೇನೆ. ಈ ಹಾಡುಗಳನ್ನು ನಮ್ಮಲ್ಲಿ ಅನೇಕರು ಕೇಳಿರಬಹುದು. ಸರ್ಕಾರಿಯ ಕೆಲಸದಿಂದ ಕೆಲವು ವರ್ಷಗಳ ಹಿಂದೆ ವಿಶ್ರಾಂತಿಯನ್ನು ಹೊಂದಿದ ಚಿರ ಯುವಕರಾದ ನಮ್ಮ ಪೂಜ್ಯಮಿತ್ರರೊಬ್ಬರಿರುವರು. ಅವರು ರಸಿಕ ಸಮುದಾಯದಲ್ಲಿ ಚಕ್ರವರ್ತಿಗಳು. ಸ್ನೇಹಿತರು ನಾಲ್ಕು ಜನ ಸೇರಿ ಅವರನ್ನು ಸ್ವಲ್ಪ ಪೀಡಿಸಿದರೆ ಅವರು ಈ ಹಾಡುಗಳನ್ನು ಹಾಡುವರು :—

ಕರುನಾಟದ್ಹೆಣ್ಣೇ ನೀ
ನೋರೆಗಣ್ಣಾಲ್ ನೋಡ್ತಿದಿ
ನಿಯ್ಯನಂತೆ ನಡುನಿನ್ ಬಲು ಸಣ್ಣ
ಷೌಲ್‌ಮಾಡಿ ಖ್ಯಾಲ್‌ಮಾಡಿ ಮೌಲ್ಕನ್ನ ಹೇಳ್ಳೋರಿ
ಮಲ್ಲೆನೆಂತ ಹೇಳಬೇಡ ಗುಣವಂತೀ ॥
ನಿನಗಾಗಿ ತಿರಗತೀನಿ ಓಣಿ ಓಣೀ
ಏನೇ ಹೇರಿದೆ ಡೂಂಬರಾಗಣೀ
ಕುಂತರ್ನಿಂತರ್ ನಿನ್ನ ಧ್ಯಾನ
ಸತ್ತರ್ನಿನ್ನ ಬಿಡಲಿಕ್ಕಿಲ್ಲ
ದೋತರ್ ಸುಟ್ಟು ಭಾವಸಂತಾಗುತೀನಿ ॥

ಇದು ಒಂದು ಹಾಡು. ಇನ್ನೊಂದು—

ಗೆಳತಿ ಕರೆಯುತಳೆ ತನ್ನ ಗೆಳೆಯುಗೇ
ಬಾರೊ ನಮ್ಮ ನಲ್ಲಾ
ಬಾರೊ ನಮ್ಮ ನಲ್ಲಾ ನಿನಗೆ ನಾನು
ಹೆಚ್ಚು ಕೇಳೊಕಿಲ್ಲ॥
ಎಲ್ಲ ಹೇಳುತೀನಿ ನನ್ನ ಊಟ ಉಡುಗಿ
ವಾರಕೆ ಎಂಟಾಣೆ ತುಪ್ಪವ ತಾಗೆ
ನಿತ್ಯ ಹಾಲು ಬೇಕು ಹುಬ್ಬಳಿ ಚೆರಿಗೆ
ಇದಕಿಂತ ಹೆಚ್ಚು ಬೇಡಲ್ಯಾಕೇ
ಬೇಡಲ್ಯಾಕೆ ॥
ನಿನ್ನ ಜನ್ಮ ನಾನು ಅರಿಯಲ್ಯಾಕೇ
ಅರಿಯಲ್ಯಾಕೇ ॥
ಮಾನಮಿಂಟಿಗಿ ಒಂದು ಮಾಡಿಸಿ ಕೊಡು
ಸದ್ಯ ನಿರ್ವಹಕಿಲ್ಲಾ
ಸದ್ಯ ನಿರ್ವಹಕಿಲ್ಲಾ ನಿನಗೆ ನಾನು
ಹೆಚ್ಚು ಕೇಳೊಕಿಲ್ಲ ॥

ಈ ಹಾಡು ಎರಡೂ ಹುಬ್ಬಳ್ಳಿಯ ಕಡೆಯದೆಂದು ತೋರುತ್ತದೆ. ಭಾಷೆಯು ಧಾರವಾಡದ ಕಡೆಯ ಭಾಷೆಯಂತೆ ಇದೆ. ಇವುಗಳನ್ನು ಬರೆದ ಕವಿಗಳ ಹಾಸ್ಯರಸಜ್ಞತೆಯನ್ನು ಎಷ್ಟು ಹೊಗಳಿದರೂ ಸಾಲದು. ಮೊದಲನೆಯ ಹಾಡನ್ನು ನೋಡಿರಿ. ಸ್ವಲ್ಪ ಸ್ತೋತ್ರ; ಆಮೇಲೆ ಪ್ರಾರ್ಥನೆ; ಪ್ರೀತವನ್ನು ಗಡೆಯನ್ನು ಏರುತ್ತದೆ; ನಾಯಕನು ರೇಗಿ ಬೇಳುತ್ತಾನೆ; ಕೊನೆಗೆ ಒಂದು ಶಪಥ. ಇದೆಲ್ಲ ಎಷ್ಟು ಸೊಗಸಾದ ಹಾಸ್ಯ! ಎರಡನೆಯ ಹಾಡಿನ ಸುಂದರಿಯೂ ಎಂತಹ ವಿಂತದ ಹೆಂಗಸು! ನಲ್ಲನ ವಿಷಯದಲ್ಲಿ ಎಷ್ಟು ಕರುಣ! "ನಿನ್ನ ಜನ್ಮ ನಾನು ಅರಿಯಲ್ಯಾಕೇ ಅರಿಯಲ್ಯಾಕೇ." ಇವುಗಳನ್ನು ಬರೆದವರು ಸಾಮಾನ್ಯ ಕವಿಗಳೇ ಸರಿ. ಪ್ರಾಸ ಯತಿ ಗಣಗಳನ್ನು ಕಂಡರೆ ಇವರಿಗೆ ಲಕ್ಷ್ಯವೇ ಇಲ್ಲ. ಆದರೂ ಮಾತುಗಳು ಎಷ್ಟು ಚೆನ್ನಾಗಿ ಸೇರುತ್ತವೆ! ಪದ್ಯದಲ್ಲಿ ಸ್ವಭಾವವಾಗಿಯೇ ಒಂದು ವಿಧವಾದ ಸ್ವರ ಸಾಮರಸ್ಯವು ಉಂಟಾಗಿದೆ. ಇಂಥ ಶಕ್ತಿಯು ಜನರಲ್ಲಿ ಇರುವುದು ಅವರ ರಸಿಕತೆಯನ್ನು ತೋರಿಸುತ್ತದೆ; ಅವರ ಕಾವ್ಯ ಪರಿಚಯವನ್ನು ತೋರಿಸುತ್ತದೆ.

೨

ಈಗ ಕೆಲವು ತಿಂಗಳ ಹಿಂದೆ ಸರ್ಕೀಟಿನಲ್ಲಿ ಒಂದು ಕಡೆ ನಾನು ಒಬ್ಬ ಭಿಕ್ಷುಕನನ್ನು ನೋಡಿದೆನು. ಅವನು ತಲೆಯಿಂದ ಕಾಲವರೆಗೆ ಒಂದು ಬಣ್ಣ ಬಣ್ಣದ ಸೊಗೆಯನ್ನು ಹಾಕಿಕೊಂಡು, ಕೆಂಪು ಬಡಲಿನಲ್ಲಿ ಬಿಳಿಯ ಚುಕ್ಕೆಯ ಪಾಗು ಒಂದನ್ನು ತಲೆಗೆ ಸುತ್ತಿದ್ದನು. ಅದರಲ್ಲಿ ಒಂದೆರಡು ನವಿಲುಗರಿ. ಮುಖದ ಮೇಲೆ ಅಂಗಾರ ವಿಭೂತಿ ಕುಂಕುಮ ಅರಿಸಿನಗಳಿಂದ ಚುಕ್ಕೆಗಳನ್ನು ಹಚ್ಚಿಕೊಂಡಿದ್ದನು. ಕಯ್ಯಲ್ಲಿ ಒಂದು ಕಿನ್ನಡಿ. ಅವನಿಗೆ ಹಾಡುಗಳು ಬರಬೇಕೆಂದು ತೋರಿ ನಾನು ಏನಯ್ಯಾ ಎಂದು ಕೇಳಿದೆನು. ಒಂದೆರಡು ಬರುತ್ತವೆಂದು ಅವನು ಹೇಳಿದನು. ಸ್ವಲ್ಪವನ್ನು ಹೇಳಿಸಿ ಕೇಳಿದ್ದರಲ್ಲಿ ಬಹಳ ಚೆನ್ನಾಗಿದ್ದಿತು. ಆಮೇಲೆ ಅವನನ್ನು ಕೂಡಿಸಿಕೊಂಡು ಎಲ್ಲ ಹಾಡನ್ನೂ ಕೇಳೋಣವೆಂದು ನೋಡಿದರೆ ಅದು ಎಷ್ಟು ಹೊತ್ತಿಗೂ ಮುಗಿಯಲಿಲ್ಲ. ಆದದ್ದರಿಂದ ಅದರಲ್ಲಿ ಕೊಂಚ ಭಾಗವನ್ನು ಬರೆದು ಗುರುತುಹಾಕಿಕೊಂಡೆನು.

ಅದರ ವಿಚಾರ ಎರಡು ಮಾತನ್ನು ಹೇಳಿದರೆ ನನಗೆ ತಿಳಿದಿರುವ ಇಂತಹ ಹಾಡುಗಳ ಮಾದರಿಯನ್ನೆಲ್ಲ ಹೇಳಿದ ಹಾಗಾಗುತ್ತದೆ.

ಈ ಹಾಡಿನ ನಾಯಕನು ಅರ್ಜುನ. ಅವನ ಭೂಪ್ರದಕ್ಷಿಣೆಯು ಮುಗಿಯುವ ದಿನಗಳಲ್ಲಿ ಅವನು ಹಸ್ತಿನಾಪುರಕ್ಕೆ ಜೋಗಿಯಾಗಿ ಬರುವನು. ಆ ವೇಷದಲ್ಲಿ ತಾಯಿಯನ್ನು ಭಿಕ್ಷೆ ಬೇಡುವನು. ಜೋಗಿ ಮಗನಂತಿರುವ ಕಾರಣದಿಂದ ಅವನ ಮೇಲೆ ಕನಿಕರ ಹುಟ್ಟಿ ಅವಳು ಭಿಕ್ಷೆ ಕೊಡಲು ಒಪ್ಪುವಳು. ಅವನು ಅರ್ಜುನನ ಹೆಂಡಿರಾದ ಉಲೂಪಿ ಚಿತ್ರಾಂಗದೆಯರನ್ನು ಕೊಡು ಎನ್ನುವನು. ಕುಂತೀದೇವಿಯು ಧರ್ಮರಾಯನನ್ನು ಕೇಳಿ, ತಾನು ಕೊಟ್ಟ ಮಾತಿಗೆ ತಪ್ಪಲಾರೆನೆಂದು ಹಾಗೆಯೇ ಆಗಲಿ ಎನ್ನುವಳು. ಜೋಗಿಯು ಮಣಿಪುರದಲ್ಲಿ ಉಲೂಪಿ ಚಿತ್ರಾಂಗದೆಯರ ಅರಮನೆಗೆ ಬಂದು ಅವರ ಅತ್ತೆ ಅವರನ್ನು ತನಗೆ ದಾನಮಾಡಿರುವ ವಿಷಯವನ್ನು ಅವರಿಗೆ ಹೇಳುವನು. ಅವರು ಪರ ಪುರುಷನು ತಮ್ಮ ವಿಷಯದಲ್ಲಿ ಹೀಗೆ ಮಾತನಾಡುವುದು ಸಾಧ್ಯವಾಯಿತಲ್ಲಾ ಎಂದು ಆಗ್ರಹದಿಂದ ಅವನ ಮೇಲೆ ಒಂದು ಹುಲಿಯನ್ನೂ ಹಾವನ್ನೂ ಬಿಟ್ಟುನೋಡಿ ಅವು ಅವನಿಗೆ ತೊಂದರೆಮಾಡದೆ ಇರಲು ಭೀತರಾಗಿ ಇನ್ನು ಬದುಕಿರಬಾರದೆಂದು ಹೊರಟುಹೋಗಿ ದ್ರೌಪದಿಗೆ ಹೇಳುವರು. ಆಕೆ ನಕ್ಕು ಬಂದವನು ಜೋಗಿಯಲ್ಲ ಎನ್ನುವಳು. ಅವರು ಅಲ್ಲಿಂದ ಹೋಗಿ ಅತ್ತೆಗೆ ನಮಸ್ಕಾರಮಾಡಿ ಮುಂದಕ್ಕೆ ಹೊರಟು ಆಳವನ್ನೇ ಕಾಣದ ಭೀಮನ ಸರೋವರದಲ್ಲಿ ಹೋಗಿ ಧುಮುಕುವರು ; ಅದರಲ್ಲಿ ಅರ್ಧ ಅಡಿ ನೀರಾಗುವುದು ; ನಕುಲ ಸಹದೇವರ ಕೆರೆಯಲ್ಲಿ ಹೋಗಿ ಮುಳುಗುವರು ; ಅದು ಒಣಗಿ ಹೋಗುವುದು ; ನಾಗಸರೋವರದಲ್ಲಿ ಮುಳುಗೋಣವೆಂದು ಹೋಗುವರು. ಅರ್ಜುನನು ಹಿಂದೆಯೇ ಬಂದು ಅವರು ಹೋದ ದಾರಿಯಲ್ಲಿಯೇ ಹೋಗಿ ನಾಗಸರೋವರದ ಬಳಿ ಇವರು ನಾಗಕನ್ನಿಕೆಯರೊಡನೆ ಸ್ನಾನಮಾಡುತ್ತಿರುವಾಗ ಆಟಕ್ಕಾಗಿ ಅವರ ಸೀರೆಗಳನ್ನು ತೆಗೆದುಕೊಂಡು ದೂರ ಹೋಗಿ ಒಂದು ಮರದ ಕೆಳಗೆ ಮಲಗುವನು. ಸ್ನಾನವಾದಮೇಲೆ ಸುಂದರಿಯರು ವಸ್ತ್ರಧಾರಣಕ್ಕಾಗಿ ಈಚೆಗೆ ಬಂದು

ನೋಡುವಾಗ ಬಟ್ಟೆಗಳಿಲ್ಲದೆ ಇರುವಲ್ಲಿ, ನಾಗಕನ್ನಿಕೆಯೊಬ್ಬಳು ಇದು ಯಾರಿರಬಹುದೆಂದು ಹುಡುಕಿಕೊಂಡು ಹೋಗಿ ನೋಡಿ ಸ್ವಲ್ಪ ದೂರದಲ್ಲಿ ಜೋಗಿಯೊಬ್ಬನು ಮಲಗಿ ನಿದ್ರಿಸುತ್ತಿದಾನೆಂದೂ ಅವನ ತಲೆಯು ಬಳಿ ಬಟ್ಟೆಗಳು ಬಿದ್ದಿರುವುವೆಂದೂ ಹೇಳುವಳು. ಸುಂದರಿಯರು ತಾವು ಸ್ನಾನದಲ್ಲಿದ್ದಾಗ ತಮ್ಮನ್ನು ಇವನು ನೋಡಿದನಲ್ಲಾ ಎಂದು ಬಹು ಕೋಪಿಸಿಕೊಳ್ಳುವರು. ನಾಗಕನ್ನಿಕೆಯು ಕೋಪ ಬೇಡವೆಂದು ಹೇಳಿ ಹೋಗಿ ಅವನನ್ನು ಕಡಿಯುವಳು. ಅರ್ಜುನನು ಒಡನೆಯೇ ಸಾಯುವನು. ಅಲ್ಲಿ ಅವನ ಪ್ರಾಣವು ಉತ್ಕ್ರಮಿಸಿದ ಕ್ಷಣದಲ್ಲೇ ಇಲ್ಲಿ ಇವರಿಬ್ಬರ ಕೈಯಲ್ಲಿದ್ದ ಬಳೆಗಳು ಸಿಡಿದು ಬಿದ್ದುಹೋಗುವುವು. ಇದೇನು ಕೇಡು ಎಂದು ಯೋಚಿಸುವಲ್ಲಿ ತಮ್ಮೊಂದಿಗೆ ಹೀಗೆ ಸರಸಕ್ಕೆ ಬಂದಿದ್ದವನು ಯಾವ ಜೋಗಿಯೂ ಅಲ್ಲ, ತಮ್ಮ ಪತಿಯಾದ ಅರ್ಜುನನೇ ಎಂದು ಅವರಿಗೆ ತಿಳಿಯುವುದು. ಹೀಗೆ ತಮ್ಮ ಅಜ್ಞಾನದಿಂದ ಇಂತಹ ಭೀಕರ ಸಂಧಿಯುಂಟಾಯಿತಲ್ಲಾ ಎಂದು ಅವರು ಖಿನ್ನರಾಗಿರಲು ಆದಿಶೇಷನೋ ಯಾರೋ ಬಂದು ಅರ್ಜುನನನ್ನು ಬದುಕಿಸಿಕೊಡುವರು. ಅರ್ಜುನನು ಪತ್ನಿಯರನ್ನು ಕರೆದುಕೊಂಡು ಹಸ್ತಿನಾಪುರಕ್ಕೆ ಬರುವನು. ಕತೆ ಇನ್ನೂ ಮುಂದಕ್ಕೆ ಸಾಗುವಂತಿದ್ದಿತು. ಅದನ್ನು ನಾನು ಇಷ್ಟಕ್ಕೆ ಸಾಕು ಎಂದೆನು.

ಕತೆಯು ಚೆನ್ನಾಗಿದೆಯೆಂದು ನನಗೆ ತೋರುತ್ತದೆ. ಇದು ಭಾರತದಲ್ಲಿರುವ ಕತೆಯಲ್ಲ; ಜನಸಾಮಾನ್ಯದ ಕವಿಯೊಬ್ಬನು ಕಟ್ಟಿದ್ದು. ಭಾರತದ ವೀರರನ್ನೂ ಕೃಷ್ಣದೇವರನ್ನೂ ಕುರಿತ ಕತೆಗಳು ಜನರಲ್ಲಿ ಮೊಳೆತುವು ಇಂತಹವು ಅನೇಕವಿವೆ. ಇವುಗಳಲ್ಲಿ ಅನೇಕ ಕತೆಗಳು ಜೋಗಿಗಳಿಗೆ ಸಂಬಂಧಪಟ್ಟವು. ಪ್ರಾಯಶಃ ಹಾಡುವವರು ಜೋಗಿಗಳಾಗಿದ್ದುದರಿಂದ ವೀರರು ಜೋಗಿಯ ವೇಷದಲ್ಲಿ ಬಂದರೆಂದು ಹೇಳುತ್ತಿರುವಂತೆ ತೋರುತ್ತದೆ. ಹೇಳುವವನು ಸಾಮಾನ್ಯರಲ್ಲಿ ಒಬ್ಬನಾಗಿ ಸಾಮಾನ್ಯ ಜನಕ್ಕೆ ತಿಳಿಯಬೇಕೆಂದು ಹೇಳುವುದರಿಂದ ಕತೆಯ ಮಾತು ಸುಲಭವಾಗಿದೆ; ಕತೆಯಲ್ಲಿ ಸಾಮಾನ್ಯ ಜೀವನದ ವಿಷಯಗಳು ಬರುತ್ತವೆ. ಯಾವ ಭಾಗವೂ ಕೇಳುವವರ ಮನಸ್ಸಿನಿಂದ ನುಸುಳದಂತೆ

ಒಂದೊಂದು ಮುಖ್ಯವಾದ ಮಾತೂ ಎರಡೆರಡು ಸಲ ಬರುತ್ತದೆ. ಇದರ ಮುಖ್ಯ ಲಕ್ಷಣಗಳು ತಿಳಿಯುವಂತೆ ಈ ಹಾಡಿನ ಕೆಲವು ಭಾಗಗಳನ್ನು ಇಲ್ಲಿ ಬರೆದು ತೋರಿಸುತ್ತೇನೆ. ಇದರ ಆರಂಭ ಇದು:—

ಹಸ್ತಿನಾಪುರದ ಮುಂದೇ ಜೋಗ್ಯಪ್ಪ
ನಾಟ್ಯೇವುನಾಡುತವನೆ ಎಲೆ ರಾಯ
ಕುಂತಿಯರಮನೆಯ ಮುಂದೆ ಅರ್ಜುನ
ನಾಟ್ಯೇವುನಾಡುತವನೆ ಎಲೆ ರಾಯ
ಕುಂತ್ಯಮ್ಮ ನೋಡುತವಳೆ ಹಡದಮ್ಮ
ಮಗನನ್ನ ನೋಡುತವಳೆ ಎಲೆ ರಾಯ
ಕುಂತ್ಯಮ್ಮ ಜೋಗಪ್ಪಗೆ ಎಲೆ ರಾಯ
ನೋಡ್ಯವಗ್ಹೇಳುತಾಳೆ ಜೋಗ್ಯಪ್ಪ
ನಿನ್ನಂತ ಮಗನು ಒಬ್ಬ ಎಲೆ ಮಗನೆ
ನನ್ನ ಮಗನೊಬ್ಬನುಂಟು ಜೋಗ್ಯಪ್ಪ
ನಿನ್ನಂತೆ ಒಬ್ಬನುಂಟು ಜೋಗ್ಯಪ್ಪ
ಹನ್ನೆರಡು ವರುಷವಾಯ್ತು ಜೋಗ್ಯಪ್ಪ
ದೇಶಾಂತ್ರ ಹೋದನವನು ಎಲೆ ಮಗನೆ
ದೇಶಾಂತ್ರಹೋದನವನು

ದೇಶಾಂತ್ರ ಹೋದಾತನೂ ಜೋಗ್ಯಪ್ಪ
ಇನ್ನೂ ಬರಲಿಲ್ಲ ಮಗನು ಜೋಗ್ಯಪ್ಪ
ಎಲ್ಲೆಲ್ಲಿ ಸುತ್ತುತಾನೋ ನನ್ನ ಮಗ
ಎಲ್ಲೆಲ್ಲಿ ಅಲೆಯುತಾನೋ ನನ್ನಪ್ಪ
ಕಷ್ಟಗಳ ಪಡುತಲಿಹನೋ ಜೋಗ್ಯಪ್ಪ
ಎಂತೆಂತು ದುಡಿಯುತಿಹನೋ ಎಲೆ ಮಗನೆ
ನಿನ್ನಂತ ಮಗನು ಒಬ್ಬ ಜೋಗ್ಯಪ್ಪ
ಹನ್ನೆರಡು ವರುಷವಾಯ್ತು

ಹನ್ನೆರಡು ವರುಷವಾಯಿತು ಜೋಗ್ಯಪ್ಪ
ನೀನವನ ಕಂಡದುಂಟೆ ಎಲೆ ಮಗನೆ
ನನ್ನ ಮಗನನ್ನ ಕಂಡ್ಯ ಜೋಗ್ಯಪ್ಪ
ಬಂದವನ ಕೇಳಲಾಗಿ ಎಲೆ ರಾಯ
ಜೋಗ್ಯಪ್ಪ ಹೇಳುತವನೆ ಎಲೆ ರಾಯ
ಕುಂತ್ಯಂಗೆ ಹೇಳುತವನೆ ಹಡದಮ್ಮ
ನಾನಿನ್ನ ಮಗನ ಕಾಣೆ ಎಲೆ ತಾಯಿ
ಹನ್ನೆರಡು ವರುಷದ್ಹಿಂದೆ ಹಡದಮ್ಮ
ದೇಶಾಂತ್ರ ಹೋದ ಮಗನು ನನ್ನಮ್ಮ
ಏನಾಗಿ ಹೋಗಿರುವನೊ ಎಲೆ ತಾಯಿ
ಕದನದಲಿ ಮಡಿದಿರುವನೋ ಹಡದಮ್ಮ
ಜ್ವರದಲ್ಲಿ ಮಲಗಿರುವನೊ ಎಲೆ ತಾಯಿ
ಏನಾಗಿ ಹೋಗಿರುವನೋ

ಏನಾಗಿಹೋಗಿರುವನೋ ಹಡದಮ್ಮ
ಎಂದು ಜೋಗ್ಯಪ್ಪ ಹೇಳಿ ಎಲೆ ರಾಯ

ಇದಷ್ಟರಿಂದ ಕತೆಯನ್ನು ಹೇಳುವ ರೀತಿಯು ವ್ಯಕ್ತವಾಗಿರಬೇಕು. ಕವಿಯ ಊಹೆಯೂ ಆಶಯವೂ ಎಷ್ಟು ಉನ್ನತವಾದುದೆಂದು ಒಂದೆರಡು ಸಂದರ್ಭದಲ್ಲಿ ತಿಳಿಯುತ್ತದೆ. ಇಂಥ ಒಂದು ಸಂದರ್ಭವು ಕತೆಯನ್ನು ನಿರೂಪಿಸುವಲ್ಲಿ ಮೇಲೆಯೇ ಉಕ್ತವಾಗಿದೆ. ಯಾವನೋ ಬಂದು ತಮ್ಮ ವಿಷಯದಲ್ಲಿ ದುರಾಲೋಚನೆ ಮಾಡಿದನೆಂದೊಡನೆಯೇ ಬಾಳಿನಲ್ಲಿ ಬೇಸರ ಹುಟ್ಟುವ ಉಲೂಪಿ ಚಿತ್ರಾಂಗದೆಯರ ಏಕಾಗ್ರ ಪಾತಿವ್ರತ್ಯವು ಭಾರತ ಭೂಮಿಯಲ್ಲಿ ಮಾತ್ರ ಬಿಡುವ ಹೂ. ನಾಗ ಸರೋವರದಲ್ಲಿ ಸ್ತ್ರೀಯರು ಸ್ನಾನಕ್ಕೆ ಇಳಿದಿದ್ದಾಗ ಅಲ್ಲಿ ಹೋದ ಅರ್ಜುನನು ಅವರನ್ನು ನೋಡುವುದು ಮರ್ಯಾದೆಯಲ್ಲವೆಂದು ಒಂದು ಎಲೆಯನ್ನು ಕಿತ್ತು ಕಣ್ಣಿಗೆ ಮರೆಮಾಡಿಕೊಂಡು ಹೋಗಿ ಅವರ ವಸ್ತ್ರಗಳನ್ನು ತೆಗೆದುಕೊಂಡು ಹೋದನಂತೆ.

ಹೇ ಗುರುವೆ
ದೋಸವಾದೀತು ಎಂದು ಎಲೆ ರಾಯ
ತೊಗ್ಗೆಯ ಎಲೆಯ ಕಿತ್ತು ಹೇ ಗುರುವೆ
ಕಣ್ಣಾ ಮರೆಮಾಡಿಕೊಂಡು

ಎಂದು ಕವಿಯು ಹೇಳುತ್ತಾನೆ. ಈ ಕವಿಯ ಕಾಲದಲ್ಲಿ ಜನರಲ್ಲಿ ವಿನಯವು ಎಷ್ಟು ಉನ್ನತ ಸ್ಥಿತಿಯನ್ನು ಹೊಂದಿತ್ತೆಂಬುದನ್ನು ಇದು ಸೂಚಿಸುತ್ತದೆ. ಈ ಕವಿಯ ಊಹೆಯು ಇವನ ಆಶಯದಂತೆಯೇ ಉತ್ತಮವಾದದ್ದು. ಉಲೂಪಿ ಚಿತ್ರಾಂಗದೆಯರು ಮುಂದೆ ಮುಂದೆ ಹೋಗಲು ಹಿಂದೆ ಹೋದ ಅರ್ಜುನನು ಅವರ ದಾರಿಯನ್ನು ಕಂಡು ಕೊಂಡದ್ದು ಹೇಗೆ? ಒಂದೆರಡು ಕಡೆ ಸಂದೇಹ ಉಂಟಾಯಿತಂತೆ; ಆದರೆ ಆ ಕೆರೆಗಳ ಬಳಿ ಕಲ್ಲುಗಳ ಮೇಲೆ ಈ ಸುಂದರಿಯರು ಅಡಿಯಿಟ್ಟದ್ದರಿಂದ ಅವುಗಳ ಮೇಲೆ ಕುಂಕುಮದ ಬಣ್ಣದ ಗುರುತು ಬಿದ್ದಿದ್ದಿತಂತೆ. ಆ ಗುರುತನ್ನು ನೋಡಿ ಅವನು ದಾರಿಯನ್ನು ತಿಳಿದನು. ಅವು ಇನ್ನೆಂತಹ ಸೌಂದರವಾದ ಸುಕುಮಾರವಾದ ಅಡಿಗಳು! ಹುಡುಗಿಯರು ಸ್ನಾನಮಾಡಿ ಅಲಂಕಾರ ಮಾಡಿಕೊಂಡದ್ದನ್ನು ಕವಿಯು ವರ್ಣಿಸುತ್ತಾನೆ.—

ತಣ್ಣೀರು ಜಳಕಮಾಡಿ ಬಾಲ್ಯೇರು
ಬಿಸಿ ನೀರು ಜಳಕಮಾಡಿ ಎಲೆ ರಾಯ
ರತ್ನ ಬಟ್ಟಾಲು ಶ್ಯಾಲೆ ಆ ಬಾಲೆ
ವೇಗದಲಿಉಟ್ಟುಕೊಂಡು ಎಲೆ ರಾಯ
ಕಾವಿ ರತ್ನದ ಕುಬುಸ ಎಲೆ ರಾಯ
ಕುಬುಸವನು ಜಿಗಿದುಕೊಂಡು....

ಚೆಂಡುಮಲ್ಲಿಗೆಯ ಮುಡಿದು ಎಲೆ ರಾಯ
ಜಾಜಿಮಲ್ಲಿಗೆಯ ಮುಡಿದು ಎಲೆ ರಾಯ
ದುಂಡುಮಲ್ಲಿಗೆಯ ಮುಡಿದು ಹೇ ಗುರುವೆ
ಶ್ಯಾವಂತಿ ಹೂವು ಮುಡಿದು ಎಲೆ ಗುರುವೆ

ಪುಷ್ಪಗಂಧವನು ಮುಡಿದು ಎಲೆ ಗುರುವೆ
ಕಾಮುಕಸ್ತೂರಿಯು ಮುಡಿದು ಎಲೆ ರಾಯ
ಹಾಲುಮಲ್ಲಿಗೆಯು ಮುಡಿದು ಹೇ ಗುರುವೆ
ಸೀರುಮಲ್ಲಿಗೆಯು ಮುಡಿದು....

ಉಲೂಪಿ ಚಿತ್ರಾಂಗದೆಯರು ಜೋಗಿಯ ಮೇಲೆ ಬಿಟ್ಟ ಹುಲಿ ಹೀಗೆ ಬಂದಿತಂತೆ :—

ಸೂಪಿ ಚಿತ್ರಾಂಗಿಯವರು ಅಮ್ಮಯ್ಯ
ಹುಲಿಯ ಬಿಡುತಾರೆ ನೋಡ್ರಿ ಹೇ ಗುರುವೆ
ಅವರ ಮನೆ ಒಳಗೆ ನೋಡ್ರಿ ಅಮ್ಮಯ್ಯ
ಹುಲಿಯ ಬಿಡೊ ವ್ಯಾಳ್ಯದೊಳಗೆ ಹುಲಿರಾಯ
ಕಡೆಯ ಬಾಗಲಿಗೆ ಬಂತು ಅಮ್ಮಯ್ಯ
ಚಿನ್ನದರಮನೆಯ ಬಿಟ್ಟು ಅಮ್ಮಯ್ಯ
ಗಂಧದರಮನೆಯ ಬಿಟ್ಟು ಅಮ್ಮಯ್ಯ
ಗಚ್ಚಿನರಮನೆಯ ಬಿಟ್ಟು....

ಗಚ್ಚಿನರಮನೆಯ ಬಿಟ್ಟು ಹುಲಿರಾಯ
ಕಡೆಯ ಬಾಗಲಿಗೆ ಬಂತು ಮಾದೇವ
ಗುಡುಗು ಗುಡಿದಂತೆ ಗುಡಿದು ಎಲೆ ರಾಯ
ಶಿಡಿಲು ಶಿಡಿದಂತೆ ಶಿಡಿದು ಹೇ ಗುರುವೆ
ಜೋಗೀನ ನೋಡುತ್ತೈತೆ ಹೇ ಗುರುವೆ
ನೋಡಿ ತಾನಡಿಯುತ್ತೈತೆ ಮಾಸ್ವಾಮಿ
ಹಾಲ್ಹೊಯ್ದು ಸಾಕಿದವನು ಆ ಸ್ವಾಮಿ
ನೀರ್ಹೊಯ್ದು ಸಾಕಿದವನು ಆ ಸ್ವಾಮಿ
ಅನ್ನ ನೀರಿಟ್ಟ ಸ್ವಾಮಿ ಎಲೆ ರಾಯ
ಕಾಲ ಗುರುವಿಗೆ ಬಂದು ಹುಲಿರಾಯ
ನಾಲಿಗೆಯ ಚಾಚುತ್ತೈತೆ ಎಲೆ ರಾಯ
ಕಾಲನ್ನ ನೆಕ್ಕುತ್ತೈತೆ ಹುಲಿರಾಯ

ಸರಸಾನ ಆಡುತ್ತೈತೆ ಹೇ ಗುರುವೆ
ಸ್ವಾಮಿ ಜತೆಗಾಡುತ್ತೈತೆ....

ಹಾಲು ನೀರು ಕೊಟ್ಟು ಸಾಕಿದ ಯಜಮಾನನನ್ನು ಜೋಗಿಯ ವೇಷದಲ್ಲೂ ಗುರುತಿಸಿದ ಹುಲಿ ರಾಜಕನ್ಯೆಯರು ಜೋಗಿಯನ್ನು ಕೊಲ್ಲಲೆಂದು ತನ್ನನ್ನು ಬಿಟ್ಟರೂ ಆತನೊಂದಿಗೆ ಆಡುವುದರಲ್ಲಿ ತೊಡಗಿತು. ಮೃಗಗಳ ವಿಷಯದಲ್ಲಿ ಕವಿಯು ಇಂಥ ತಿಳಿವನ್ನು ತೋರಿಸಿರುವುದು ಇಲ್ಲಿ ಮಾತ್ರವೇ ಅಲ್ಲ. ಮಣಿಪುರದಿಂದ ರಾಜಕನ್ಯೆಯರು ಹೊರಟುಹೋಗುವಾಗ ಬಾಗಿಲು ಹಾಕಿಕೊಂಡು ಹೋದರಂತೆ. ಅವರು ಸಾಕಿದ್ದ ಒಂದು ಬೆಕ್ಕು ಅಲ್ಲಿ ಹಿಂದೆ ನಿಂತಿತು. ಸಾಕಿದವರು ಹೊರಟು ಹೋದದ್ದರಿಂದ ಬೆಕ್ಕು—

ಬಿಳಿಯ ಬೆಕ್ಕಿನ ಕೊರಳಿಗೆ ಎಲೆ ರಾಯ
ಮುತ್ತು ಪರಕೆಗಳು ಕಟ್ಟಿ ಹೇ ಗುರುವೆ
ಆ ಮೂಲೆಯಿಂದ ನೋಡ್ರಿ ಭಗವಂತ
ಈ ಮೂಲೆ ಕಡೆಗೆ ಬಂದು ಭಗವಂತ
ಮೋಡೋಡಿ ತಿರುಗುತ್ತೈತೆ ಎಲೆ ಗುರುವೆ
ಈ ಮೂಲೆ ಕಡೆಗೆ ಬಂದು ಭಗವಂತ
ಮೋಡ್ಯಾಡಿ ಕೂರುತ್ತೈತೆ ಎಲೆ ಗುರುವೆ
ಮೂಲೆ ಮೂಲೆ ಸುತ್ತುತ್ತೈತೆ ಹೇ ಗುರುವೆ
ಜಂತೆ ಜಂತೆ ಹತ್ತುತ್ತೈತೆ....

ಬೇಕಾದವರು ಹೊರಟುಹೋದಮೇಲೆ ಬೆಕ್ಕು ಮನೆಯಲ್ಲಿ ಹೀಗೆಯೇ ಮಾಡುವುದು. ಹಳ್ಳಿಗಳಲ್ಲಿ ಎಲ್ಲರಿಗೂ ಇದು ಗೊತ್ತು. ಕವಿಯು ಮಣಿಪುರದ ರಾಜಕನ್ನಿಕೆಯರು ಹೊರಟುಹೋದಮೇಲೆ ಅರಮನೆಯಲ್ಲಿ ಹೀಗೆ ಆಯಿತೆಂದು ತನ್ನ ಹಳ್ಳಿಯ ಅನುಭವವನ್ನು ಅವರ ಮನೆಗೆ ಆರೋಪಿಸಿದ್ದಾನೆ. ಇದು ನೈಸರ್ಗಿಕವಾದ ಕವನದ ತತ್ತ್ವ ದೃಷ್ಟಿ. ಅಲ್ಲದೆ ಇದರಲ್ಲಿ ತೋರುವುದೇನೆಂದರೆ—ಕವಿಯು ಕತೆಯಲ್ಲಿ ಪ್ರಸಿದ್ಧಿಗಾಗಿ ಉಲೂಪಿ ಚಿತ್ರಾಂಗದೆ ಕುಂತಿ ಅರ್ಜುನರೆಂದು ಹೆಸರುಗಳನ್ನು

ಹಾಕುತ್ತಿರುವವನಾದರೂ ಅವನು ವರ್ಣಿಸುತ್ತಿರುವುದು ಸಾಮಾನ್ಯರ ಜೀವನವನ್ನೇ. ಮುಖದ ಹೋಲಿಕೆಯಿಂದ ಜೋಗಿಯ ಮೇಲೆ ಕನಿಕರವನ್ನು ತೋರುವ ತಾಯಿಯಾದ ಕುಂತಿ, ಅವಳಿಗೆ ತಮಾಷೆಗೆ ಸುಳ್ಳು ಹೇಳುವ ಅರ್ಜುನ, ಈ ವ್ಯಕ್ತಿಗಳೂ ಕತೆಯ ಇತರ ಆವರಣ ವೆಲ್ಲವೂ ಹಳ್ಳಿಯ ಜನರ ಜೀವನದಲ್ಲಿಯ ವ್ಯಕ್ತಿಗಳೂ ಆವರಣವೂ ಆಗಿವೆ. ರಾಜಕನ್ಯೆಯರು ಪ್ರಯಾಣಮಾಡಬೇಕಾದರೆ ಅರಮನೆಯ ಬಾಗಿಲನ್ನು ಹಾಕಿಕೊಂಡು ಹೋದರಂತೆ. ಅರಮನೆಯಲ್ಲಿ ಆಳಿಲ್ಲ; ರಾಜಕನ್ಯೆ ಯರಿಗೆ ಜೊತೆ ಇಲ್ಲ. ಇವರಿಬ್ಬರೂ ಕವಿಯ ಊರಿನ ಇಬ್ಬರು ಹುಡುಗಿಯರು; ಅರಮನೆಯು ಅವನ ಊರಿನ ಒಂದು ಮನೆ. ಅದ ರಿಂದಲೇ ಬೆಕ್ಕು ಹತ್ತುವುದಕ್ಕೆ ಅಲ್ಲಿ ಜಂತೆ ಇರುವುದು. ದ್ರೌಪದಿಯ ಬಳಿಗೆ ಬಂದ ಉಲೂಪಿ ಚಿತ್ರಾಂಗದೆಯರಿಗೆ ದ್ರೌಪದಿಯು ಹೇಳುವ ಮಾತೂ ಹಳ್ಳಿಯ ಅಕ್ಕಂದಿರು ಕಿರಿಯರಿಗೆ ಹೇಳುವ ಸರಸದ ಮಾತೇ. ಅರಮನೆಯನ್ನು ಬಿಟ್ಟು ಏಕೆ ಬಂದಿರಿ ತಂಗಿಯರಾ?

ಮಣಿಪುರದ ಪಟ್ನದೊಳಗೆ ಅಮ್ಮಯ್ಯ
ಉಪ್ಪು ಹುಣಸ್ಹಣ್ಣು ಕಾಣ್ರೆ ಅಮ್ಮಯ್ಯ
ನಿಮಗೆ ಕಡಿಮ್ಯಾದವೇನ್ರೆ ತಂಗೀರು
ಶಾಲೆಕುಪ್ಪುಸವು ಕಾಣ್ರೆ ತಂಗೀರು
ಸಾಲದೆ ಹೋದವೇನ್ರೆ ಅಮ್ಮಯ್ಯ
ಮಡಿಮ ವಸ್ತ್ರಗಳು ಕಾಣ್ರೆ ಮಡಿವೆಗಳು
ಕಮ್ಯಾಗವೇನ್ರೆ ತಂಗೀ....

೮

ಕವಿತೆಯು ಜೀವನದ ನಿಸರ್ಗ ಕುಸುಮ; ಪಾಂಡಿತ್ಯದ ಕೃತಕ ಫಲವಲ್ಲ. ಇದು ನಮ್ಮವರಿಗೆ ತಿಳಿಯದೆ ಇದ್ದ ವಿಷಯವಲ್ಲ. ಕವಿ ತೆಯು ರಸ ಪ್ರಮುಖವಾದ ಮಾತು, ಭಾವ ಪ್ರಮುಖವಾದ ಮಾತಲ್ಲ. ಇದನ್ನು ನಮ್ಮವರು ತಿಳಿದಿದ್ದರು. ಅದರಿಂದಲೇ ನಮ್ಮ ಸಾಹಿತ್ಯ ಶಾಸ್ತ್ರಗಳಲ್ಲಿ ನಮ್ಮ ಪೂರ್ವಿಕರು ರಸ ನಿರೂಪಣಕ್ಕೆ ಅಷ್ಟು ಹೆಚ್ಚಾದ

ಅವಕಾಶವನ್ನು ಕೊಟ್ಟಿರುವರು. ಆದರೆ ಈಚೆಗೆ ನಾವು ಇದನ್ನು ಮರೆತಿದ್ದೇವೆ. ಉತ್ತಮ ಕಾವ್ಯದಿಂದ ಲಕ್ಷಣಗಳನ್ನು ಕಲಿತೆವು: ಆಮೇಲೆ ಆ ಲಕ್ಷಣದಂತೆ ಬರೆದರೆಯೇ ಉತ್ತಮ ಕಾವ್ಯವೆಂದು ಹಠ ಮಾಡುತ್ತಿದ್ದೇವೆ. ನ್ಯಾಯವಾಗಿ ನೋಡಿದರೆ ಕಾವ್ಯವು ಧರಿಸಬಹು ದಾದ ರೂಪಗಳಿಗೆ ಮೊದಲು ಕೊನೆಯಿಲ್ಲ; ಯಾವ ರೂಪವನ್ನು ಅದು ಧರಿಸಿದರೂ ಅದು ರಸವನ್ನೊಳಗೊಂಡಿದ್ದರೆ ಉತ್ತಮ ಕಾವ್ಯ. ಹೇಳು ವವನ ಭಾವನೆಯು ಅದರಲ್ಲಿ ರೂಪುಗೊಂಡಿದ್ದು ಅದರಿಂದ ಆ ಭಾವನೆಯು ಓದುವವನ ಮನಸ್ಸನ್ನು ತಟ್ಟುವುದಾದರೆ ಆ ಕಾವ್ಯವು ಸಾರ್ಥಕ ವಾಯಿತು. ಕೃತಿಯಲ್ಲಿ ವ್ಯಾಕರಣ ಸ್ವಲ್ಪ ಹೆಚ್ಚು ಕಡಿಮೆಯಾಗಿರ ಬಹುದು; ಆದರೆ ರಸವ್ಯಕ್ತಿಯುಂಟಾಗಿದ್ದರೆ ಅದು ಕಾವ್ಯವಾಗದೆ ಹೋಗಲಾರದು. ಈ ದೃಷ್ಟಿಯಿಂದ ನೋಡಿದರೆ, "ಕರುನಾಟದ ಹೆಣ್ಣೇ ನೀ" ಎನ್ನುವುದು ಕಾವ್ಯ; "ಹೋದೆಲ್ಲೊ ನೀ ರಂಗ, ಹೋದೆಲ್ಲೊ ನೀ ಸಗುಸ" ಎನ್ನುವುದು ಕಾವ್ಯ; ಸಾಕಿದವರು ಬಾಗಿಲು ಹಾಕಿಕೊಂಡು ಹೋಗಲು ಬೆಕ್ಕು ಜಂತೆ ಜಂತೆಯ ಮೇಲೆ ಓಡಿಯಾ ಡಿದ್ದನ್ನು ವರ್ಣಿಸುವ ಈ ಜೋಗಿಯ ಕತೆಯ ವರ್ಣನೆಯು ಕಾವ್ಯ. ಇವುಗಳಲ್ಲಿ ಕವಿಯು ತನ್ನ ಹೃದಯದ ಒಂದು ಭಾವನೆಗೆ ರೂಪವನ್ನು ಕೊಡಲು ಯತ್ನಮಾಡಿದ್ದಾನೆ; ಆ ಯತ್ನದಲ್ಲಿ ಸಿದ್ಧಿಯನ್ನು ಪಡೆದಿದ್ದಾನೆ. ಇದೇ ಕವಿತೆ. ಈ ರೀತಿಯ ಕವನವು ಸಾಮಾನ್ಯರಲ್ಲಿ ಹರಡಿದ ಹಾಗೆಲ್ಲ ಮೇಲಣ ಅಂತಸ್ತುಗಳಲ್ಲಿ ಅತ್ಯುತ್ತಮ ಕಾವ್ಯವು ನಿರ್ಮಾಣವಾಗುವ ಸಂದರ್ಭವು ಹೆಚ್ಚುವುದು. ಈಗ ಕೆಲವು ವರುಷಗಳ ಹಿಂದೆ ನಮ್ಮ ಸೀಮೆಯಲ್ಲಿ ಎಲ್ಲೆಲ್ಲಿಯೂ ಒಬ್ಬೊಬ್ಬರು ಕವಿ ಎಂದು ಹೆಸರನ್ನು ಪಡೆ ದಿದ್ದರು. ಒಂದು ಹಾಡು, ಒಂದು ಲಾವಣಿ, ಒಂದು ಕಗ್ಗವನ್ನು ಯಾರಾದರೂ ಬರೆದರೆ ಅವನನ್ನು ಜನರು ಕವಿ ಎನ್ನುವರು. ಈಗ ಕವಿ ಎಂದರೆ ಇಂಗ್ಲಿಷಿನಲ್ಲಿ ಮಾತ್ರ ಇರತಕ್ಕ ಒಂದು ರೀತಿಯ ಜನ, ಅಥವಾ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಹಿಂದೆ ಗ್ರಂಥಗಳನ್ನು ಬರೆಯು ತ್ತಿದ್ದ ವಿಚಿತ್ರ ವ್ಯಕ್ತಿಗಳು ಎಂದು ಭಾವನೆಯುಂಟಾಗಿದೆ. ನಮ್ಮ ಜನರಲ್ಲಿ ಕಾವ್ಯ ಪರಿಚಯವು ಹಿಂದಿನಂತೆ ಮತ್ತೆ ಉಂಟಾಗುವಂತೆ

ಮಾಡುವುದು ನಮ್ಮೆಲ್ಲರ ಕರ್ತವ್ಯ. ಹೀಗಾಗಿ ಜನರಲ್ಲಿ ರಸಜ್ಞತೆಯು ಹೆಚ್ಚಬೇಕು; ಕಾವ್ಯಾಭಿರುಚಿಯುಂಟಾಗಬೇಕು. ಕಲ್ಪನಾ ಶಕ್ತಿಯುಳ್ಳವನು ಪಂಡಿತನಲ್ಲದಿದ್ದರೂ ಪ್ರಾಸವಿಟ್ಟೋ ಪ್ರಾಸಬಿಟ್ಟೋ ಪದ್ಯಗಳನ್ನು ರಚಿಸುವಂತಾಗಬೇಕು. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಇಂತಹ ಯಾರೋ ಒಬ್ಬಾತನು, "ಕೇಳು ಜನಮೇಜಯ ಧರಿತ್ರೀಪಾಲ" ಎಂದು ಮೊದಲಾದ ಕುಮಾರ ವ್ಯಾಸನ ಪದ್ಯಗಳನ್ನು ಓದಿಯೋ ಕೇಳಿಯೋ ಆ ಷಟ್ಪದಿಯ ಗತಿಯು ತಲೆಯಲ್ಲಿ ನರ್ತಿಸುತ್ತಿದ್ದಾಗ ಹೀಗೆಂದು ಮಾತುಗಳನ್ನು ಸೇರಿಸಿದನು:—

ದಾರವಿಲ್ಲದ ಹಾರವಯ್ಯನ
ಲಿಂಗವಿಲ್ಲದ ಜಂಗಮಯ್ಯನ
ದಾಡಿಯಿಲ್ಲದ ಸಾಬರಯ್ಯನ ನಂಬ ಬೇಡೆಂದ ॥

ಭಾಮಿನೀ ಷಟ್ಪದಿಯ ಗತಿಯೇನೋ ಸರಿ. ಅದರಲ್ಲಿ ಸಾಮಾನ್ಯ ಪ್ರಾಸವಿಲ್ಲ. ದಾರ, ಹಾರ, ಲಿಂಗ, ಜಂಗ ಎಂದು ಪಾದ ಪಾದದಲ್ಲಿ ಒಳಪ್ರಾಸವಿದೆ. ದಾ, ಸಾ ಎಂದು ಮೂರನೆಯ ಪಾದದಲ್ಲಿ ಸ್ವರ ಸಾಮರಸ್ಯವಿದೆ. ಮಾತು ಸೊಗಸಾಗಿದೆ. ಹಾಸ್ಯವು ಮೃದುವಾಗಿದೆ. ಯಾವ ಒಂದು ಜಾತಿಯವರೂ ಇನ್ನೊಬ್ಬರಿಗೆ ಶಿಕ್ಷೆಯಾಯಿತು ಎಂದು ಉಬ್ಬುವಂತಿಲ್ಲ. ಇಂಥ ಕವಿತಾ ಶಕ್ತಿಯು ಸಾಮಾನ್ಯ ಜನರ ಕಾವ್ಯ ಪರಿಚಯದ ಫಲ; ಅವರ ಕಾವ್ಯ ರಸಜ್ಞತೆಯ ಚಿಹ್ನೆ. ಇಂಥ ಶಕ್ತಿಯು ಜನರಲ್ಲಿ ವಿಸ್ತಾರವಾಗಿ ಹಬ್ಬಿ, ಹಳ್ಳಿ ಹಳ್ಳಿಯಲ್ಲಿಯೂ ಹುಡುಗರು ತಮ್ಮ ಮಾತೃಭಾಷೆಯ ನಿಸರ್ಗ ಕವಿತೆಯನ್ನು ಕೇಳಿ ರಾಗ ಪರಿಪಾಕವನ್ನು ಪಡೆದು, ಇವರಲ್ಲಿ ಕೆಲವರು ಭಾಷೆಯನ್ನು ಚೆನ್ನಾಗಿ ಕಲಿತು ಉತ್ತಮ ಕವಿತೆಗಳನ್ನು ನೋಡಿ ಅವುಗಳ ರೀತಿಯಲ್ಲಿ ತಮ್ಮ ಭಾವನೆಗಳಿಗೆ ರೂಪನ್ನು ಕೊಟ್ಟರೆ, ಅವರ ಕವಿತೆಯು ಉತ್ತಮ ಕವಿತೆಯಾಗುವುದು. ಹೊಸ ಸಂದರ್ಭದಲ್ಲಿ ಬಂದರೆ ಇಂಥ ಕವಿತೆಯು ಹೊಸ ಲಕ್ಷಣಗಳನ್ನು ಕೆಲವನ್ನು ತೋರಬಹುದು; ಆದರೂ ಸಾಂಪ್ರದಾಯಿಕವಾಗಿ ಬಂದಿರುವುದರಿಂದ ಸಂಪ್ರದಾಯದ ಲಕ್ಷಣಗಳನ್ನೂ ತೋರುವುದು; ಜನರಿಗೆಲ್ಲ ಹೊಸದಾಗಿ ಕಾಣದೆ ಇರುವುದು. ಪಂಡಿತ

ಕೃತವಾದ ಕಾವ್ಯ ಮಾತ್ರ ಇರುವ ಜನರಲ್ಲಿ ಹಿಂದಣ ಲಕ್ಷಣದಂತಲ್ಲದೆ ಬೇರೆ ಹೇಗೆ ಬರೆದರೂ ಕಾವ್ಯಕ್ಕೆ ಕಾವ್ಯವೆಂಬ ಹೆಸರು ಇಲ್ಲದೆ ಹೋಗುತ್ತದೆ. ಇದು ಪಾಂಡಿತ್ಯದ ದೋಷ, ಸಮಗೇಸು ಎಂದು ನಾವು ಹೇಳುವಂತಿಲ್ಲ. ಪಂಡಿತರು ಯಾವುದನ್ನು ಒಪ್ಪರೋ ಅದನ್ನು ಪಾಮರರು ಸುಲಭವಾಗಿ ಒಪ್ಪುವುದಿಲ್ಲ. ಹೀಗಾಗಿ ಹೊಸ ಕಾವ್ಯವು ಉತ್ತಮವಾದುದಾದರೂ ಜನರಲ್ಲಿ ಬಳಕೆಗೆ ಬರುವುದು ಸಾವಕಾಶವಾಗುವುದು. ಇದು ಜನರ ಬೆಳೆವಣಿಗೆಯನ್ನು ತಡೆಯುತ್ತದೆ. ಈಗ ನಮ್ಮ ಕಾವ್ಯ ಪ್ರಪಂಚದಲ್ಲಿ ಹೊಸ ಮಾರ್ಗಗಳನ್ನು ಕಂಡು ಮುಂದುವರಿಯುವ ಅಪೇಕ್ಷೆಯೂ ಶಕ್ತಿಯೂ ಜನರಲ್ಲಿ ಉಂಟಾಗುವಂತೆ ಮಾಡುವುದು ಆವಶ್ಯಕವಾಗಿದೆ. ಹೀಗೆ ಮಾಡುವುದರಲ್ಲಿ ನಮ್ಮ ದೇಶದಲ್ಲಿ ವಾಡಿಕೆಯಾಗಿರುವ ಸಾಂಗತ್ಯ, ಲಾವಣಿ ಮುಂತಾದುವನ್ನು ಸೇರಿಸಿ ಪ್ರಕಟಮಾಡುವುದು ಅತಿ ಮುಖ್ಯವಾದ ಕೆಲಸ. ಇದನ್ನು ಕೈಕೊಂಡು ಯಾರು ಧನ್ಯರಾಗುವರೊ! ಕೆಲಸವಾದರೋ ಅಷ್ಟು ಕಷ್ಟವಾದದ್ದಲ್ಲ; ಅದನ್ನು ಮಾಡುವವರಿಗೆ ಹೆಸರುಂಟು, ಸಂತೋಷವುಂಟು.

1101—25. ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು ಸಿಟಿ.

## ಶ್ರೀನಿವಾಸರಚಿತ.

---

## ೧. ಕೆಲವು ಸಣ್ಣ ಕತೆಗಳು.

"ಈ ಪುಸ್ತಕದಲ್ಲಿ ಮುಖ್ಯವಾಗಿ ವಿನೋದಕರವಾದ ಮತ್ತು ವ್ಯವಹಾರಜ್ಞಾನವನ್ನೊಳಗೊಂಡ ಹತ್ತು ಕತೆಗಳುಂಟು . . ಕತೆಗಳನ್ನು ಹೇಳುವಲ್ಲಿ ಈ ಗ್ರಂಥಕಾರರು ನೈಪುಣ್ಯವನ್ನು ಚೆನ್ನಾಗಿ ವ್ಯಕ್ತಪಡಿಸಿರುವರು ಕನ್ನಡ ಭಾಷೆಯಲ್ಲಿ ಈ ಮಾದರಿಯ ಒಳ್ಳೆಯ ಕಥಾಪುಸ್ತಕಗಳನ್ನು ನಾವು ಪ್ರಾಯಕವಾಗಿ ನೋಡಿಲ್ಲ . ."—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ.

**ಬೆಲೆ ರೂ. ೧—೦—೦.**

## ೨. ಬಿನ್ನಹ.

"ಇದೊಂದು ಅತ್ಯುತ್ತಮವಾದ ಗೀತಾವಳಿ. 'ನಿರೀಕ್ಷೆ,' 'ವೈಶಾಖದಲ್ಲಿ,' 'ದನಕಾಯುವ ಹುಡುಗರು' ಮೊದಲಾದ ಗೀತಿಕೆಗಳಲ್ಲಿ ತೋರಿಬರುವ ಕವಿಯ ಕಲ್ಪನಾಸಾಮರ್ಥ್ಯ ವರ್ಣನಾಚಾತುರ್ಯಾದಿಗಳು ಅಸಾಮಾನ್ಯವಾದುವು. ಮೃದು ಮಧುರವಾದ ಮಾತುಗಳಿಂದ ಇಷ್ಟು ಲಲಿತವಾದ ಶೈಲಿಯಲ್ಲಿ ಪ್ರಕೃತಿಯ ಸೊಬಗನ್ನು ಕಣ್ಣಿಗೆ ಕಟ್ಟಿದಂತೆ ಇಷ್ಟು ಮನೋಹರವಾಗಿ ವರ್ಣಿಸುವ ಗೀತಿಕೆಗಳು ಕನ್ನಡ ಸಾಹಿತ್ಯದಲ್ಲಿ ಅಪೂರ್ವವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು."—ಟಿ ಎಸ್ ವಿ (ಬೆಂಗಳೂರು ಸೆಂಟ್ರಲ್ ಕಾಲೇಜ್, ಕನ್ನಡ ಅಸಿಸ್ಟೆಂಟ್ ಪ್ರೊಫೆಸರ್ ಮ|| ರಾ|| ಟಿ. ಎಸ್ ವೆಂಕಣ್ಣಯ್ಯ, ಎಂ.ಎ, ಅವರು.)

**ಬೆಲೆ ಆಣೆ ೦—೫—೦.**

## ೩. ಶಾನ್ತಾ (ಸಣ್ಣ ದೃಶ್ಯ).

(ಋಷ್ಯಶೃಂಗೋಪಾಖ್ಯಾನ)

"ಈ ಗ್ರಂಥಕರ್ತರ ಕಲ್ಪನಾಚಾತುರ್ಯವನ್ನೂ ಲೋಕವ್ಯವಹಾರವನ್ನು ಪ್ರತಿಬಿಂಬಿಸುವ ಕೌಶಲ್ಯವನ್ನೂ ವರ್ಣನೆಗಳ ಸ್ವಾರಸ್ಯವನ್ನೂ ಉದಾರಸೂಕ್ತಿಗಳನ್ನೂ ಸರಸಹಾಸ್ಯಗಳನ್ನೂ ಲಲಿತವಾಗಿಯೂ ಭಾವಗರ್ಭಿತವಾಗಿಯೂ ಇರುವ ಕನ್ನಡ ಶೈಲಿಯನ್ನೂ ಅನುಭವಿಸಿರತಕ್ಕವರಿಗೆ ಈ ಹೊಸ ಗ್ರಂಥದ ಪರಿಚಯವನ್ನು ಉಪಚಾರ ಸ್ತೋತ್ರಗಳಿಂದ ಮಾಡಿಕೊಡಬೇಕಾಗಿಲ್ಲ. . . ಕನ್ನಡದಲ್ಲಿ ಬಹುಕಾಲದಿಂದ ಬಂದ ಸಂಪ್ರದಾಯವನ್ನು ಅನುಸರಿಸಿ ರಚಿತವಾಗುವ ಗ್ರಂಥರಾಶಿಯನ್ನು ಓದಿ ಬೇಸರಪಟ್ಟು ಹೊಸಮಾರ್ಗದಲ್ಲಿ ಹೊಸ ಭಾವಗಳನ್ನು ತೋರಿಸಿ ಕಲ್ಪನಾಶಕ್ತಿಯನ್ನು ಕುದುರಿಸಬಲ್ಲ ಕಾವ್ಯಗಳನ್ನು ನಿರೀಕ್ಷಿಸಿಕೊಂಡಿರತಕ್ಕವರಿಗೆ ಶ್ರೀನಿವಾಸರ ಲೇಖನಗಳು ಬಹಳ ಸಂತೋಷವನ್ನು ಕೊಡುತ್ತವೆ."—ಅರ್ಥಸಾಧಕ ಪತ್ರಿಕೆ

**ಬೆಲೆ ಆಣೆ ೦—೬—೦.**

## ೪. ಸಾವಿತ್ರಿ.

"ಕೆಲವು ಸಣ್ಣ ಕತೆಗಳು, ಬಿನ್ನಹ—ಮೊದಲಾದ ಸಣ್ಣ ಸಣ್ಣ ಒಡವೆಗಳನ್ನು ಹೊಸ ಮೆರುಗಿನಿಂದ ಕನ್ನಡನುಡಿವೆಣ್ಣಿಗೆ ತೊಡಿಸಿರುವ ಈ ಲೇಖಕರು ವಾಚಕರಿಗೆ ಹೊಸಬರಲ್ಲ. ಪುರಾಣಪ್ರಸಿದ್ಧಳಾದ ಸಾವಿತ್ರಿಯ ಕಥೆಯು ಎಲ್ಲರಿಗೂ ಗೊತ್ತೇ ಇದ್ದರೂ ಅದು ಇದರಲ್ಲಿ ಚಮತ್ಕಾರವಾದ ದೃಶ್ಯರೂಪದಲ್ಲಿರುವುದು. ಒಟ್ಟಿನ ಮೇಲೆ ಗ್ರಂಥವು ಮನೋಹರವಾಗಿದೆ."—ಜಯ ಕರ್ಣಾಟಕ.

**ಬೆಲೆ ಆಣೆ ೦—೬—೦.**

## ಶ್ರೀನಿವಾಸರಚಿತ.

## ೫. ಸಣ್ಣ ಕತೆಗಳು.

"ಕಥೆ ಹೇಳುವ ಸೊಗಸು ಶ್ರೀನಿವಾಸನ ಪ್ರತಿಯೊಂದು ಕಥೆಯ ಪ್ರತಿಯೊಂದು ವಾಕ್ಯದಲ್ಲಿಂಬಂತೆ ತುಂಬಿ ತುಳುಕುತ್ತಿದೆ. ಕಥೆಗಳನ್ನು ಓದುತ್ತಿರುವಾಗ ಅವುಗಳಲ್ಲಿ ಚಿತ್ರಿತವಾದ ಚಿತ್ರಗಳು ರೂಪು ತಾಳಿ ಮನಸ್ಸಿನಮುಂದೆ ಬಂದು ನಲಿದಾಡುವುವು. ಇದೇ ಸಾಹಿತ್ಯ ಸೌರಭ್ಯದ ಪರಮಾವಧಿ. ಸಾಮಾನ್ಯ ಜೀವನಪಥದಲ್ಲಿ ಕೂಡಾ ಸಾಹಿತ್ಯಯೋಗ್ಯವಾದ ಕಥಾವಸ್ತುವಿದೆ. ಅಂತಹ ಸಾಮಾನ್ಯ ಕಥಾವಸ್ತುವನ್ನು ನಿತ್ಯೋಪಯೋಗದ ಸರಳವಾದ ಭಾಷೆಯಲ್ಲಿ ನಿರೂಪಿಸುವುದರಲ್ಲಿ ಕೂಡಾ ಉತ್ಕೃಷ್ಟವಾದ ಸಾಹಿತ್ಯಮಾರ್ಗವಿದೆಯೆಂದು ನಿದರ್ಶಿಸುವುದಕ್ಕೆ ಶ್ರೀನಿವಾಸನ ಕಥೆಗಳೇ ಮೂಲ ಸಾಕ್ಷಿಗಳಾಗಿವೆ..........."
—ಕನ್ನಡ ಸಹಕಾರಿ. **ಬೆಲೆ ಆಣೆ ೦—೮—೦.**

## ೬. ಸಾಹಿತ್ಯ (ಒಂದು ಉಪನ್ಯಾಸ).

"ಈ ಗ್ರಂಥದಲ್ಲಿ, ಪೀಠಿಕೆ ಉಪಸಂಹಾರಗಳನ್ನು ಬಿಟ್ಟರೆ ೧. ಜೀವನಸಾಹಿತ್ಯಗಳ ಪರಸ್ಪರ ಸಂಬಂಧ; ೨. ಸಾಹಿತ್ಯದ ಕಾರ್ಯ; ೩. ಸಾಹಿತ್ಯದಲ್ಲಿರಬೇಕಾದ ಉದ್ದೇಶವೂ ನೀತಿಯೂ; ೪. ಸಾಹಿತ್ಯದ ಸಾಮಗ್ರಿರೂಪಾದಿಗಳು—ಎಂದು ನಾಲ್ಕು ಭಾಗಗಳಿವೆ. ........ಇದು ಶಾಸ್ತ್ರಜಾತಿಗೆ ಸೇರಿ ಸಾಮಾನ್ಯವಾಗಿ ನೀರಸವಾಗಿರಬೇಕಾದ ಗ್ರಂಥಭೇದವಾದರೂ ಇದರಲ್ಲಿ "ಬಿನ್ನಹ," "ಸಣ್ಣ ಕತೆಗಳು" ಮುಂತಾದವುಗಳ ಸುಗಂಧ ಸೌಕುಮಾರ್ಯ, ಸೌಂದರ್ಯಾದಿಗಳು ಅಲ್ಲಲ್ಲಿಯೇ ಕಂಡುಬರುತ್ತವೆ.........ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇಂಥ ಗ್ರಂಥವು ಮೊದಲನೆಯದು.....ಸಾಹಿತ್ಯದಲ್ಲಿ ಅಭಿರುಚಿ ಇರತಕ್ಕ ಎಲ್ಲರೂ ಈ ಗ್ರಂಥವನ್ನು ಓದತಕ್ಕದ್ದಾಗಿದೆ." —ಪ್ರಬುದ್ಧ ಕರ್ಣಾಟಕ.

**ಬೆಲೆ ಆಣೆ ೦—೧೨—೦.**

## ೭. ಅರುಣ.

"ಇದೊಂದು ಬಹು ಸುಲಲಿತ ಶೈಲಿಯ ಸರಸ ಖಂಡಕಾವ್ಯಗಳ ಸಮುಚ್ಚಯ. .......೧೫ ವಿಷಯಗಳನ್ನು ಕುರಿತ ಕವಿತೆಗಳಿರುವುವು.....ಭಾವಗಾಂಭೀರ್ಯವು ಪ್ರಕೃತ ಕೃತಿಯ ಸರ್ವಸ್ವ.........ಇದರೊಳಗಿನ 'ಅಭಿಮನ್ಯು,' 'ಮದಲಿಂಗನ ಕಣಿವೆ,' 'ತ್ಯಾಗಭೋಗ' ಮುಂತಾದ ಕೃತಿಗಳು ಹಲವು ಬಾರಿ ಓದಿದರೂ ಹೊಸಹೊಸವಾಗಿ ತೋರುವುವು. ಆಕಲನ ಮಾಡಿದಂತೆ ಭಾವದ ಆಳವು ಗೋಚರಿಸುತ್ತ ಹೋಗುವುದು."
—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ. **ಬೆಲೆ ಆಣೆ ೦—೮—೦.**

**ಈ ಪುಸ್ತಕಗಳು ದೊರೆಯುವ ಸ್ಥಳಗಳು:—**

(೧) ಮೆ॥ ಎಂ. ಎಸ್. ರಾವ್ ಕಂಪೆನಿ, ಅವೆನ್ಯೂ ರೋಡು,
(೨) ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್,
(೩) ಕರ್ಣಾಟಕ ಪ್ರಕಟನಾಲಯ, ಬಸವನಗುಡಿ,
ಬೆಂಗಳೂರು.